

# ಅಪರಂಜಿ

ತಿಳಿನಗೆಯ ಕಾರಂಜಿ

ಆಗಸ್ಟ್–2024




ಬಿಡಿ ಪ್ರತಿ: ರೂ. 10/–


Ravi Graphics
OFFSET PRINTERS
Bringing colours alive
What we specialize into :
Books
Brochures
Catelogues
Boxes
Mono Cartons
53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com


Bag is everything
bag factory
bagfactory.co.in
Our Promise
100% recyclable paper bags & pouches
Pan-India delivery
Premium customisation for high-street brands
Reach us for your paper bag requirements
+91 89719 95599 | sales@bagfactory.co.in | bagfactory.co.in

# ಅಂದ ಹಾಗೆ...!

ರಾಂಕಿ ಬೆಳ್ಳೂರ್



Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2024
**RNI NO. KAR-KAN/2005/15457**

www.mallige.com

NABH ACCREDITED — PATIENT SAFETY & QUALITY OF CARE

Certificate No.: MC-2068



Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages : 40+4 APARANJI KANNADA MONTHLY.

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 41
ಸಂಚಿಕೆ – 11
ಆಗಸ್ಟ್ – 2024

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ...*

| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಮನೆಕೆಲಸ | ಸುಮನಾ | 5 |
| ಶೈ(ಕ್ಷಣಿಕ) ಪ್ರವಾಸ | ಸುಮವೀಣ | 11 |
| ಕೋಟಿ! ನಿನಗಿಲ್ಲ ಸಾಟಿ! | ಜಿ.ವಿ. ಅರುಣ | 13 |
| ಗಾದೆಗಳು | | 16 |
| ಗುಂಡಿಗಳ ಗಂಡಾಗುಂಡಿ | ಕೆ.ಎಸ್.ಸೋಮೇಶ್ವರ | 18 |
| ಗೆಜ್ಜೆನಾದ | ವಿಲಾಸ ನಾ ಹುದ್ದಾರ | 20 |
| ತುಂತುರು | ದಂನಆ | 23 |
| ಈ ಲೈನು ಈ ಚುಕ್ಕಿ..... | ಎನ್. ರಾಮನಾಥ್ | 24 |
| ಪದಕುಲುಮೆ | ಎನ್.ಎಸ್. ಗಣನಾಥ | 27 |
| ಮೊಬೈಲೋಪಾಖ್ಯಾನ | ಬೇಲೂರು ರಾಮಮೂರ್ತಿ | 28 |
| ನಿಜ ತಾನೇ ನಾನು ಹೇಳೋದು...! | ವಿ.ವಿಜಯೇಂದ್ರ ರಾವ್ | 31 |
| ನೋಡಿದ ಊರಿನ ನೋಡದ ಸ್ಥಳಗಳು | ಕೆ.ಎನ್. ಮಹಾಬಲ | 32 |
| ಪುಸ್ತಕ ಪರಿಚಯ | ಸುಕೇಶವ | 34 |
| ಭಜನೆ | ಭಾಗೀರಥಿ ಹೆಗಡೆ | 35 |
| ವೃಥಾ ಶ್ರಮ | ಅಕ್ರೂರ | 39 |

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ,
ಒಳಪುಟಗಳು : ರಾಂಕಿ ಬೆಳ್ಳೂರ್,

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

ಪರಿಶಿಷ್ಟರ "ನಿಧಿ"ಗೆ ಕನ್ನ !!

ಪತ್ರಿಕೆ

ಕನ್ನಡ ಮಾತೆ ಕಂಬನಿ ಸುರಿಸಿದಳಂತೆ !!

* * *

ಪಾಂಟಿಂಗ್ ಕೈ ಬಿಟ್ಟ ದೆಹಲಿ ಕ್ಯಾಪಿಟಲ್ಸ್

ಕ್ರೀಡಾಸುದ್ದಿ

ಆತನೂ ನೋ ಪಾಯಿಂಟಿಂಗ್ ಅಂತ ಬಿಡಲು ಒಪ್ಪಿದನಂತೆ !!

* * *

"ಉಪ ಚುನಾವಣೆ; ಇಂಡಿಯಾ ಜಯಭೇರಿ"

"ಎನ್.ಡಿ.ಎ ದಿಂದ ಮಾತ್ರ ಸ್ಥಿರತೆ ಸಾಧ್ಯ"

ಮಾನ್ಯ ಪ್ರಧಾನಿಗಳು

ದಿನ ಪತ್ರಿಕೆಯಲ್ಲಿ ಒಂದೇ ಪುಟದಲ್ಲಿ ಒಂದರ ಕೆಳಗೆ, ಎರಡೂ ಶೀರ್ಷಿಕೆಗಳು !!

* * *

ಝೂಲನ್ ಗೋಸ್ವಾಮಿ ಅವರನ್ನು ಕೆರಿಬಿಯನ್ ಮಹಿಳಾ ಟೀಮ್‌ಗೆ ಕೋಚ್ ಆಗಿ ನೇಮಕ

ಪತ್ರಿಕೆ

ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲ ಬರಲಿ ಅಂತ ಅಪರಂಜಿ ನಕ್ಕಳಂತೆ !!

* * *

ಭಾರತದ ಕ್ರಿಕೆಟ್ ಆಟಗಾರರರು ಇನ್ನು ಮೇಲೆ ಗಂಭೀರವಾಗಿ ಇರಲು ಪ್ರಯತ್ನಿಸುತ್ತಾರೆ ಎಂಬುದು ಶುದ್ಧ ಕುಹಕ !!

* * *

"ನಮಉತ್ಪನ್ನಗಳಿಂದ ಅಡ್ಡ ಪರಿಣಾಮಗಳು ಇರುಲ್ಲ"

ಪತಂಜಲಿ

ಪರಿಣಾಮವೇ ಇಲ್ಲದ ಮೇಲೆ ಅಡ್ಡ ಎಲ್ಲಿಂದ ಬರುತ್ತೆ ?!!

* * *

"ಬೆಂಗಳೂರು ದಕ್ಷಿಣ; ಡಿ ಕೆ ಶಿ

ಸುದ್ದಿ

ಇದಕ್ಕೆ ಸರಿಯಾದ ಉತ್ತರ ಕೊಡಲೇ ಬೇಕು !!

* * *

## ನಮ್ಮ ನಿಮ್ಮಲ್ಲಿ

**ಶಿವಕುಮಾರ್**

ನಿಮಗೊಂದು ಜನರಲ್ ನಾಲೆಡ್ಜ್ ಕ್ವಿಜ್. ಜೆ.ಡಬ್ಲ್ಯೂ. ಎಸ್. ಟಿ. ಅಂದರೇನು? ನಾರ್ಲೀಕರ್ ಎಂದರೆ ಯಾರು? ಇವೆರಡಕ್ಕೂ ಏನಾದರೂ ಸಂಬಂಧ ಇದೆಯೇ? ಈ ಪ್ರಶ್ನೆಗಳಿಗೆ ನಿಮಗೆ ಉತ್ತರ ಗೊತ್ತಿರಲಿ, ಬಿಡಲಿ, ಹಿಂದೆ ನನಗಾದ ಒಂದು ಅನುಭವ ಈ ಎಲ್ಲ ಪ್ರಶ್ನೆಗಳಿಗೂ ಸಂಬಂಧ ಕಲ್ಪಿಸುವಂತಹದಾಗಿತ್ತು. ಆ ಪ್ರಸಂಗವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಪ್ರಯತ್ನವಿದು.

ಮೊದಲಿಗೆ ಜಯಂತ್ ನಾರ್ಲೀಕರ್ ಒಬ್ಬ ಖ್ಯಾತ ಅಸ್ಟ್ರೋ ಫಿಸಿಸಿಸ್ಟ್. ಅರುವತ್ತರ ದಶಕದಲ್ಲಿ ಇವರು, ಇಂಗ್ಲೆಂಡಿನ ಸುಪ್ರಸಿದ್ಧ ಭೌತ ಶಾಸ್ತ್ರಜ್ಞ ಫ್ರೆಡ್ ಹಾಯ್ಲ್ ಅವರೊಂದಿಗೆ ಸಹಾಯಕ ವಿಜ್ಞಾನಿಯಾಗಿ ಕೆಲಸಮಾಡಿದ್ದರು. ಇವರಿಬ್ಬರೂ ಸೇರಿ ಜಗತ್ತಿನ ಉಗಮದ ಬಗ್ಗೆ ಒಂದು ಥಿಯರಿಯನ್ನು ಮಂಡಿಸಿದ್ದರು. ಅದರ ಹೆಸರು "ಸ್ಟೆಡಿ ಸ್ಟೇಟ್ ಥಿಯರಿ". ಈ ಥಿಯರಿಯನ್ನು ಸರಳವಾಗಿ ಹೇಳುವುದಾದರೆ, ಇವರುಗಳ ಪ್ರಕಾರ ಜಗತ್ತಿಗೆ ಆದಿ ಎಂಬುದೇ ಇಲ್ಲ. ಅದು ಅನಾದಿ. ಹೊಸ ನಕ್ಷತ್ರಗಳು ಹುಟ್ಟುತ್ತಿದ್ದಂತೆ, ಹಳೆಯವು ನಾಶವಾಗುತ್ತಿರುವುದರಿಂದ ಜಗತ್ತಿನಲ್ಲಿರುವ ನಕ್ಷತ್ರಗಳ ಸಂಖ್ಯೆ ಒಂದೇ ಸಮತೋಲನವನ್ನು ಪಡೆದಿರುತ್ತದೆ, ಎಂಬ ಈ ವಾದವನ್ನು ಅಂಕಿ ಸಂಖ್ಯೆಗಳ ಮೂಲಕ ಪ್ರಸ್ತಾಪಿಸಿದರು. ಸಮತೋಲನದ ದೆಸೆಯಿಂದ ಅ ಥಿಯರಿಯನ್ನು ಸ್ಟೆಡಿ ಸ್ಟೇಟ್ ಥಿಯರಿ ಎಂದು ಕರೆದರು. ಅರುವತ್ತರ ದಶಕದ ಕೊನೆಯ ಹೊತ್ತಿಗೆ ಗ್ಯಾಮೋ ಎಂಬ ಒಬ್ಬ ರಷ್ಯನ್ ವಿಜ್ಞಾನಿ, ಈ ಬಗೆಯಲ್ಲಿ ಜಗತ್ತು ಒಂದೇ ಸಮತೋಲನದಲ್ಲಿರುವುದು ಸಾಧ್ಯವೇ ಇಲ್ಲ. ಇದು ಸದಾ ದೊಡ್ಡದಾಗುತ್ತಲೇ ಹೋಗುತ್ತಿದೆ. ತುಂಬ ಹಿಂದೆ ಒಂದು ಮಹಾ ಸ್ಫೋಟವಾಗಿ ಜಗತ್ತು ಪ್ರಾರಂಭವಾಯಿತು, ಎಂಬ ಹೊಸ ಥಿಯರಿಯನ್ನು ಹರಿಯಬಿಟ್ಟ. ಈ ವಿನೂತನ ಥಿಯರಿಯನ್ನು ಗೇಲಿಮಾಡುವ ರೀತಿಯಲ್ಲಿ, ಫ್ರೆಡ್ ಹಾಯ್ಲ್, "ಓಹೋ, ಗ್ಯಾಮೋ ಪ್ರಕಾರ ಒಂದು ಬಿಗ್ ಬ್ಯಾಂಗ್ ಜಗತ್ತಿಗೆ ಕಾರಣವಂತೇ" ಅಂತ ತಮಾಷೆ ಮಾಡಿದ್ದ. ಆದರೆ, ಹಾಯ್ಲ್‌ನ ದುರಾದೃಷ್ಟ. ಮುಂದೆ ನಡೆದ ಎಲ್ಲ ವೈಜ್ಞಾನಿಕ ಸಂಶೋಧನೆಗಳೂ ಬಿಗ್ ಬ್ಯಾಂಗ್ ಥಿಯರಿಯನ್ನೇ ಸಮರ್ಥಿಸಿದವು. ಹಾಯ್ಲ್ ನಾರ್ಲೀಕರ್ ಥಿಯರಿ ಮೂಲೆ ಗುಂಪಾಯಿತು. ಒಂದು ಮಹಾಸ್ಫೋಟದಿಂದಲೇ ಜಗತ್ತಿನ ಉಗಮ ಎಂಬ ಥಿಯರಿ ವೈಜ್ಞಾನಿಕ ಸತ್ಯವೆಂದು ವಿಜ್ಞಾನಿಗಳೆಲ್ಲಾ ಒಪ್ಪಿಕೊಂಡರು. ನಾರ್ಲೀಕರ್, ಎಪ್ಪತ್ತರ ದಶಕದಲ್ಲಿ ಪುಣೆಗೆ ಹಿಂತಿರುಗಿದರು. 2003 ರಲ್ಲಿ ಇವರು ನಿವೃತ್ತರಾದರು.

2011 ರಲ್ಲಿ ನಾನು ತಾಂತ್ರಿಕ ಸಲಹೆಗಾರನಾಗಿ ಕೆಲಸ ಮಾಡುತ್ತಿದ್ದ ಅಗಸ್ತ್ಯ ಸಂಸ್ಥೆಯವರು ನನ್ನನ್ನು ಕರೆದು, ಒಬ್ಬ ಪ್ರತಿಷ್ಠಿತ ವಿಜ್ಞಾನಿಯೊಬ್ಬರು ನಮ್ಮ ಕುಪ್ಪಮ್ ಕ್ಯಾಂಪಸ್ ನೋಡಲು ಬರುತ್ತಾರೆ. ನೀನು ಅವರನ್ನು ಬೆಂಗಳೂರಿನಿಂದ ಕುಪ್ಪಮ್‌ಗೆ ಕರೆದುಕೊಂಡುಹೋಗಿ ಮಾರನೆಯ ದಿನ ಅವರನ್ನು ಹಿಂದಕ್ಕೆ ಕರೆತರಬೇಕು ಅಂತ ವಿನಂತಿಸಿದರು. ಯಾರವರು ಎಂದು ವಿಚಾರಿಸಿದಾಗ ಅದು ನಾರ್ಲೀಕರ್ ದಂಪತಿಗಳೆಂದು ತಿಳಿಯಿತು.

ನನಗಂತೂ ಸ್ವರ್ಗಕ್ಕೆ ಮೂರೇ ಗೇಣು. ಬಹು ಉತ್ಸಾಹದಿಂದ ಜಯಂತ್ ಮತ್ತು ಮಂಗಳಾ ದಂಪತಿಗಳನ್ನು ಕಾರಿನಲ್ಲಿ ಕುಳ್ಳಿರಿಸಿಕೊಂಡು ಕುಪ್ಪಮ್‌ಗೆ ಪಯಣಿಸಿದೆ.

ಅವರೊಂದಿಗೆ ಕಳೆದ ಇಪ್ಪತ್ತನಾಲ್ಕು ಘಂಟೆಗಳು ಇಪ್ಪತ್ತನಾಲ್ಕು ನಿಮಿಷಗಳಂತೆ

ಸರಿದುಹೋದವು. ನಾರ್ಲೀಕರ್ ದಂಪತಿಗಳ ವಿನಯವಂತ, ಸ್ನೇಹಶೀಲ ನಡೆವಳಿಕೆ ನಿಜಕ್ಕೂ ಅನುಕರಣೀಯ. ಇಡೀ ದಿನ ನಮ್ಮ ಕ್ಯಾಂಪಸ್ ತೋರಿಸಿದ ನಂತರ, ಆ ಸಂಜೆ, ಒಬೆರಾಯ್ ಸೆಂಟರಿನ ಹುಲ್ಲು ಹಾಸಿನ ಮೇಲಿರಿಸಿದ ಬೆತ್ತದ ಕುರ್ಚಿಗಳ ಮೇಲೆ ಕುಳಿತು ಹರಟುತ್ತಿದ್ದೆವು. ನಾರ್ಲೀಕರ್ ತಮ್ಮ ಇಂಗ್ಲೆಂಡ್ ದಿನಗಳ ಬಗ್ಗೆ ಹೇಳಿದ ಒಂದೆರಡು ಪ್ರಸಂಗಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವೆ. ಒಮ್ಮೆ ಜಯಂತ್, ಹಾಯ್ಲ್ ಅವರೊಂದಿಗೆ ಯಾವುದೋ ಒಂದು ಕಾನ್ಫರೆನ್ಸ್ ಪ್ರಯುಕ್ತ ಲಾಸ್ ಏಂಜಲೀಸ್‌ಗೆ ಹೋಗಿದ್ದರಂತೆ. ಅಲ್ಲಿ ಒಂದು ಆಕ್ವೇರಿಯಮ್ ನೋಡಲು ಹೋಗಿದ್ದಾಗ, ಅಲ್ಲಿನ ಒಂದು ಆವರಣದಲ್ಲಿ ದೊಡ್ಡ ಮೀನುಗಳು ಹಾಗೂ ಸಣ್ಣ ಮೀನುಗಳು ಸಹಬಾಳುವೆ ಮಾಡುತ್ತಾ ಶಾಂತವಾಗಿ ಈಸುತ್ತಿದ್ದವಂತೆ. ಅದನ್ನು ನೋಡಿ ಹಾಯ್ಲ್, "ವೆಲ್ಫೇರ್ ಸಮಾಜದ ಅಪಾಯ ಎಂದರೆ ಇದೇ" ಅಂತ ನಗಾಡಿದರಂತೆ. "ಅದರಲ್ಲೇನು ತಮಾಷೆ?" ಅಂತ ನಾನು ಕೇಳಿದೆ. "ಆಕ್ವೇರಿಯಮ್ಮಿನಲ್ಲಿ ಎಲ್ಲ ಮೀನುಗಳಿಗೂ ಪುಷ್ಕಳವಾಗಿ ಆಹಾರ ಸಿಗುತ್ತೆ. ಅದಕ್ಕೆ ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ತಿನ್ನದೇ ಸೋಮಾರಿತನದಿಂದ ಓಡಾಡಿಕೊಂಡಿವೆ. ಈಗ ನಮ್ಮ ದೇಶದಲ್ಲಿ ಕೊಡುತ್ತರೋ ಸಬ್ಸಿಡಿ, ಫ್ರೀಬಿ ಇವುಗಳಿಂದ ಜನಗಳ ಸೋಮಾರಿತನ ಹೆಚ್ಚುತ್ತಿರುವುದನ್ನು ನೋಡ್ತಾ ಇಲ್ವೇ" ಅಂತ ನಕ್ಕರು.

ಇನ್ನೊಮ್ಮೆ ಜಯಂತ್ ಅವರು ಡಿ.ಎನ್.ಎ ಸ್ಟ್ರಕ್ಚರ್ ಕಂಡುಹಿಡಿದ ವಿಜ್ಞಾನಿ ಫ್ರಾನ್ಸಿಸ್ ಕ್ರಿಕ್ ರವರೊಂದಿಗೆ ವಿಮಾನದಲ್ಲಿ ಅಮೆರಿಕೆಗೆ ಪಯಣಿಸುತ್ತಿದ್ದರಂತೆ. ಆಗ ಕ್ರಿಕ್ ಇವರನ್ನು ಕುರಿತು, "ಕಾಸ್ಮಾಲಜಿ ಬಗ್ಗೆ ನೀನು ಇದಿರಿಸಿರುವ ಕ್ಲಿಷ್ಟ ಸಮಸ್ಯೆಯೊಂದನ್ನು ನನಗೆ ತಿಳಿಸಿದರೆ, ನಾನು ನಮ್ಮ ಎವೊಲ್ಯೂಷನರಿ ಬಯಾಲಜಿಯಲ್ಲಿನ ಕ್ಲಿಷ್ಟ ಒಗಟಾಗಿರುವ ವಿಷಯವೊಂದನ್ನು ನಿನ್ನೊಂದಿಗೆ ಹಂಚಿಕೊಳ್ಳುವೆ." ಎಂದನಂತರ ಇಬ್ಬರೂ ತಮ್ಮ ತಮ್ಮ ಸಮಸ್ಯೆಗಳನ್ನು ಬೇರೆ ದೃಷ್ಟಿಕೋನದಿಂದ ನೋಡಲು ಸಾಧ್ಯವಾಗಿ ಪಯಣ ಮುಗಿಸುವ ಹೊತ್ತಿಗೆ ಸಮಸ್ಯೆಗಳ ಪರಿಹಾರದ ರೂಪುರೇಷೆಗಳು ಗೋಚರವಾಗ ತೊಡಗಿದವಂತೆ.

ಜೆ.ಡಬ್ಲ್ಯೂ.ಎಸ್.ಟಿ. ಏನು ಅಂತ ಕೇಳಿದಿರಾ? ಅದೇರೀ, ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್. ಜಗತ್ತಿನ ಅತ್ಯಂತ ಶಕ್ತಿಯುತ ದೂರ ದರ್ಶಕ ಇದು. ಹದಿಮೂರು ಬಿಲಿಯನ್ ವರ್ಷಗಳ ಹಿಂದಿನ ಜಗತ್ತು ಹೇಗಿತ್ತೆಂಬುದನ್ನು ಈ ಉಪಕರಣದ ಸಹಾಯದಿಂದ ನೋಡಲು ಸಾಧ್ಯ.

ಇದಕ್ಕೂ ನಾರ್ಲೀಕರ್ಗೂ ಏನು ಸಂಬಂಧ ಅಂತ ಪ್ರಶ್ನಿಸ್ತೀರಾ? ಅದನ್ನೇ ಹೇಳುಕ್ಕೆ ಹೊರಟಿದ್ದೆ. ಬಿಗ್ ಬ್ಯಾಂಗ್ ಆಗಿದ್ದು ಸುಮಾರು ಹದಿಮೂರು ಬಿಲಿಯನ್ ವರ್ಷಗಳಷ್ಟು ಹಿಂದೆ. ಮೊನ್ನೆ ಈ ಟೆಲಿಸ್ಕೋಪು ಬಿಗ್ ಬ್ಯಾಂಗ್ ಆಗಿ ಸುಮಾರು ಮುನ್ನೂರು ಮಿಲಿಯನ್ ವರ್ಷಗಳ ನಂತರ ಇದ್ದ ಗ್ಯಾಲಾಕ್ಸಿಯೊಂದನ್ನು ಪತ್ತೆ ಹಚ್ಚಿ, ವಿಜ್ಞಾನ ಪ್ರಪಂಚವನ್ನೇ ಅಲ್ಲೋಲ ಕಲ್ಲೋಲ ಮಾಡಿಬಿಟ್ಟಿದೆಯಂತೆ.

ಅರ್ಥವಾಗಲಿಲ್ಲವೇ. ಆ ಗ್ಯಾಲೆಕ್ಸಿಯ ವಯಸ್ಸು ಮಿನಿಮಮ್ ಮೂರು ಬಿಲಿಯನ್ ವರ್ಷಗಳಾದರೂ ಅಗಿರಬೇಕು ಎಂದು ವಿಜ್ಞಾನಿಗಳ ಅಂದಾಜು. ಅಂದರೆ ಜಗತ್ತಿನ ಉಗಮ ಘಟನೆ ಎಂದು ನಂಬಿರುವ ಮಹಾಸ್ಫೋಟಕ್ಕೆ ಎರಡೂವರೆ ಬಿಲಿಯನ್ ವರ್ಷಗಳಷ್ಟು ಹಿಂದೆಯೇ ಈ ಗ್ಯಾಲೆಕ್ಸಿ ಹುಟ್ಟಿರಬೇಕು. ಹಾಗೆ ಅದು ಹುಟ್ಟಿರಬೇಕಾದರೆ ಸ್ಟೆಡಿ ಸ್ಟೇಟ್ ಥಿಯರಿ ನಿಜವಾದ್ರೆ ಮಾತ್ರ ಸಾಧ್ಯ ಅಲ್ವೇನ್ರೀ ?

●

# ಮನೆಕೆಲಸ

ಸುಮನ

ಮನೆಕೆಲಸಕ್ಕೆ ಅಂತ ಮೂರ್ನಾಲ್ಕು ಕೆಲಸದವರು ಬಂದರೂ, ಯಾಕೋ ಯಾರೂ ಸರಿ ಹೋಗ್ತಾ ಇರಲಿಲ್ಲ ವನಿತಳಿಗೆ..ಗೆಳತಿಯರಿಗೆ ಹೇಳಿ, ಅವರದೇ ವಾಟ್ಸ್ ಯಾಪ್ ಗ್ರೂಪ್ ನಲ್ಲೂ ಮೆಸೇಜ್ ಹಾಕಿದ್ಲು..

ರೀನಾ ಒಬ್ಬಳ ಹೆಸರು ಹೇಳಿ, "ಇವತ್ತು ಬೆಳಿಗ್ಗೆ ಎಂಟು ಘಂಟೆಗೆ ನಿಮ್ಮ ಮನೆಗೆ ಶಾಂತಿ ಅಂತ ಒಬ್ಬಳು ಬರ್ತಾಳೆ, ನೋಡಿ ಮಾತಾಡು.. ಕೆಲಸ ಚೆನ್ನಾಗಿ ಮಾಡ್ತಾಳೆ, ಆದ್ರೆ ಸ್ವಲ್ಪ ಬಾಯಿ ಜಾಸ್ತಿ, ಬಾಯಾಡಿ", ಅಂದಿದ್ಲು. "ಓ.ಕೆ. ಆಯ್ತಮ್ಮ, ನಂಗೆ ಅರ್ಜೆಂಟಾಗಿ ಕೆಲಸದವಳು ಬೇಕಾಗಿದ್ದಾಳೆ" ಅಂತ ಶಾಂತಿ ಬರೋದನ್ನ ಎದುರು ನೋಡ್ತಿದ್ಲು ವನಿತ.. ಅವಳು ಬರೋದ್ರೊಳಗೆ ನಿಂಬೆರಸ ಹಾಕಿದ ಹಸಿಚಟ್ನಿಗೆ ರೆಡಿ ಮಾಡ್ತಿದ್ದಂತೆ ಬಾಗಿಲ ಬೆಲ್ ಆಯ್ತು..

ಬಾಗಿಲು ತೆಗೆದಾಗ ಸ್ವಲ್ಪ ಕುಳ್ಳು ಎನಿಸುವಂಥ, ಎಣ್ಣೆಗೆಂಪು ಬಣ್ಣದ ಮಧ್ಯ ವಯಸ್ಸಿನ, ಮಹಿಳೆ, ತಲೆಕೂದಲು ಮೇಲಕ್ಕೆತ್ತಿ ತುರುಬು ಕಟ್ಟಿ, ಸ್ವಚ್ಛ ಬಟ್ಟೆಗಳನ್ನು ಧರಿಸಿ, ಕೈನಲ್ಲಿ ಒಂದು ಪರ್ಸು, ಜೊತೆಗೆ ಮೊಬೈಲ್ ಹಿಡಿದು ಬಾಗಿಲಿನಲ್ಲಿ ನಿಂತಿದ್ದಳು., "ಅಮ್ಮ.., ನಿಮ್ಮ ಫ್ರೆಂಡ್ ಹೇಳಿ ಕಳಿಸಿದ್ದಾರೆ"

ಅಂದಾಗ, "ಹೌದು.. ನಮ್ಮ ಮನೇಲಿ ಎರಡೇ ಕೆಲಸ; ಗುಡಿಸಿ, ಒರೆಸಿ, ಪಾತ್ರೆ... ಅಷ್ಟೇ, ಬಾತ್ರೂಂ ಏನಾದ್ರೂ ಕ್ಲೀನ್ ಮಾಡ್ತೀಯಾ?" ಅಂತ ಕೇಳಿದ ತಕ್ಷಣ ಶಾಕ್ ಹೊಡೆದವಳಂತೆ, ಏನೋ ಕೇಳಬಾರದ್ದು ಕೇಳಿದಂತೆ, "ಅಯ್ಯೋ ಶಿವನೇ, ಇಲ್ಲಪಾ, ಇಲ್ಲ., ನಾನು ಆ ಕೆಲಸ ಎಲ್ಲಾ ಮಾಡೋಲ್ಲ" ,ಅಂದ್ಲು. ಸ್ವಲ್ಪ ಆಶ್ಚರ್ಯ ವೆನಿಸಿತು ವನಿತಳಿಗೆ., ಈಚಿನ ಕೆಲಸಗಾರರು ಕೆಲವರು ಹಣ ಜಾಸ್ತಿ ಡಿಮಾಂಡ್ ಮಾಡಿ ಬಾತ್ರೂಂ ಕೆಲಸಾನೂ ಮಾಡ್ತಿದ್ರು.

"ಓ.ಕೆ. ಎಷ್ಟು ಮನೇಲಿ ಕೆಲಸ ಮಾಡ್ತೀಯಾ?" ಅಂದಾಗ,

"ಅಮ್ಮ ನಾನು ನಾಲ್ಕು ಮನೆ ಕೆಲಸ ಮಾಡ್ತೀನಿ, ಬೆಳಗ್ಗೆ ಮೂರು ಮನೆ ಮುಗಿಸಿ ಬರ್ತೀನಿ", ಅಂದಳು.

"ಸರಿಯಾಗಿ ಹತ್ತೂವರೆಗೆ ಬರಬೇಕು. ಲೇಟ್ ಆಗೋದಾದ್ರೆ ಮೊದಲೇ ಹೇಳಬೇಕು ಗೊತ್ತಾಯ್ತಾ?"

ಅಂದಾಗ, "ಹ್ಞೂ.. ಆಯ್ತಮ್ಮ.. ಹತ್ತು ಘಂಟೆಯಿಂದ ಹನ್ನೊಂದೂವರೆ ಒಳಗೆ ಬಂದು ಬಿಡ್ತೀನಿ, ಆ ಟೈಂ ಫಿಕ್ಸ್ ಮಾಡ್ಕೊಳಿ", ಅಂದಾಗ ಮನೇವ್ರಿಗೆಲ್ಲಾ ನಗು ತಡೀಲಾಗಲಿಲ್ಲ, ಅಲ್ಲ, ಹತ್ತರಿಂದ ಹನ್ನೊಂದೂವರೆ ಟೈಂ ಫಿಕ್ಸ್ ಅಂದ್ರೇ ಏನರ್ಥ? ಯಾವರೇಜ್ ಏನು ಅಂತ ತೊಗೋಬೇಕೋ ಗೊತ್ತಾಗಲಿಲ್ಲ., ಸರಿ, ಮೂರ್ನಾಲ್ಕು ದಿನ ಅವಳ ಕೆಲಸ ನೋಡಿ ಕಂಟಿನ್ಯೂ ಮಾಡೋದೋ ಬಿಡೋದೋ ನೋಡೋಣ ಅಂದುಕೊಂಡಳು ವನಿತ..

ಬೆಳಗ್ಗೆ ಬಂದು ಕೆಲಸ ಶುರು ಮಾಡಿದ್ಲು.. ಅವಳು ಬರೋ ಹೊತ್ತಿಗೆ ಅಡಿಗೆ, ತಿಂಡಿ ಎಲ್ಲಾ ಮಾಡಿ ಯಾಗಿತ್ತು. ಪಾತ್ರೆಗಳನ್ನು ನೋಡಿ ಅವಳು "ಏನು? ಇಷ್ಟೊಂದು ಪಾತ್ರೇನಾ?, ನಾನು ಕಸ ಗುಡಿಸಿ ಬರೋದ್ರೊಳಗೆ ಸ್ವಲ್ಪ ತೆಗೆದಿಡಿ", ಅಂದದ್ದಲ್ಲದೆ ಮತ್ತೆ

ಬಂದು ನೋಡಿ "ಇನ್ನೂ ತೆಗೀಲಿಲ್ವಾ?" ಅಂತ ಜೋರು ಮಾಡಿದ್ದು ನೋಡಿ ಮಕ್ಕಳಿಗೆ ಕೋಪ ಬಂತು., "ಅಲ್ಲಮ್ಮ, ಅದೇನು ಅಷ್ಟು ಬಾಯಿ ಮಾಡೋದು ಅವಳು!, ಬೇಡಾ ಅಂತ ಹೇಳಿಬಿಡು" ಅಂದ್ರು. ತುಂಬ ದಿನಗಳಿಂದ ಕೆಲಸದವರಾರೂ ಸಿಗದೆ ಈಗ ಇವಳು ಸಿಕ್ಕಿದ್ರಿಂದ, ತಕ್ಷಣ ಬೇಡಾ ಅನ್ನೋದೂ ಕಷ್ಟ ವಾಗಿತ್ತು. "ಇವತ್ತು ಒಂದು ದಿನ ಈ ಪಾತ್ರೆಗಳನ್ನು ತೊಳೆಯಮ್ಮ, ನಾಳೆಯಿಂದ ನೋಡೋಣ" ಅಂದ್ರು ಅಮ್ಮ..

"..ಹೊಸದರಲ್ಲಿ ಅಗಸ ಗೋಣಿ ಎತ್ತಿ ಒಗೆದಂತೆ ಚೆನ್ನಾಗಿ ಕೆಲಸ ಮಾಡಿದ್ಲು., ಮುಂದೆ ಮತ್ತೆರಡು ದಿನದಲ್ಲಿ ಅವಳು ಬಂದು.. ಬಾಗಿಲು ಬಡಿದು, ಬೆಲ್ ಮಾಡಿದಾಗ ಅಮ್ಮ ಬಾಗಿಲು ತೆಗೆಯೋದು ಕೆಲವೇ ಕ್ಷಣ ತಡವಾಯ್ತು. ಬಾಗಿಲು ತೆಗೆದಾಕ್ಷಣ.., "ಎಷ್ಟು ಹೊತ್ತು ಮಾಡ್ತೀರಿ, ಎಷ್ಟು ಹೊತ್ತು ಅಂತ ವೇಯ್ಟ್ ಮಾಡ್ಬೇಕು!" ಸಿಡುಕಿದಂತೆ ಅಂದದ್ದು ಕೇಳಿ ಅಮ್ಮಂಗೆ ಶಾಕ್ ಆಯ್ತು., "ಹ್ಞೂ... ಹೌದು, ಒಳಗೆ ಕೆಲಸದಲ್ಲಿದ್ದೆ., ಅದ್ಯಾಕೆ ಹಾಗೆ ಕೇಳ್ತೀಯ?" ಅಂದ್ರು. ಕುಂಬಳಕಾಯಂತೆ ಮುಖ ಊದಿಸಿಕೊಂಡು ಕೆಲಸ ಮಾಡಿದ್ಲು. ಕೆಲಸಕ್ಕೆ ಅಂತ ಅವಳನ್ನು ಇಟ್ಟ ಮೇಲೆ, ನಿರಾಳವೆನ್ನುವುದು ಮರೀಚಿಕೆ ಆಯ್ತು., ಅವಳು ಬಂದು ಹೋಗೋ ತನ್ಕ ಅವಳನ್ನು ಅಟೆಂಡ್ ಮಾಡ್ತಾ, 'ಅಮ್ಮ, ..ಗಾಳಿ ಬರ್ತಿದೆ ಫ್ಯಾನ್ ಆಫ್ ಮಾಡಿ', 'ಬಾಗಿಲು ಹಾಕಿ', 'ಸೋಫಾ ಜರುಗಿಸಿ', ಅನ್ನೋದು, ಅವಳ ಫೋನ್ ರಿಂಗ್ ಆದಾಗ 'ಅಮ್ಮ ಸ್ವಲ್ಪ ನೋಡಿ, ಯಾರು ಮಾಡಿದಾರೋ...' ಅಂದಾಗ ಅಮ್ಮ ನೋಡಿ ಹೇಳೋದು, ಅವಳಿಗೆ ಕೈ ನೋವು ಅಂತ ಬಾಲ್ಕನಿಯಲ್ಲಿ ನೀರು ಹಾಕಲು ಮಂಡಿ ಆಪರೇಷನ್ ಆಗಿದ್ದ ವಯಸ್ಸಾದ ಅಮ್ಮ ನಿಧಾನವಾಗಿ ಅರ್ಧರ್ಧ ಬಕೀಟ್ ನೀರು ಹೊತ್ತು ಅವಳಿಗೆ ಸಹಾಯ ಮಾಡ್ತಾ ಅಸಿಸ್ಟೆಂಟ್ ಪಾತ್ರ ಮಾಡಬೇಕಿತ್ತು.. ಯಾರು ಕೆಲಸದವ್ರೋ, ಯಾರು ಮನೆಯವ್ರೋ ಅಂತ ಒಮ್ಮೊಮ್ಮೆ ಅನುಮಾನವೂ ಬರೋ ಹಾಗಿತ್ತು ಇವಳ ಕಾರ್ಯ ವೈಖರಿ.



ಒಮ್ಮೆ ಕಸ ಗುಡಿಸ್ತಾ ಅಮ್ಮ ಗಮನಿಸುತ್ತಿದುದನ್ನು ನೋಡಿದ ಅವಳು, ಇದ್ದಕ್ಕಿದ್ದಂತೆ ತನ್ನಷ್ಟಕ್ಕೇ ಎಂಬಂತೆ, .. "ಆ ಮೂರ್ನೇ ಫ್ಲೋರ್ ಮನೇವ್ರು ನನ್ನತ್ರ ಮನೆ ಬೀಗದಕ್ಕೈ ಕೊಟ್ಟು ಹೋಗ್ತಾರೆ, ನನ್ಗೆ ಟೈಂ ಆದಾಗ ಹೋಗಿ ಕೆಲಸ ಮಾಡ್ತೀನಿ, ಅಷ್ಟು ನಂಬಿಕೆ ನನ್ನ ಮೇಲೆ, ನೀವು ನನ್ನ ಮೇಲೆ ಅನುಮಾನಿಸಿ ನೋಡಿದ್ರೆ ನಂಗೆ ಕಷ್ಟ ಆಗುತ್ತೆ"

ಅಂದಳು., ಅಮ್ಮನಿಗೆ ಮತ್ತೆ ಶಾಕ್!, "ಅಯ್ಯೋ ಇದೇನು ಹೀಗೂ ಮಾತಾಡ್ತಾರಾ? ಹಿಂದೆ ಕೆಲಸ ಮಾಡ್ತಿದ್ದವ್ರು ಇಷ್ಟು ಧಿಮಾಕಿರಲಿಲ್ಲ" ಅಂತ ಅಮ್ಮನೂ ಜೋರು ಮಾಡಿದ್ರು;,

“ನೋಡೂ, ನಮ್ಮ ಮನೇಲಿ ಹೀಗೇ ಇರೋದು. ನಿಂಗೆ ಇಷ್ಟ ಇದ್ರೆ ಕೆಲಸ ಮಾಡು, ಇಲ್ದಿದ್ರೆ ಈ ವಾರದ ಸಂಬಳ ತೊಗೊಂಡು ಹೊರ್ಡು” ಅಂದಾಗ ಸೈಲೆಂಟ್ ಆದ್ಲು.. ಯಾಕೋ ಇವಳು ಬಂದ್ಮೇಲೆ.. ಮನೇಲಿ ಶಾಂತೀನೇ ಇಲ್ದಂತಾಯ್ತು ಅನಿಸಿತು. ಹೆಸರು ಶಾಂತಿ ಆದ್ರೂ, ಬರೀ ಅಶಾಂತಿ ಪರ್ವಾನೇ, ಇವಳು ಬರ್ತಾಳೆ ಅಂತ ಮನೆಯವ್ರೆಲ್ಲಾ ಬೇಗ, ಬೇಗ ಎದ್ದು ಅವರವರ ಕೆಲಸ ಮಾಡ್ಕೊಳ್ಳೋಕ್ಕೆ ಶುರು ಮಾಡಿದ್ರು. ಅದೊಂದು ದೊಡ್ಡ ಬದಲಾವಣೆಯಂತೂ ಆಗಿತ್ತು., “ಅಯ್ಯೋ ಆ ಶಾಂತಿ ಮೇಡಂ ಬರೋ ಹೊತ್ತಿಗೆ ನಾವು ಏಳದೇ ಇದ್ರೇ ಅವಳ ಗಡಿಬಿಡಿಯಲ್ಲಿ ಕಸದ ಜೊತೆಗೇ ನಮ್ಮನ್ನೂ ಗುಡಿಸಿ ಎಸೆದು ಬಿಡ್ತಾಳೆ” ಅಂತ ಮನೆ ಮಕ್ಕಳಿಂದ ಹಾಸ್ಯ ಬೇರೆ.

ಅವಳಿಗೆ ಪಾತ್ರೆ ಜಾಸ್ತಿ ಆಗಬಾರದೆಂದು ಎಲ್ಲರೂ ಅವರವರ ತಿಂಡಿ, ಊಟದ ತಟ್ಟೆಗಳನ್ನು ತೊಳೆಯುವ ಒಳ್ಳೆಯ ಅಭ್ಯಾಸ ಶುರುವಾಗಿತ್ತು..

ಅಮ್ಮ, ಎಣಿಸಿದಂತೆ ಪಾತ್ರೆ ಹಾಕೋದು, ‘ಅಯ್ಯೋ ಅವಳಿಗೆ ಇಷ್ಟು ಪಾತ್ರೆ ಜಾಸ್ತಿ ಆಗುತ್ತೇನೋ...’ ಅಂತ ಅಮ್ಮನೇ ಕೆಲವು ಪಾತ್ರೆ ತೊಳೆದು ಇಡ್ತಿದ್ದದ್ದು ನೋಡಿ ಮಕ್ಕಳು,.. “ಒಳ್ಳೇ ಶಾಂತಿ, ಕಣಮ್ಮಾ ,ಹಾಸ್ಟೆಲ್ ವಾರ್ಡನ್ ಆಗೋಕೆ ಲಾಯಕ್ಕಾಗಿದಾಳೆ.. ಒಂದು ರೀತಿ ನಮಗೆ "ರಿಂಗ್ ಮಿಸ್ಟ್ರೆಸ್" ಆಗಿದಾಳೆ..” ಎನ್ನುತ್ತಿದ್ದರು.

‘ಹೆಸರಿಗೆ ಮಾತ್ರ ಶಾಂತಿ, ಆದ್ರೆ ಮಿಲಿಟರಿ ರೂಲ್ ಮಾಡಿ ಎಲ್ಲರ ಶಾಂತಿ ಕದಡುವಂತಿದಾಳೆ’ ಅನಿಸಿ ಮಕ್ಕಳಿಗೂ ನೆಮ್ಮದಿ ಇಲ್ಲದಂತಾಯ್ತು. “ಅಯ್ಯೋ, ಇವಳ ಸಹವಾಸ ಯಾಕೋ ಸಾಕಾಯ್ತು ಕಣೇ” ಅಂತ ಅಮ್ಮ ಹೇಳಿದಾಗ, ದೀಪಾ ಅಂದ್ಲು, “ಅಮ್ಮಾ ನಿಂಗೂ, ಕೆಲಸದವ್ರಿಗೂ ಆಗಿಬರಲ್ಲ ಕಣಮ್ಮ, ನಿನಗೆ ಏನಾದ್ರೂ ಒಂದು ನೆಪ ರೆಡಿ ಇರುತ್ತೆ ಅವ್ರನ್ನು ಬರಬೇಡಾ ಅನ್ನೋಕೆ.”..

"..ಏ... ಸುಮ್ನಿರೇ, ನಂಗೂ ಗೊತ್ತಾಗುತ್ತೆ.. ಅವಳ ಧಿಮಾಕು ನೋಡು, ಮಾತಾಡೋ ಠೀವಿ ನೋಡು”..ಅಂದ್ರು ಅಮ್ಮ..

“ಹೌದಮ್ಮ, ಈಗ ಕಾಲ ಬದಲಾಗಿದೆ.. ಅವರೂ ಬದಲಾಗಿದಾರೆ. ನಾವೇ ಅಡ್ಜಸ್ಟ್ ಮಾಡ್ಕೋಬೇಕಮ್ಮ” ಅಂದಿದ್ದು ನೋಡಿ ಅಮ್ಮ ಸುಮ್ಮನಾದ್ರು..

ಆ ಮಧ್ಯೆ ಇನ್ನೂ ಎರಡು ವಾರವಾಗಿತ್ತು, ಯುಗಾದಿ ಹಬ್ಬ ಬಂತೆಂದು. ಹೊಸ ಸೀರೆಯೊಂದನ್ನು ಹಬ್ಬಕ್ಕೆಂದು ಕೊಟ್ಟಿದ್ದು ಅವಳಿಗೆ ಅತ್ಯಾಶ್ಚರ್ಯವಾಗಿತ್ತು.. ಬಹಳ ಸಂತಸವೂ ಆಗಿತ್ತು., ಜೋರಾಗಿ ನಗು ನಗುತ್ತಾ, ಖುಷಿಯಾಗಿ ಸ್ವಲ್ಪಜಾಸ್ತಿ ನಾಟಕೀಯವಾಗಿ ನಕ್ಕಿದ್ದಳು.. ಅವಳ ನಗು ಶರಪಂಜರದ ಕಾವೇರಿಯ ನೆನಪು ತಂದಿತ್ತು.. ಮನೆಯವ್ರೆಲ್ಲಾ ಇವಳ ಈ ಡ್ರಾಮಾ ನೋಡಿ ನಕ್ಕಿದ್ದೂ ನಕ್ಕಿದ್ದೇ..

ಆ ದಿನ ಅಮ್ಮನ ಬಳಿ..ನಗು ನಗುತ್ತಾ ಮಾತಾಡಿದ್ದೇ ಮಾತಾಡಿದ್ದು!, “ನೀವು ಎಷ್ಟು ಸಂಸ್ಕಾರವಂತರು, ಮಕ್ಕಳಿಗೂ ಒಳ್ಳೆಯ ಗುಣ ಹೇಳಿಕೊಟ್ಟಿದೀರಿ, ನಾನೂ ಅಷ್ಟೆ.. ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕೊಟ್ಟು ಬೆಳೆಸ್ತಿದೀನಿ”..ಅಂದಳು.. ಇಷ್ಟು ಒಳ್ಳೆಯ ಮಾತುಗಳಾಡುತ್ತಾಳಲ್ಲ.. ಅನಿಸಿ ಈ ಪದಗಳೆಲ್ಲ ಇವಳಿಗೆ ಹೇಗೆ ಬಂತು ಅನ್ನಿಸಿದರೂ ಪ್ರತಿದಿನ ಅವಳು ವೆರೈಟಿ ಸೀರಿಯಲ್ ನೋಡೋದ್ರ ಪ್ರಭಾವ ಅಂತ ಆಮೇಲೆ ಗೊತ್ತಾಯ್ತು., ಸೀರಿಯಲ್ ನೋಡೀ ನೋಡೀ ಅವಳ ಕಣ್ಣುಗಳಿಗೆ ಸಮಸ್ಯೆ ಆಗಿತ್ತು. ಅದರ ಕುರಿತು, ಸೀರಿಯಲ್ ಎಪಿಸೋಡಿನಂತೆ ಪದರ, ಪದರವಾಗಿ ಘಟನೆಗಳನ್ನು ಬಿಡಿಸಿ ಅವಳು ಹೇಳುವ ರೀತಿ, ಅವಳು ಡಾಕ್ಟರಮ್ಮನ ಬಳಿ ಬೆಳಗ್ಗೇನೇ ಎದ್ದು ಹೋಗಿದ್ದು,

ಅದರ ತಯಾರಿ, ಅದಕ್ಕೆ ಖರ್ಚಾದ ಹಣ, ಬಸ್ಸಿನಲ್ಲಿ ಇವಳಿಗೂ ಸಹ ಪ್ರಯಾಣಿಕಳೊಬ್ಬಳಿಗೂ ನಡೆದ ಜಟಾಪಟಿ, ತಲೆಜುಟ್ಟು ಹಿಡಿದು ಮಾಡಿದ್ದ ಜಗಳ, ಎಲ್ಲವನ್ನೂ ಕಣ್ಣಿಗೆ ಕಟ್ಟುವ ರೀತಿ ಹೇಳಿ, ತೋರಿಸುತ್ತಾ ನಟನೆ ಮಾಡೋದು ನೋಡಿ, "ಅಮ್ಮ, ಇವಳಿಗೆ ಶಮ್ಮಿಕಪೂರ್ ನೂ ಮೀರಿಸುವ ಟ್ಯಾಲೆಂಟ್ ಇದೆಯಮ್ಮ, ಮುಖದಲ್ಲೇ ಎಲ್ಲಾ ಹಾವಭಾವ ತೋರಿಸ್ತಾಳೆ" ಅಂತ ಮಕ್ಕಳ ತಮಾಷೆ..

ಇತ್ತೀಚೆಗೆ ತೀರಿಕೊಂಡ ಅವಳ ತಂದೆಯ ಬಗ್ಗೆ ಹೇಳ್ತಾ, "ನನ್ನ ತಂದೆ ಮಹಾ ಜ್ಞಾನಿ, ಬಹಳ ನಾಲೆಜ್ ಇತ್ತು" ಅಂದ್ಲು, "ಆದ್ರೇ ಬೇಗ ತೀರಿಕೊಂಡರು", ಅಂತಂದಾಗ "ಓ!.. ಪಾಪ! ಹೌದಾ? ಏನಾಗಿತ್ತು?" ಅಂದ್ರು ಅಮ್ಮ.. "ಎಲ್ಲಾ ಸರಿ. ಆದ್ರೇ, ಚೆನ್ನಾಗಿ ಬಾಟಲ್ ಹಾಕ್ತಾ ಕುಡಿತದ ಚಟಕ್ಕೆ ದಾಸರಾಗಿದ್ರು".. ಅಂದಾಗ ನಗುವುದೋ, ಅಳೋದೋ ಗೊತ್ತಾಗಲಿಲ್ಲ., "ನೋಡಿ ಅವರ ಫೋಟೋ" ಅಂತ ತೋರಿಸಿ, "ಸ್ವಲ್ಪ ತಾಳಿ, ಝೂಂ ಮಾಡ್ತೀನಿ" ಅಂತ ಮಕ್ಕಳ ಫೋಟೋನೂ ತೋರಿಸಿದ್ಲು.. ಮೊಬೈಲು ಉಪಯೋಗದ ಬಗ್ಗೆ ಚೆನ್ನಾಗಿ ತಿಳಿದಿದ್ದಳು., ಓದು, ಬರಹ ಏನು ಇಲ್ಲದಿದ್ರೂ... ಸಂಡೆ, ಮಂಡೆ... ಎಲ್ಲಾ ಇಂಗ್ಲಿಷಿನ ಪದಗಳ ಉಪಯೋಗ ಕರಾರುವಾಕ್ಕಾಗಿ ಮಾಡ್ತಿದ್ಲು.

"ನೀವು ಶುಗರ್ ಗೆ ಸಕ್ರೆ ಅಂತೀರಿ, ನಾವು ಸಕ್ರೆಗೆ ಶುಗರ್ ಅಂತೀವಿ", ಅಂತ ಅವಳ ಅಂಬೋಣ. ಕಳೆದ ವಾರ ಕೆಲಸ ಮುಗಿಸಿ ಹೊರಡೋವಾಗ, ಮಹಡಿಯ ಕೆಳಗೆ ಯಾರೋ ಕಸ ಎಸೆದಿದ್ದು ನೋಡಿ, "ಅಮ್ಮ, ಇಲ್ಲಿ ಕಸ ಎಸೀತಿದಾರೆ, ಇವತ್ತೂ ಹಾಕಿದಾರೆ,.. ಯಾರೋ ಎಸೀತಿದಾರೆ. ಮತ್ತೆ ನೋಡಿದ್ರೆ ನನ್ನ ಮೊಬೈಲ್ ನಲ್ಲಿ ಝೂಂ ಮಾಡಿ, ಲೈಟ್ಹಾಕಿ ಫೋಟೋ ತೆಗೆದು ನಿಮಗೆ ತೋರಿಸ್ತೀನಿ. ನೀವು ಕಂಪ್ಲೇಂಟ್ ಮಾಡಿ" ಅಂದಳು.. ಯಲಾ ಇವ್ಳಾ... ಅಂದ್ಕೊಂಡು, "ಹ್ಞೂ.. ಸರಿ ಕಣಮ್ಮ" ಅಂದಿದ್ದು ಆಯ್ತು..

ಈ ಹಿಂದೆ ಕೆಲಸ ಮಾಡ್ತಿದ್ದ ಮನೇಲಿ ಮಕ್ಕಳಿಗೆ ಟ್ಯೂಷನ್ ಮಾಡ್ತಿದ್ದ ಇಂದಿರಾ ಮೇಡಂ ಅವರಿಂದ ಸ್ವಲ್ಪ ಓದು, ಬರಹ ಕಲಿಯಲಾರಂಭಿಸಿದ್ದಳಂತೆ.

ಮನೆ ಯಾವಾಗ್ಲೂ ಕ್ಲೀನ್ ಆಗಿರಬೇಕು, ಅಡಿಗೆ ಮನೆ ಸಿಂಕಿನಲ್ಲಿ ಸೊಪ್ಪಿನ ಎಲೆಗಳು ಬಿದ್ದಿದ್ದರೆ, ಗುಡಿಸುವಾಗ ಅಲ್ಲೊಂದು ಇಲ್ಲೊಂದು ಪೇಪರ್ ತುಂಡು ಇದ್ರೆ ಸಿಟ್ಟಾಗಿ ಬಿ.ಪಿ. ರೈಸ್ ಆದಂತೆ "ಇದೇನಮ್ಮಾ ಇಷ್ಟು ಕಸ!" ಅಂತ ಕಿರುಚಾಡುವ ರೀತಿಗೆ ಅಮ್ಮನೂ ಗಲಾಟೆ ಮಾಡಿದ್ರು, "ಎಲ್ಲಾ ಕ್ಲೀನ್ ಇದ್ರೆ ನೀನ್ಯಾಕೆ ಬೇಕು ಕೆಲ್ಸಕ್ಕೆ? ಕೆಲಸ ಮಾಡೋದೂ, ಬಿಡೋದೂ ನಿನ್ನಿಷ್ಟ".. ಅಂದಾಗ ಸುಮ್ಮನಾಗುವ ಶಾಂತಿ,.. ಕ್ಷಣ ಚಿತ್ತ, ಕ್ಷಣ ಪಿತ್ಥ ಅನ್ನೋ ಪಾರ್ಟಿ. ಆದ್ರೆ ಅವಳು ಗಡಿಬಿಡಿಯಲ್ಲಿದ್ದಾಗ ಸರಿಯಾಗಿ ಗುಡಿಸದಿದ್ರೆ, ..ಕಸ ಬಿದ್ದಿದ್ದು ತೋರಿದ್ರೂ, "ಹ್ಞೂ... ಗಾಳಿ ಜಾಸ್ತಿಯಾಗಿ ಹಾಗೆ ಬಂದ್ಬಿಟ್ಟಿದೆ" ಅಂತ ಸಮರ್ಥನೆ ಮಾಡಿಕೊಳ್ಳೋ ಜಾಣತನ ಬೇರೆ.

ಪಕ್ಕದ ಮನೆಯಿಂದ ಸಿಗರೇಟಿನ ವಾಸನೆ ಬಂದಾಗ ಏನೋ ಆದವಳಂತೆ "ಅಮ್ಮಾ, ಯಾರೋ ಸಿಗರೇಟ್ ಸೇದುತ್ತಿದಾರೆ, ನನಗೆ ವಾಂತಿ ಬರೋ ಹಾಗೆ ಆಗುತ್ತೆ" ಅಂತ ಇವಳು ಹಲವು ಬಾರಿ ಜೋರಾಗಿ ಕಿರುಚಿದ್ದು ನೋಡಿ ಬಾಡಿಗೆದಾರರಾಗಿದ್ದ ಅವರು, ಇವಳು ಜಗಳಗಂಟಿ, ಇವಳ ಜೊತೆ ಜಗಳ ಮಾಡಿದ್ರೆ ಸರಿಹೋಗಲ್ಲ ಅಂತ ಹೆದರಿ ಮನೇನೇ ಬಿಟ್ಟು ಹೋದ್ರು..

ಅದೊಂದು ದಿನ ... "ಅಮ್ಮಾ ನಂಗೆ ಸಿಗರೇಟು, ನಾಯಿ, ಬೆಕ್ಕು ಇವೆಲ್ಲಾ ಕಂಡ್ರೆ ಹೆದರಿಕೆ".. ಅಂದಳು.. "ಅಲ್ಲಾ ಮತ್ತೆ ಕೆಳಗಿನ ಮನೇಲಿ ಪೆಟ್ಸ್ ಇವೆಯಲ್ಲಾ, ನೀನು

ಕೆಲಸ ಮಾಡ್ತೀಯಲ್ಲ?" ಅಂದ್ರು ಅಮ್ಮ., "ಹ್ಞೂ.. ಅವ್ರು ನನ್ನನ್ನು ಕೇಳಿ, ನಾನು ಯೆಸ್ ಅಂದ್ಮೇಲೆ ತಂದಿದಾರೆ., ಆದ್ರೆ ನಂಗೆ ಯಾವ ಪಾಬಂ (ಪ್ರಾಬ್ಲಂ). ಆಗಬಾರದು ಅಂತ ರೂಲ್ ಮಾಡಿದೀನಿ." ಓ.ಕೆ. ಅಂತ. ಕೆಲ್ಸಕ್ಕೆ ಹೋದಾಗ ಅದರ ಗೂಡಿನಲ್ಲಿ ಕಟ್ಟಿಹಾಕ್ತಾರಂತೆ, ಅವಳಿಗೆ ನಾಯಿ ಅಂದ್ರೇ ಬಲು ಭಯವಂತೆ.

ಚಿಕ್ಕ ವಯಸ್ಸಿನಲ್ಲಿ ಒಮ್ಮೆ ಅವಳನ್ನು ನಾಯಿ ಕಡಿದ ಘಟನೆ ಮನಸ್ಸಿನಲ್ಲಿ ಅಚ್ಚೊತ್ತಿದೆಯಂತೆ. ಅವಳು ಅಯೋಧ್ಯೆ ಮಂದಿರದ ಬಗ್ಗೆ, ಮೋದಿಯ ಬಗ್ಗೆಯೂ ಮಾತನಾಡುವ ರೀತಿ ಒಮ್ಮೊಮ್ಮೆ ಆಶ್ಚರ್ಯವೂ ಅನಿಸುತ್ತಿತ್ತು. ಅಮ್ಮ, ಕಮಲದ ಹೂವಿಂದ ಲಚ್ಮಿ ದೇವರಿಗೂ ಪೂಜೆ ಮಾಡ್ತಾರೆ..

ಮೋದಿ ಅಂದ್ರೆ ಶ್ರೀ ರಾಮನಂತೆ, ನಮ್ಮ ದೇಶಾನ ಬೋ ಸಂದಾಗಿ ನಡಸ್ತಾವ್ರೆ, ನಮ್ಮಂಥವರಿಗೆ ಭಾಳ ಸಹಾಯ ಮಾಡಿದಾರೆ, ನಾನು ಟಿ.ವಿ.ಯಲ್ಲಿ ನೋಡ್ತೀನಿ ಅಂದಾಗ.. ಮಕ್ಕಳು, "ಓ..ಹೋ... ಅಮ್ಮ, ಇವಳು ಪಾಲಿಟಿಕ್ಸ್‌ನಲ್ಲಿಚೆನ್ನಾಗಿ ಹೊಳೀತಾಳೆ"..ಅಂತ ಜೋಕ್ ಹಾರಿಸಿದ್ರು. ಹಳೆಯದು ಚೆನ್ನಾಗಿರೋ ವಸ್ತು ಕೊಟ್ರೂ.. ತೊಗೊಳಲ್ಲವಂತೆ. ಮೊನ್ನೆ ಕೆಳಗಿನ ಮನೆಯ ಕುಸುಮ ಹೇಳಿದ್ರು ,ಅವರು ಕಡಿಮೆ ಯೂಸ್ ಮಾಡಿದ್ದ ಒಂದು ಫ್ಯಾನ್ಸಿ ಬ್ಯಾಗ್ ಕೊಟ್ಟಾಗ, ಅವಳು ಇನ್ನೂ ಬಂದ ಹೊಸದು.. ಸುಮ್ನೆ ತೊಗೊಂಡು ಹೋಗಿದ್ದು ನೋಡಿ ಪರವಾಗಿಲ್ಲ, ಅವಳಿಗೆ ಇಷ್ಟ ವಾಯಿತೇನೊ ಅಂದುಕೊಂಡಿದ್ದು ಮರುದಿನ ಇವರು ವಾಕಿಂಗ್ ಹೋದಾಗ, ಹಳೆಯ ವಸ್ತುಗಳನ್ನಿಡೋ ಜಾಗದಲ್ಲಿ ಇಟ್ಟು ಹೋಗಿದ್ದಳಂತೆ, ಮತ್ತೊಮ್ಮೆ ಅವಳು ರಜೆ ಅಂತ ಹೋಗಿ ನಾಲ್ಕು ದಿನ ಹೆಚ್ಚಾಗಿ ರಜೆ ತೊಗೊಂಡಾಗ ಕುಸುಮ ಗಲಾಟೆ ಮಾಡಿದ್ರಂತೆ..."ನಿಂಗೆ ಆಲ್ರೆಡಿ ನಾಕು ದಿನ ಸಂಬಳದ ಜೊತೆಗೇ ರಜೆ ಕೊಡ್ತೀನಿ, ಈಗ ಮತ್ತೆ ನಾಕು ದಿನ... ದುಡ್ಡು ಕಟ್ ಮಾಡ್ತೀನಿ" ಅಂದ್ರೇ ಅವಳು ಅಯ್ಯೋ, ಬೇಡಮ್ಮಾ ಅಂತಾಳೇನೋ ಅಂದುಕೊಂಡಿದ್ರು.. ಬದಲಿಗೆ ಅವಳು "ಅಯ್ಯೋ ಪಾಪ,ನಿಮಗೆ ಅಷ್ಟು ಕಷ್ಟ ಆದ್ರೆ ಕಟ್ ಮಾಡ್ಕೊಳಿ" ..ಅಂದಿದ್ದು ಇವರಿಗೆ ಮುಖಭಂಗವಾಗಿತ್ತು. ಜೊತೆಗೆ ಅವಳ ಸ್ವಾಭಿಮಾನದ ಪರಿಚಯವೂ ಆಗಿತ್ತು.

ಅವಳಿಗೆ ಕೆಲವು ಮನೆಗಳ ಕೆಲಸ ಜಾಸ್ತಿಯಾಗಿ ಕೈ ನೋವು ಕಾಣಿಸಿಕೊಂಡ ಸಂದರ್ಭದಲ್ಲಿ.. ಡಾಕ್ಟರ್ ಬಳಿಗೆ ಹೋಗಿ ಬಂದು, ಮನೇವ್ರಿಗೆಲ್ಲಾ ಟೆನ್ಶನ್ ಮಾಡ್ತಾ ತಲೆ ಕೊರೆದಿದ್ದಳು; .. "ನಂಗೇ ವರ್ಕ ಪ್ಲೆಶರ್ ಆಗಿದೆ", ಅಂದಾಗಲಂತೂ ಮನೆಮಂದಿಯೆಲ್ಲ ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ರು. ಪಾಪ, ಕುಸುಮ ಹೇಳಿದ ವರ್ಕ್ ಪ್ರೆಶರ್..ಗೇ ಪ್ರೆಶರ್ ಆಗುವಂತಿತ್ತು.. ಪಿಜ್ಜಾ, ಬರ್ಗರ್, ಪ್ಯಾನ್ ಕೇಕ್ಗಳನ್ನು ಮಾಡುವುದನ್ನೂ ಕೆಲವು ಮನೆಯವರು ಕಲಿಸಿದ್ದರು.. ಹೇಗೋ ಮೆಲ್ಲನೆ ಮನೆಯ ಎಲ್ಲರಿಗೂ ರೂಢಿಯಾಗ್ತಿದ್ದಳು, ನಂಬಿಕೆ ಪಾತ್ರಳೂ, ಕಷ್ಟ ಜೀವಿಯೂ ಆಗಿದ್ದ ಶಾಂತಿ ಒಮ್ಮೆ ಕೆಲಸ ಮಾಡುತ್ತಾ ಇದ್ದಕ್ಕಿದ್ದಂತೆ, –ಅಮ್ಮ, ಇನ್ನು ಮೇಲೆ ನಾನು ಕೆಲಸಕ್ಕೆ ಬರಲಾಗೋಲ್ಲ" ಅಂದಳು.. "ಯಾಕಮ್ಮಾ, ಏನಾಯ್ತು?" ಅಂದ್ರು ಅಮ್ಮ.. ಅವಳ ಮುಖದಲ್ಲಿ ಖುಷಿ ಇತ್ತು., "ಅಮ್ಮ, ನನ್ನನ್ನು ಪಕ್ಕದೂರಿನ ಮನೆ ಕೆಲಸಗಾರರ ಸಂಘದವ್ರು ಸೂಪರ್ವೈಸರ್ ಆಗಿ ಸಿಲೆಟ್ (ಸೆಲೆಕ್ಟ್) ಮಾಡಿದಾರೆ".. ಅಂದಳು. "ಓ!.. ಇದು ಸರೀನೇ ಇದೆ.. ನಿನಗೆ ಈ ಕೆಲಸ ಚೆನ್ನಾಗಿ ಸೂಟ್ ಆಗುತ್ತೆ.. ನೀನು ಇರೋ ಮಿಲಿಟರಿ ಸ್ಟೈಲ್‌ಗೆ ಎಲ್ಲರ ಕೆಲಸದ ಬಗ್ಗೆ ಸ್ಟ್ರಿಕ್ಟ್ ಆಗಿರ್ತೀಯ ಬಿಡು.. ಹ್ಞೂ, ಒಳ್ಳೆಯ ದಾಯಿತು, ನಮ್ಮ ಮನೆಗೆ ಒಬ್ಬ ಸರಿಯಾದ ಕೆಲಸದವಳನ್ನು ನೋಡಿ ಫಿಕ್ಸ್ ಮಾಡು" ಅಂತ ಅವಳಂದಂತೆ ಅಂದ್ರು, ಈ ಮಾತಿಗೆ ಅವಳೂ ನಕ್ಕಳು, ಸಂತಸದ ನಕ್ಷತ್ರ ಮಿನುಗಿದಂತೆನಿಸಿತು.

"ಓ..ಹೋ... ನಮ್ಮ ಶಾಂತಿ ಅಲ್ಲಿ ಸೂಪರ್ವೈಸರ್ ಆಗಿ  ಮಿಲಿಟರಿ ರೂಲ್ ಮಾಡ್ತಾ ಇನ್ನೂ ಏನೇನು, ಕ್ರಾಂತಿ ಮಾಡ್ತಾಳೋ ಕಾದು ನೋಡ್ಬೇಕು" ಅಂತ ಮಕ್ಕಳು ಅಂದಾಗ ಮನಸಾರೆ ನಕ್ಕಳು., "ಹ್ಞೂ ಹೌದು, ಮನೆಕೆಲಸದವರು ಸರಿಯಾಗಿ ಕೆಲ್ಸ ಮಾಡ್ತಾರಾ, ಟೇಮ್ ಗೆ ಸರಿಯಾಗಿ ಬರ್ತಾರಾ ಅಂತ, ನೋಡಬೇಕು... ನಾನು ಸರಿ ಇದ್ರೆ ಅವರೂ ಸರಿಯಾಗಿರ್ತಾರೆ ಅಲ್ವಾ" ಅನ್ನೋದು ಅವಳ ಪಾಯಿಂಟು. ಈ ಕೆಲಸದಿಂದ ಮಕ್ಕಳು,  ಅತ್ತೆ ಮಾವ  ಎಲ್ಲರನ್ನೂ ನೋಡಿಕೊಳ್ಳುವ  ಕಷ್ಟ, ಆರ್ಥಿಕ ತೊಂದರೆ ಸ್ವಲ್ಪ ವಾದರೂ ಪರಿಹಾರವಾಗುತ್ತೆಂದು ಹೇಳಿದಾಗ ನಮ್ಮ ಮನಸ್ಸಿಗೂ ಸಮಾಧಾನವಾಗಿತ್ತು.

"ಸರಿ, ಊರಿಗೆ ಹೋಗುವ ಮುನ್ನ ಬಂದು ಹೋಗು" ಅಂದ್ರು ಅಮ್ಮ. ವಾರದ ಬಳಿಕ ಅವಳು ಹೇಳಿ ಹೋಗಲು ಬಂದಾಗ ಅವಳಿಗೆಂದೇ ಚಂದದ ಸೀರೆ, ಮಕ್ಕಳಿಗೆ ಸಿಹಿ ತಿನಿಸು, ಉಪಯುಕ್ತ ಉಡುಗೊರೆಗಳನ್ನು, ನೀಡಿದಾಗ ಬಹಳ ಖುಷಿಪಟ್ಟು, "ಟೈಂ ಆದಾಗ  ಮತ್ತೆ ಬರ್ತೀನಿ" ಅಂತ ಹೇಳಿ ಹೊರಟಳು.

●

## ಲಕ್ಷ್ಮಣ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.
ಅವುಗಳಲ್ಲಿ ಇದೂ ಒಂದು – ನಿಮಗಾಗಿ.



" ಅದೆಲ್ಲಾ ಒಪ್ಪಿದೆ. ಆದರೆ, ಬೇರೆ ಯಾವ ಕೆಲಸಕ್ಕೂ ಲಾಯಕ್ಕಲ್ಲ , ಅನ್ನುವುದೂ ಒಂದು ಗುಣ ನಿನ್ನಲ್ಲಿ, ಅದನ್ನೂ ಹೇಳಿಕೊ "

# ಶೈ(ಕ್ಷಣಿಕ) ಪ್ರವಾಸ

ಸುಮವೀಣ, ಹಾಸನ

ಪ್ರವಾಸ ಅಂದರೆ ಖುಷಿಯೋ ಖುಷಿ ಅಲ್ವ!! ಪ್ರವಾಸ ಮನಸ್ಸನ್ನು ಹಿಗ್ಗಿಸುತ್ತದೆ, ಹೊಸ ತಿಳಿವಳಿಕೆಯನ್ನು ಹೊಸ ಅನುಭೂತಿಯನ್ನು ಕೊಡುತ್ತದೆ. ಪ್ರವಾಸ ಒಂದೇ ರೀತಿಯ ವಾತಾವರಣದಿಂದ ಬೇಸತ್ತವರ ಮನಸ್ಸನ್ನು ಉಲ್ಲಸಿತರನ್ನಾಗಿ ಮಾಡುತ್ತದೆ. ಚಿಕ್ಕ ವಯಸ್ಸಲ್ಲಿ ಪ್ರವಾಸ ಹೋದ ನೆನಪುಗಳು ಮತ್ತೆ ಮತ್ತೆ ನೆನಪಾಗುತ್ತವೆ. ಒಂದೊಮ್ಮೆ ಚಾಮುಂಡಿ ಬೆಟ್ಟಕ್ಕೆ ಕರೆದುಕೊಂಡು ಹೋಗಿ ಎದುರಿಗೆ ಕಾಣುವ ಮಹಿಷಾಸುರನನ್ನು ತೋರಿಸಿ 'ಬೊಬ್ಬೆ ಹಾಕಿದ್ರೆ.... ಬಸ್ ಒಳಗ್ ಬರ್ತಾನೆ' ಎಂದ ನನ್ನ ಟೀಚರ್ ಧ್ವನಿ ಇನ್ನೂ ಕಿವಿಯಲ್ಲಿ ಹಾಗೆಯೇ ಇದೆ. ಪ್ರವಾಸಗಳು ಹೊಂದಾಣಿಕೆಯ ಸ್ವಭಾವವನ್ನು, ಹಂಚಿ ತಿನ್ನುವ, ಕೂಡಿ ಸೊಗಯಿಸುವ ಹಾಗೆ ಕೆಲವೊಮ್ಮೆ ಜವಾಬ್ದಾರಿಯನ್ನು ಕಲಿಸುತ್ತವೆ. ಆದರೆ ಈ ಪ್ರವಾಸಗಳು ಪ್ರಯಾಸವಾದರೆ ಕಷ್ಟ! ಹೋದಲ್ಲೆಲ್ಲಾ ಅನುಕೂಲ ಇರಬೇಕು. ವಸತಿ ಸಿಗದೆ, ವಾಶ್ ರೂಮ್ ವ್ಯವಸ್ಥೆ ಇಲ್ಲದೆ, ಎಷ್ಟೋ ಹೊತ್ತು ಬಸ್ಸಿನಲ್ಲೇ ಕಳೆಯುವ ಹಾಗಾದರೆ ಪ್ರಯಾಸವೆ.

ಬೆಂಗಳೂರಿಗೆ ಒಂದು ದಿನದ ಪ್ರವಾಸಕ್ಕೆ ಮಗಳು ಹೋದ ನೆನಪು. ಪ್ರವಾಸದ ಕನವರಿಕೆಯಲ್ಲೇ ಬಿಡುಗಣ್ಣಾಗಿದ್ದು ಮುಂಜಾನೆ ನಾಲ್ಕಕ್ಕೆ ತಯಾರಿ ಮಾಡಿಕೊಂಡಿದ್ದಳು. 4.30ಕ್ಕೆ ಶಾಲೆಯ ಬಳಿ ಬರ ಹೇಳಿದ್ದರಿಂದ ಹೋಗಿದ್ದಾಯಿತು. ಅದರೆ 5.45 ಆದರೂ ಬಸ್ ಬಂದೇ ಇರಲಿಲ್ಲ ಬೆಳಕು ಹರಿದ ನಂತರ ಅಂತೂ ಬಸ್ ಬಂದರೆ ಎಲ್ಲರೂ ಹತ್ತಿ ಹೋದರು. ಶಾಂತಿ ಗ್ರಾಮ ಘಾಟಿ ಚನ್ನರಾಯಪಟ್ಟಣ ಬೈಪಾಸ್ ತಲುಪುವಷ್ಟರಲ್ಲಿ ಗಂಟೆ 7.30. ಮಕ್ಕಳ ಹೊಟ್ಟೆಯೆಲ್ಲ ಚುರು ಚುರು ಗುಟ್ಟುತ್ತಿದೆ ಅನ್ನುವ ಅಳಲು ಶಿಕ್ಷಕರಿಗೆ ತಿಳಿದದ್ದೇ ತಡ ಕದಬಳ್ಳಿ ಬಳಿ ನಿಲ್ಲಿಸಿ ಚೌ ಚೌ ಬಾತ್ ಕೊಟ್ಟಿದ್ದಾಯಿತು. ಚಿಲಿ ಪಿಲಿ ಚಿಣ್ಣರನ್ನು ಬೇಗ ಹೊರಡಿಸುವುದು ಸಾಧ್ಯವೇ? ಅಂತೂ ಒಂಬತ್ತಕ್ಕೆ ಹತ್ತು ನಿಮಿಷ ಇರುವಂತೆ ಬಸ್ ಮರುಪ್ರಯಾಣ ಆರಂಭಿಸಿತು.

ಹೊಟ್ಟೆಗೆ ತ್ರಾಣ ಬಂದದ್ದರಿಂದ ಮಕ್ಕಳು ಪ್ರವಾಸವನ್ನು ಅನುಭವಿಸಲು ಪ್ರಾರಂಭಿಸಿ, ಕುಣಿದು ಕುಪ್ಪಳಿಸಿ ಹರ್ಷಿಸುತ್ತಿದ್ದರು. ಎಲ್ಲಾ ಸುಸೂತ್ರ ಎನ್ನುವಾಗ ಏನೋ ಬಸ್ಸಲ್ಲಿ ಅಪಸ್ವರ! ವೇಗವಾಗಿ ಓಡುತ್ತಿದ್ದ ಬಸ್ ನಿಧಾನವಾಗಿ ವೇಗ ತಗ್ಗಿಸಿಕೊಂಡು ಧಡಕ್ಕನೆ ನಿಂತೇ ಬಿಟ್ಟಿತು. ಟೀಚರ್ಗಳೆಲ್ಲ ತಾಬಡ ತೊಬಡ ಎನ್ನುವಂತೆ ಡ್ರೈವರನ್ನು ಕೇಳಿದರು ಅವರೊ "ಇಳಿದು ನೋಡುವೆ ಏನಾಗಿದೆಯೋ...." ಎಂದು ಆಕಳಿಸುತ್ತಾ ನಿಧಾನವಾಗೇ ನೋಡಿದರೆ ತಾಂತ್ರಿಕ ತೊಂದರೆ ಆಗಿತ್ತು. ಶಿಕ್ಷಕರು ಮಕ್ಕಳನ್ನೆಲ್ಲ ಅಲ್ಲಿಯೇ ಇಳಿಸಿದರು., ಮಕ್ಕಳೊ ಸುಮ್ಮನೆ ಇರಲಾರದೆ ಹೋಗುವ ಎಲ್ಲಾ ಬಸ್ಗಳಿಗೂ ಕೈ ಅಡ್ಡ ಹಾಕಿದರು. ಅದನ್ನು ನೋಡುತ್ತಲೇ ಶಿಕ್ಷಕರ ಗದರುವಿಕೆ ತಾರಕಕ್ಕೇ ಏರಿತು. ಅಷ್ಟರಲ್ಲಿ ಕುಣಿಗಲ್ ಡಿಪೋದ ಮೆಕ್ಯಾನಿಕ್ ಬಂದು ಬಸ್ ರಿಪೇರಿ ಮಾಡಿ ಮರು ಪ್ರಯಾಣದ ಹಾದಿಯನ್ನು ಸುಗಮವಾಗಿಸಿದರು. ಗಂಟೆ ಹತ್ತಕ್ಕೆ ಕುಣಿಗಲ್ ಬಿಟ್ಟರೆ ನೆಲಮಂಗಲ ಕ್ರಾಸ್ ಹೋಗುವಾಗ ಹನ್ನೊಂದು ಗಂಟೆ. ಅಲ್ಲಿಂದ ಮುಂದಕ್ಕೆ ಹೆಜ್ಜೆಯ ಮೇಲೆ ಹೆಜ್ಜೆಯನ್ನುಟ್ಟು ನಡೆವಂತೆ ಬಸ್ ಗಾಲಿ ಗಾಲಿಯ ಮೇಲೆ ಉರುಳುವಂತೆ ಚಲಿಸಬೇಕಾಯಿತು. ಆ ಟ್ರಾಫಿಕ್ ಕಿರಿ ಕಿರಿಯಲ್ಲಿ ಉಸಿರು ಹಿಡಿದಂತಾಗಿ ಮಕ್ಕಳಿಗೂ ಪ್ರವಾಸ ಕಷ್ಟ ಅನ್ನಿಸತೊಡಗಿತು. ಅಂಥದರಲ್ಲೂ ನೆಹರೂ ತಾರಾಲಯಕ್ಕೆ ಮಕ್ಕಳನ್ನು ಕರೆದು ಕೊಂಡು ಹೋಗುವಷ್ಟರಲ್ಲಿ ಅಲ್ಲಿ ಊಟದ ಸಮಯ. ಬೇಗನೆ ಹೋಗಿ ಹೋದಷ್ಟೇ ವೇಗದಲ್ಲಿ ಆಚೆ ಮಕ್ಕಳನ್ನು ಕರೆದುಕೊಂಡು ಬರಬೇಕಾಯಿತು.

ಮುಂದಿನ ಸ್ಥಳ ಬನ್ನೇರುಘಟ್ಟ ಉದ್ಯಾನವನ. ಮೊದಲೇ ಊಟ ಆರ್ಡರ್ ಮಾಡಿದ ಹೊಟೇಲಿನಲ್ಲಿ ಅನ್ನ ಖಾಲಿಯಾಗಿರುತ್ತದೆ. ಇದ್ಯಾವುದೋ ಫೇಕ್ ಆರ್ಡರ್ ಇರಬೇಕು ಎನ್ನುತ್ತ ಅವರು ಅಡುಗೆ ತಯಾರು ಇಟ್ಟಿರುವುದಿಲ್ಲ. ಅನ್ನ ಮಾಡಿ ಮಕ್ಕಳನ್ನು ಕರೆಯುವಷ್ಟರಲ್ಲಿ ತಮ್ಮಲ್ಲಿದ್ದ ಹಣದಲ್ಲಿ ತಮಗೇನು ಬೇಕೋ ಅದನ್ನು ತಿಂದು ಬಿಟ್ಟಿರುತ್ತಾರೆ. ಶಿಕ್ಷಕರು ಪ್ರವೇಶದ ಟಿಕೆಟ್ ತೆಗೆದುಕೊಳ್ಳುವಷ್ಟರಲ್ಲಿ ಅಲ್ಲೇ ಸಿಗುವ ಟೋಪಿಗಳನ್ನು ಹಾಕಿ ಮಕ್ಕಳು ತಾವೂ ಮೃಗಗಳಂತೆ ಚೀರಾಡಿಕೊಂಡು ಹೋಗುವಷ್ಟರಲ್ಲಿ ಮೃಗಾಲಯ ಬೇಗ ಸುತ್ತು ಹಾಕಿ




ಬರಬೇಕಾಗುತ್ತದೆ. ಇಲ್ಲವಾದರೆ ಅವರೇ ಹೊರ ಕಳಿಸುತ್ತಾರೆ ಅನ್ನುವ ಸಂದೇಶ ತಿಳಿದಿದ್ದರೂ ಈ ಮಕ್ಕಳೋ ಅಲ್ಲಲ್ಲೇ ನೋಡುತ್ತಾ ನಿಂತು ಬಿಡುತ್ತಿದ್ದರು. ಹಿತ್ತಲಿಗೆ ನುಗ್ಗಿದ ಬೀಡಾಡಿ ದನಗಳನ್ನು ಅಟ್ಟುವಂತೆ ಅಲ್ಲಿನ ಸಿಬ್ಬಂದಿ ಮಕ್ಕಳನ್ನು ಹೊರ ಕಳಿಸುವ ಪ್ರಯತ್ನ ಮಾಡುತ್ತಾರೆ. ಅಂತೂ ಅಲ್ಲಿಯೂ ಸರಿಯಾಗದೆ ಮಕ್ಕಳನ್ನೆಲ್ಲ ಬಸ್ಸಿನಲ್ಲಿ ತುರುಕಿಕೊಂಡ ಶಿಕ್ಷಕರು ಮುಂದೆ ಇದೇ ಕಡೆಯ ಸ್ಥಳ ಎನ್ನುವಂತೆ ಇಸ್ಕಾನ್ ದೇವಾಲಯದ ಬಳಿ ಬಂದರೆ ಹಿಂದಿನ ದಿನ ನಿದ್ರೆ ಸರಿಯಾಗದೆ ನಿದ್ರೆ ಇರದ ಕಾರಣ ಮಕ್ಕಳು ದಣಿದು ಹೋಗಿದ್ದರು. ಅಂತೂ ಕೃಷ್ಣನ ದರ್ಶನ ಪಡೆದುಕೊಂಡು ಬಂದದ್ದಾಯಿತು. ದೇವನಹಳ್ಳಿ ಟೋಲ್ ಬಳಿ ಮಕ್ಕಳನ್ನು ಇಳಿಸಿ, ಮೊದಲೇ ಅರ್ಡರ್ ಮಾಡಿದ್ದ ಕೇಟರಿಂಗ್ ನವರಿಗೆ ಮತ್ತೆ ಕಾಯುವಂತಾಗುತ್ತದೆ. ಅವನೂ ಟ್ರಾಫಿಕ್ ಜಾಲದಲ್ಲಿ ಸಿಕ್ಕಿ ಊಟ ತೆಗೆದುಕೊಂಡು ಬರುವಷ್ಟರಲ್ಲಿ ರಾತ್ರಿ ಎಂಟು.

ಮಕ್ಕಳಿಗೆ ಊಟದ ಶಾಸ್ತ್ರ ಮುಗಿಸಿ ಮತ್ತೆ ಕೂರಿಸಿಕೊಂಡು ಶಿಕ್ಷಕರು ಎಷ್ಟು ಚಂದದ ಪ್ರವಾಸ ಆಯ್ತು ಅಲ್ವಾ ಎನ್ನುವ ಮೊದಲೇ ಮಕ್ಕಳೂ ಓಓಓಓಓಓಓ.... ಎಂದು ಬಿಡಬೇಕೆ? ಮುಂದಿನ ಸ್ವರಕ್ಕೆ ಹೋಗುವುದರ ಮೊದಲೇ ಶಿಕ್ಷಕರು ಮೌನಕ್ಕೆ ಶರಣಾದರು. ಹೇಗೋ ಮನೆ ತಲುಪಿದರೆ ಸಾಕು ಅನ್ನುವ ಭಾವ ಮಕ್ಕಳು ಮತ್ತು ಶಿಕ್ಷಕರಿಗೆ. ಅಂತೂ 11.30 ಅಷ್ಟರಲ್ಲಿ ಬಸ್ ಹಾಸನದ ಡೈರಿ ಸರ್ಕಲ್‌ಗೆ ತಲುಪಿತು ಮಕ್ಕಳನ್ನು ಕರೆ ತರಲು ಹೋದ ಪೋಷಕರು ಮಕ್ಕಳನ್ನು "ಎಂಜಾಯ್ ಮಾಡಿದ್ರಾ?". ಅಂದರೆ ಕೆಲವು ಮಕ್ಕಳು ಓಓಓ! ಓಹೋ ! ಹೌದು !ಹೌದು!! ಅನ್ನುತ್ತಾ. ಭಾರೀ ಟೂರ್! ಅನ್ನುತ್ತಿದ್ದರೆ ಪೋಷಕರು ಮಿಕಿ ಮಿಕಿ ನೋಡುವಂತಾಗುತ್ತದೆ.

ಅಷ್ಟರಲ್ಲಿ ಎಲ್ಲದಕ್ಕೂ ಇತಿಶ್ರೀ ಎನ್ನುವಂತೆ ಶಿಕ್ಷಕರು. "ಎಲ್ಲರೂ ಚೆನ್ನಾಗಿ ಕೋಆಪರೇಟ್ ಮಾಡಿದ್ದೀರ. ಆದರೆ ಇದನ್ನು ಶೈಕ್ಷಣಿಕ ಪ್ರವಾಸ ಎನ್ನಲಾಗದು! ಪೂರ್ಣ ಎಂಜಾಯ್ ಮಾಡಲಾಗಲಿಲ್ಲ. ಅಲ್ಲಲ್ಲಿ ಅಡಚಣೆಗಳು ಇದ್ದವು. ಹೋದಲ್ಲಿ ಹೆಚ್ಚು ಸಮಯ ಕಳೆಯಲಾಗಲಿಲ್ಲ. ಬೇಗ ಬೇಗ ಬರಬೇಕಾಯಿತು. ಹಾಗಾಗಿ ಇದು 'ಕ್ಷಣಿಕ' ಪ್ರವಾಸ" ಎಂದರೆ ಮತ್ತೊಬ್ಬರು 'ಪ್ರಯಾಸದ ಪ್ರವಾಸ' ಎಂದರು. ಕಡೆಗೆ ಅದೊಂದು ಶೈಕ್ಷಣಿಕ ಪ್ರವಾಸವಲ್ಲ 'ಪ್ರಯಾಸದ ಕ್ಷಣಿಕ ಪ್ರವಾಸ' ಆಯಿತು. ●

# ಕೋಟಿ! ನಿನಗಿಲ್ಲ ಸಾಟಿ!

ಜಿ.ವಿ. ಅರುಣ

ಬೆಳಗಿನ ವಾಯುವಿಹಾರವನ್ನು, ಮುಗಿಸಿ ಹಿರಿಯರ ನೇತೃತ್ವದಲ್ಲಿ ದುಂಡುಕಲ್ಲು ಮೇಜಿನ ಸಭೆ ಸೇರಿತ್ತು. ಅಂದು ಪೂರ್ಣ ಹಾಜರಾತಿ ಇತ್ತು. ಲೋಕಾಭಿರಾಮದ ಮಾತುಕತೆಗಳಾದವು. ಹಿರಿಯರ ಎದುರುಗಡೆ ಕುಳಿತಿದ್ದವರು "ಇಚೀಚೆಗೆ ವೃತ್ತಪತ್ರಿಕೆಗಳು ನಮ್ಮ ಹೊಟ್ಟೆಯನ್ನು ಉರಿಸುವ ಸುದ್ದಿಗಳನ್ನೇ ಹೆಚ್ಚು ಹೆಚ್ಚು ಪ್ರಕಟಿಸುತ್ತಾ ಇವೆ" ಎಂದರು.

ಅವರ ಪಕ್ಕದಲ್ಲಿದ್ದವರು 'ಯಾಕಪ್ಪಾ! ನಿನ್ನ ಇಷ್ಟದ ಸಿನಿಮಾ ನಟಿಯ ಮದುವೆ ನಿಶ್ಚಯವಾಯಿತೆ !?" ಎಂದು ಕೇಳಿದರು. ಎಲ್ಲರೂ ಗೊಳ್ಳೆಂದು ನಕ್ಕರು.

ಪ್ರಶ್ನೆಯನ್ನು ಕೇಳಿದವರೂ ನಗುತ್ತಾ, "ಅದು ಹೊಟ್ಟೆ ಉರಿಯೋ ವಿಚಾರಾನೇ ಅಲ್ಲ. ಒಬ್ಬಳು ನಟಿಯ ಮದುವೆಯ ನಿಶ್ಚಯವಾದರೆ ಅವಳು ಮಾಯವಾದಂತೆ ಲೆಕ್ಕ. ಆ ಪಟ್ಟಕ್ಕೆ ಬರಲು ಇನ್ನೂ ಐದು ಆರು ಸುಂದರಿಯರು ತಯಾರಾಗಿರುತ್ತಾರೆ. ಹಾಗಾಗಿ ನನಗೆ ತೊಂದರೆ ಇಲ್ಲ. ನಾನು ಹೇಳಿದ್ದು ಅದಲ್ಲ...." ಎಂದರು.

"ಇನ್ನು ಅಂಥಾ ಗಹನ ವಿಚಾರ ಯಾವುದಪ್ಪ...?"

"ಇಂದಿನ ಸುದ್ದಿಯಲ್ಲಿ ಬಂದಿದೆ. ಅದಾನಿಗೆ ವರ್ಷಕ್ಕೆ ಎಷ್ಟೋ ಕೋಟಿ ಸಂಬಳವಂತೆ. ಆತನಿಗಿಂತ ಹತ್ತು ಪಟ್ಟು ಹೆಚ್ಚು ಸಂಬಳ ಆತನ ಕೈ ಕೆಳಗೆ ಕೆಲಸ ಮಾಡುವವನಿಗಂತೆ! ಆ ನೌಕರನಿಗೆ ವರ್ಷಕ್ಕೆ ಸುಮಾರು ಹತ್ತಿರ ಹತ್ತಿರ ತೊಂಬತ್ತು ಕೋಟಿ ಸಂಬಳವಂತೆ! ಇದು ನಮ್ಮ ಹೊಟ್ಟೆ ಉರಿಸುವ ಸುದ್ದಿಯಲ್ಲವೇ? ನಾವು ನಿವೃತ್ತಿ ಹೊಂದಿದಾಗ ಸಂಬಳ ವರ್ಷಕ್ಕೆ ಹತ್ತು ಲಕ್ಷ ಕೂಡ ಸರಿಯಾಗಿ ಬರುತ್ತಿರಲಿಲ್ಲ. ಅವನೇನು ನಾವು ಮಾಡದೇ ಇರುವಂಥ ಘನಂದಾರಿ ಕೆಲಸ ಮಾಡ್ತಾನೋ!? ದೇವರಿಗೇ ಗೊತ್ತು" ಎಂದರು.

ಯಾವಾಗಲಾದರು ಒಮ್ಮೆ ವೃತ್ತ ಪತ್ರಿಕೆಗಳನ್ನು ಓದುತ್ತಿದ್ದ ಅತ್ತಕಡೆ ಕುಳಿತಿದ್ದವರು "ನೀವು ಸರಿಯಾಗಿ ನೋಡಿದ್ರಾ....? ಎಲ್ಲೋ ತೊಂಬತ್ತು ಲಕ್ಷ ಇರಬೇಕು. ಅದೂ ಹೆಚ್ಚೇ.... ಸೊನ್ನೆಗಳನ್ನು ಎಣಿಸುವುದರಲ್ಲಿ ನೀವು ತಪ್ಪು ಮಾಡಿರಬಹುದು ಅಲ್ವೇ?" ಎಂದು ಕೇಳಿದರು. "ಇಲ್ಲ ಸ್ವಾಮಿ, ತೊಂಬತ್ತು ಕೋಟಿ ಅಂತ ಅಕ್ಷರದಲ್ಲೇ ಮುದ್ರಿಸಿದ್ದರು."

ಹಿರಿಯರ ಬಲಗಡೆ ಕುಳಿತಿದ್ದವರು "ನನಗೆ ಈ ರೀತಿಯ ಸಂಬಳ ಕೊಡುವುದೆಲ್ಲಾ ಸರಿ ಇಲ್ಲ ಅನಿಸುತ್ತದೆ. ನಮ್ಮ ದೇಶದ ರಾಷ್ಟ್ರಪತಿಗಳಿಗಿಂತ ಹೆಚ್ಚಿನ ಸಂಬಳವನ್ನು ಇನ್ನು ಯಾರಿಗೂ ಕೊಡಬಾರದು ಅಂತ ನಿಯಮವನ್ನು ಮಾಡಿಬಿಡಬೇಕು" ಎಂದರು.

ಅವರ ಆ ಕಡೆ ಕುಳಿತಿದ್ದವರು "ಈಗ ಅದು ಸಾಧ್ಯವಿಲ್ಲ ಬಿಡಿ. ಕಾರ್ಪೊರೇಟ್ ಕಂಪನಿಗಳ ಲಕ್ಷಾಂತರ ಅಧಿಕಾರಿಗಳ ಸಂಬಳ ಅದಕ್ಕಿಂತ ಹೆಚ್ಚಿದೆ...." ಎಂದರು. ಆ ಗುಂಪಿನಲ್ಲಿ 'ಮಗ್ಗಿ ಹಾಗೂ ಬಾಯಿ ಲೆಕ್ಕದ ಚತುರ' ಎಂದು ಬಿರುದಾಂಕಿತರಾಗಿದ್ದ ನಿವೃತ್ತ ಲೆಕ್ಕದ ಮೇಷ್ಟ್ರು, ಸ್ವಲ್ಪ ಆವೇಶದಿಂದಲೇ "ವರ್ಷಕ್ಕೆ ತೊಂಬತ್ತು ಕೋಟಿ ಅಂದರೆ ಎಷ್ಟು ಅಂತ ಗೊತ್ತೇನ್ರೀ....?" ಎಂದು ಜೋರಾಗಿ ಪ್ರಶ್ನಿಸಿದರು.

ಆತ ಯಾವುದೋ ಗಹನವಾದ ವಿಚಾರವನ್ನು ಹೇಳುತ್ತಾರೆ ಎಂದು ಉಳಿದವರೆಲ್ಲರೂ ಆತನ ಕಡೆ ನೋಡಿದರು. ಆತ ಒಂದೇ ಉಸಿರಿನಲ್ಲಿ "ವರ್ಷಕ್ಕೆ

ತೊಂಬತ್ತು ಕೋಟಿ ಅಂದರೆ, ತಿಂಗಳಿಗೆ ಏಳುವರೆ ಕೋಟಿ, ದಿನಕ್ಕೆ ಇಪ್ಪತ್ತೈದು ಲಕ್ಷ, ಗಂಟೆಗೆ ಸುಮಾರು ಒಂದು ಲಕ್ಷ ಐದು ಸಾವಿರ, ನಿಮಿಷಕ್ಕೆ ಸುಮಾರು ಒಂದು ಸಾವಿರದ ಏಳು ನೂರ ಐವತ್ತು ರೂಪಾಯಿಗಳು..." ಎಂದು ಹೇಳಿದಾಗ ಎಲ್ಲರಲ್ಲೂ ವಿದ್ಯುತ್ ಸಂಚಾರವಾಗಿತ್ತು. ಒಬ್ಬರು "ಗಂಟೆಗೆ ಲಕ್ಷ ಅಂದ್ರೆ ಏನಪ್ಪಾ ! ಹಿಂದೆ ಭೋಜ ಮಹಾರಾಜ ಅತ್ಯುತ್ತಮ ಕಾವ್ಯಕ್ಕೆ ಅಕ್ಷರಲಕ್ಷ ಅಂತ ಬಹುಮಾನ ಕೊಡ್ತಾ ಇದ್ದನಂತೆ. ಬಿಡಿ, ಅದು ಜಾನಪದ ಕತೆ ಅಂತ ಸುಮ್ಮನಾಗಬಹುದು. ಆದರೆ ಇಲ್ಲಿ, ಈವಾಗ, ನಮ್ಮ ಕಣ್ಣ ಮುಂದೇನೇ ಗಂಟೆಗೆ ಲಕ್ಷ ಸಂಬಳ ಅಂದರೆ....!?" ಎಂದರು.




ಹಿರಿಯರ ಎಡಗಡೆ ಕುಳಿತಿದ್ದ ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಉಚಿತ ವಿದ್ಯಾರ್ಥಿ ಮಂದಿರ ನಡೆಸುತ್ತಿದ್ದವರು "ಅವರ ಒಂದು ಗಂಟೆ ಸಂಬಳದಲ್ಲಿ ನಮ್ಮ ನಲವತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತವಾಗಿ ಒಂದು ತಿಂಗಳು ಊಟ ಹಾಕಬಹುದು. ಅವರ ಒಂದು ದಿನದ ಸಂಬಳದಲ್ಲಿ ಅವರನ್ನೆಲ್ಲ ಎರಡು ವರ್ಷಗಳು ಸಂಭಾಳಿಸಬಹುದು..." ಎಂದರು. ಲೆಕ್ಕದ ಮೇಷ್ಟ್ರು "ಅಷ್ಟೇ ಅಲ್ಲಪ್ಪಾ.. ನಿಮಿಷಕ್ಕೆ ಒಂದು ಸಾವಿರದ ಏಳುನೂರ ಐವತ್ತು ಅಂದರೆ ಸೆಕೆಂಡಿಗೆ ಇಪ್ಪತ್ತೊಂಬತ್ತು ರೂಪಾಯಿ. ತಮಾಷೆ ಅಂದ್ರೆ, ಒಂದು ಬಾರಿ ಆತ ಉಸಿರಾಡಿದರೆ ನೂರು ರೂಪಾಯಿ! ನಾವೆಲ್ಲ ಹೀಗೆ ಮಾತಾಡ್ತಾ ಇದ್ದೀವಿ ಅಂತ ಆತನಿಗೆ ಗೊತ್ತಾಗಿ, ಆತ ಒಂದು ನಿಟ್ಟುಸಿರು ಬಿಟ್ಟರೆ, ಅದಕ್ಕೆ ಇನ್ನೂರೈವತ್ತು ರೂಪಾಯಿ! ಏನ್ ಹೇಳ್ತೀರಾ?" ಎಂದರು.

ಎಲ್ಲರ ಮಾತು ನಿಂತು ಹೋಯಿತು. ತಮ್ಮ ತಮ್ಮ ನಿವೃತ್ತಿ ವೇತನವನ್ನು ನೆನೆಸಿಕೊಂಡು ಅವರೆಲ್ಲರ ಮನಸ್ಸು ಸ್ವಲ್ಪ ಪೆಚ್ಚಾಯಿತು. ಇವರನ್ನೆಲ್ಲ ನೋಡಿ ಹಿರಿಯರು ತಮ್ಮ ಬಿಳಿ ಮೀಸೆಯ ಕೆಳಗೆ ನಗುತ್ತಿದ್ದರು. ಅದನ್ನು ಗಮನಿಸಿದ ಉಳಿದವರು "ನಿಮಗೇನೂ ಅನ್ನಿಸುವುದೇ ಇಲ್ಲವೇ ಸಾರ್!" ಎಂದು ಪ್ರಶ್ನಿಸಿದರು. ಹಿರಿಯರು "ಖಂಡಿತ ಅನ್ನಿಸುತ್ತಪ್ಪಾ ಇಷ್ಟು ಸಂತೋಷ ಪಡಬೇಕಾದ ವಿಚಾರಕ್ಕೆ ನೀವೆಲ್ಲ ಹೀಗೆ ದುಃಖ ಪಡ್ತಾ ಇದ್ದೀರಲ್ಲ ನಿಮ್ಮನ್ನು ನೋಡಿ 'ಅಯ್ಯೋ' ಅನ್ನಿಸ್ತು. ಕೋಟಿ! ನಿನಗಿಲ್ಲ ಸಾಟಿ!" ಎಂದು ನಗುತ್ತಾ ಹೇಳಿದರು.

"ಹಾಗಂದ್ರೆ ಏನು ಸರ್...?" ಎಲ್ಲರೂ ಒಕ್ಕೊರಲಿನಿಂದ ಪ್ರಶ್ನಿಸಿದರು. ಹಿರಿಯರು

"ಇನ್ನೇನು ಮತ್ತೆ...., ನಾನು ಪದವಿ ಮುಗಿಸಿದಾಗ ಕೆಲಸ ಸಿಕ್ಕುವುದೇ ಕಷ್ಟವಿತ್ತು. ಕೆಲಸ ಸಿಕ್ಕಿದರೂ ಸಂಸಾರ ತೂಗಿಸುವುದು ಕಷ್ಟವಿತ್ತು. ಬರುತ್ತಾ ಬರುತ್ತಾ ಎಷ್ಟೋ ಸುಧಾರಿಸ್ತು.. ಆಗೆಲ್ಲಾ ಎಲ್ಲರೂ ಕೆಲಸಕ್ಕೆ ಅಮೆರಿಕಾ, ಇಂಗ್ಲೆಂಡ್ ಅಂತ ಬಾಯಿಬಾಯಿ ಬಿಡ್ತಾ ಇದ್ರು. ಈಗ ನೋಡಿ ಪ್ರಪಂಚಾನೇ ತಿರುಗಿ ನೋಡುವಂತೆ ಸಂಬಳವನ್ನು ನಮ್ಮ ದೇಶದ ಉದ್ಯಮಗಳು ಕೊಡ್ತಾ ಇವೆ. ಇದು ನಾವು ಹೆಮ್ಮೆ ಪಡಬೇಕಾದ ವಿಚಾರ ಅಲ್ವಾ? ಒಬ್ಬರಿಗೆ ಆ ಸಂಬಳ ಬರ್ತಾ ಇದೆ ಅಂದರೆ, ನಿಮ್ಮ ಮಕ್ಕಳಿಗೋ ಮೊಮ್ಮಕ್ಕಳಿಗೋ ಅಂತಹ ಸಂಬಳದ ಕೆಲಸಕ್ಕೆ ತಕ್ಕವರಾಗುವಂತೆ ತಯಾರು ಮಾಡಿ. ಅಷ್ಟೇ ಅಲ್ಲ, ಅಂಥ ಸಂಬಳ ಕೊಡುವ ಉದ್ಯಮವನ್ನು ಸ್ಥಾಪಿಸುವುದಕ್ಕೆ ಸೂಕ್ತ ತಯಾರಿ ಮಾಡಿಕೊಳ್ಳಲು ಪ್ರೋತ್ಸಾಹ ಕೊಡಿ....ಏನಂತೀರಿ....!?" ಎಂದರು. ಇದನ್ನು ಕೇಳಿ ಎಲ್ಲರ ಬಾಡಿದ ಮುಖಗಳು ಅರಳಿದವು. "ಹೌದು..ಹೌದು..ನೀವು ಅಪರಂಜಿಯಂಥ ಮಾತು ಹೇಳಿದ್ರಿ ಸಾರ್" ಎಂದು ಎಲ್ಲರೂ ತಲೆಯಾಡಿಸಿದರು. ಹಿರಿಯರು "ಕೆಲಸಕ್ಕೆ ತಕ್ಕ ಕೂಲಿ ಅಂತ ಕೇಳಿಲ್ಲವೇ? ಆ ಕೋಟಿ ರೂಪಾಯಿ ಕೂಲಿ ಲೆಕ್ಕಾಚಾರ ಇಲ್ಲಿಗೇ ಬಿಟ್ಟು ಬಿಡಿ, ಈಗ ನಮ್ಮ ಬೈತ್ರಿ ಕಾಫಿಗೆ ನಡೆಯಿರಿ...." ಎಂದು ಮೇಲೆದ್ದರು.

●

## "ಮ್ಯಾಜಿಕಲ್ ಅನುಭವ" ವಿಶೇಷಾಂಕ

ಸೆಪ್ಟೆಂಬರ್ 2024 ರ ಸಂಚಿಕೆಯನ್ನು "ಮ್ಯಾಜಿಕಲ್ ಅನುಭವ" ವಿಶೇಷಾಂಕವನ್ನಾಗಿ ಹೊರತರುತ್ತಿದ್ದೇವೆ. ನಿಮಗೆ ಆಪ್ತವಾದ, ಮುದವನ್ನು ತಂದ, ಮರೆಯಲಾಗದ, ಅಪೂರ್ವ ಅನುಭವವೊಂದನ್ನು ದಾಖಲಿಸುವ ಬರಹಕ್ಕೆ ಇದೊಂದು ಸುವರ್ಣಾವಕಾಶ. ಅನುಭವವು ಒಂದು ನಾಟಕವೇ ಆಗಬೇಕೆಂದಿಲ್ಲ. ಸಂಗೀತ, ಭಾಷಣ, ಚುರುಕಿನ ಸಂಭಾಷಣೆ, ಪ್ರಕೃತಿಯ ಮನೋಹರ ದೃಶ್ಯ ಯಾವುದಾದರೂ ಆಗಬಹುದು. ಮುಖ್ಯವಾಗಿ ಅದು ಹೃದಯಸ್ಪರ್ಶಿಯಾಗಿರಬೇಕು. ಲೇಖನ ಸುಮಾರು ಐನೂರು ಪದಗಳನ್ನು (ಅಪರಂಜಿಯ ಎರಡು ಪುಟಗಳು) ಮೀರದಿರಲಿ. ಆಗಸ್ಟ್ ಮೊದಲ ವಾರದಲ್ಲಿ ನಿಮ್ಮ ಲೇಖನ ನಮ್ಮ ಕೈ ಸೇರುವಂತಾಗಲಿ. ಗುಡ್ ಲಕ್.

**–ಶಿವಕುಮಾರ್, ಸಂಪಾದಕ.**

## ಗಾದೆಗಳು

ಹಿಂದಿನವರು ಸಂಭಾಷಣೆಯಲ್ಲಿ ಮಾತುಮಾತಿಗೂ ಗಾದೆಗಳನ್ನು ಸೇರಿಸುತ್ತಿದ್ದರು... ಈಗಿನವರಿಗೆ ಆ ರೂಢಿ ತಪ್ಪಿದೆ...(ಮಾತೇ ಅಪರೂಪ...ಗಾದೆಗಳಿಗೆ ಹೋದ್ರಿ...)

***

**ಗಾದೆ ಗೌರಜ್ಜಿ ಜೊತೆ ಒಂದು ಸಂಭಾಷಣೆ.**

"ಏನಜ್ಜೀ, ಚೆನ್ನಾಗಿದೀರಾ?"

"ಏನೋಹೀಗಿದೀನಿ ನೋಡಪ್ಪಾ– ಊರು ಹೋಗು ಅನ್ನುತ್ತೆ, ಕಾಡು ಬಾ ಅನ್ನುತ್ತೆ"

"ಯಾಕಜ್ಜೀ ಹಾಗಂತೀರಾ?"

"ಮತ್ತಿನ್ನೇನಪ್ಪಾ? ನನ್ನಂಥೋರು ಇನ್ನೆಷ್ಟು ಕಾಲ ಬದುಕಿರ್ಬೇಕು? ಊರಿಗೆ ಆಳಲ್ಲ– ಸ್ಮಶಾನಕ್ಕೆ ಹೆಣ ಅಲ್ಲ."

"ಬಿಡ್ತು ಅನ್ನಿ ಅಜ್ಜಿ, ನಿಮ್ಮಂಥೋರು ಇರ್ಬೇಕು ಮನೇಲಿ. ಚಿಕ್ಕೋರು ತಪ್ಪು ಮಾಡದ ಹಾಗೆ ನೋಡ್ಕೊಳ್ಳಕ್ಕೆ, ತಿದ್ದಿ ಬುದ್ಧಿ ಹೇಳೋಕೆ."

"ಅದೇನೋ ನಿಜಾನಪ್ಪ–ಮನೆಗೊಂದು ಮುದಿ ಮೊರಡು, ಒಲೆಗೊಂದು ಕೊದೆ ಕೊರಡು ಅಂತಾರಲ್ಲ. ಆದ್ರೂ ಈಗಿನವು ನನ್ನ ಮಾತೆಲ್ಲಿ ಕೇಳ್ತಾವೆ? ಏತಿ ಅಂದ್ರೆ ಪ್ರೇತಿ ಅಂತಾವೆ."

"ಅಂದ ಹಾಗೆ....ಎಲ್ಲಿ ನಿಮ್ಮ ಮೊಮ್ಮಕ್ಳು? ಕಾಣ್ತಾ ಇಲ್ಲ."

"ಅವೇನು ಬೆಲ್ಲ ಜಜ್ಜಿದ ಕಲ್ಲೇ, ಒಂದೇ ಕಡೆ ಕೂತಿರಕ್ಕೆ? ಕಾಲಿಗೆ ಚಕ್ರ ಕಟ್ಕೊಂಡೋರಂಗೆ ಓಡಾಡ್ತಿರ್ತವೆ."

"ಅದ್ಸರಿ, ಹೋದ್ವಾರ ನಾ ಬಂದಾಗ ನೀವಿರ್ಲಿಲ್ವಲ್ಲಾ... ಎಲ್ಲೋಗಿದ್ರಿ?"

"ಮಗ್ಳ ಮನೇಗೆ ಹೋಗಿದ್ನಪ್ಪಾ.... ಅವ್ಳಿಗೆ ಹುಶಾರಿರ್ಲಿಲ್ಲ. "

"ಮತ್ತೇ... ಆವತ್ತು ಮಗಳೇನೋ ಅಂದ್ಳೂಂತ ಇನ್ನಲ್ಲಿಗೆ ಕಾಲಿಡಲ್ಲ ಅಂದಿದ್ರಿ?"

"ಅಂದಿದ್ದೆ; ಆದ್ರೂ ಮನಸ್ಸು ಕೇಳ್ಬೇಕಲ್ಲ? ಅಂಗಾಲಿಗೆ ಹೇಸಿಗೆ ಇಲ್ಲ, ಕರುಳಿಗೆ ನಾಚಿಕೆ ಇಲ್ಲ ನೋಡು."

"ಅಜ್ಜೀ.. ಆ ರಾಮಣ್ಣನ ಮಗ್ಳು ಕಾಲೇಜಲ್ಲಿ ಏನೋ ಗಲಾಟೆ ಮಾಡ್ಕೊಂಡ್ಳಂತೆ"

"ಸುಮ್ನಿರಪ್ಪಾ.. ಮಾಡಿದೋರ ಪಾಪ ಆಡಿದೋರ ಬಾಯಲ್ಲೀಂತ; ನಮಗ್ಯಾಕೆ ಬಿಡು."

"ರಾಮಣ್ಣ ಈಗ ಮಗಳ್ನ ಕಾಲೇಜಿಗೂ ಕಳಿಸಲ್ವಂತೆ?"

"ಊರು ಸೂರೆ ಹೋದ್ಮೇಲೆ ಕೋಟೆ ಬಾಗ್ಲು ಹಾಕಿದ್ರಂತೆ. ಅದಿರ್ಲಿ, ನಿನ್ಮಗ ಏನ್ಮಾಡ್ತಿದಾನೆ?"

"ಅವ್ನಿಗೇನಜ್ಜೀ.. ಚೆನ್ನಾಗಿ ತಿಂದುಂಡು ಗೂಳಿ ತರ ಇದಾನೆ."

"ಬಿಡ್ತು ಅನ್ನೋ... ಮಗ ಉಂಡ್ರೆ ಕೇಡಲ್ಲ, ಮಳೆ ಬಂದ್ರೆ ಕೇಡಲ್ಲ."

"ಆದ್ರೆ ಅವ್ನು ತಿನ್ನೋದ್ರಲ್ಲಿ ಮಾತ್ರ ಮುಂದೆ, ಓದೋದ್ರಲ್ಲಿ ಹಿಂದೆ. ಪ್ರಪಂಚ ಜ್ಞಾನ ಮಾತ್ರ ಚೆನ್ನಾಗಿದೆ."

"ಸರಿ ಬಿಡು, ಓದು ಒಕ್ಕಾಲು, ಬುದ್ಧಿ ಮುಕ್ಕಾಲು ಅಂತ. ಹೇಗಾದ್ರೂ ಬದುಕ್ಕೋತಾನೆ."

"ನಿಮ್ ತಮ್ಮನ ಮನೆಯವ್ರು ಹೇಗಿದ್ದಾರಜ್ಜಿ?"

"ಹೇಗಿರ್ತಾರೆ? ಎಲ್ಲಿದ್ದೀಯೋ ಬಸವಾ ಅಂದ್ರೆ ನೀನು ನಿಲ್ಸಿದಲ್ಲೇ ಅಂತ; ಆರಕ್ಕೇರ್ಲಿಲ್ಲ, ಮೂರಕ್ಕಿಳೀಲಿಲ್ಲ. ಸಂಸಾರ ನಡೀತಿದೆ. "

"ಸರಿ ಅಜ್ಜಿ, ಬರ್ತೀನಿ. ಬಹುಶಃ ಮುಂದಿನ ವಾರ ಬರಕ್ಕಾಗಲ್ಲ ಅನ್ಸತ್ತೆ."

"ನಂಗೊತ್ತಿಲ್ವೇ ನಿನ್ನ? ಬಂದೇ ಬರ್ತೀಯ......... ಬಂದೆ ಗವಾಕ್ಷೀಲೀಂತ."

...ಅಜ್ಜಿ ಮಾತಲ್ಲಿ ನಮ್ಮ ಗಾದೆಗಳ ಕಡು ಸತ್ಯ ಅರಿವಾಯಿತೇ?

## ಲೈಟ್–ಹೌಸ್..ಹಾಸ್ಯ

ಸುಮನಾ

"..ಲೋ..ಮಗಾ, ನಾಳೆ ಬರೋದು ಮಾಡ್ಬೇಡಪ್ಪಾ.. ನಮ್ಮನೆ ಗೃಹಪ್ರವೇಶಕ್ಕೂ ನೀನುಬರ್ಲಿಲ್ಲ..ಖಂಡಿತಾ ಮನೆ ನೋಡೋಕೆ ಬರಬೇಕು.. ಅಂತ ಗೆಳೆಯ ಹೇಳಿದ್ದ.. ಗೆಳೆಯನ ಆಹ್ವಾನ ಮನ್ನಿಸಿ....ಮಂಜಣ್ಣ ಹೊರಟಿದ್ದ ಕಾರಿನಲ್ಲಿ ಸ್ವಲ್ಪ ದೂರ ಕ್ರಮಿಸಿ, ಗೆಳೆಯ ಕೊಟ್ಟ ವಿಳಾಸದಲ್ಲಿನೋಡಿದಾಗ ಮನೆ ಕಾಣಲಿಲ್ಲ, ಫೋನಾಯಿಸಿ ಕೇಳಿದ..ಏ..ಗಂಗಣ್ಣ ಎಲ್ಲೋ ನೀನು ಕೊಟ್ಟ ಅಡ್ರೆಸ್‌ನಲ್ಲಿ ಇಲ್ವಲ್ಲೋ..?? ಅಂದ..

ತಾಳು ಮಂಜಣ್ಣ, ಹೊರಗೆ ಬಂದು ಕಾಲ್ಮಾಡ್ತೀನಿ, ಅಂತ ಹೊರಗೆ ಬಂದು ಕಾಲ್ಮಾಡಿದ".. ನೋಡೋ ಇಲ್ಲಿದೀನಿ..ಬಾ..ಅಂದ ಗಂಗಣ್ಣ..

"ಎಲ್ಲೋ, ಕಾಣ್ತಿಲ್ವಲ್ಲೋ..ಅಂದ.. ಸ್ವಲ್ಪ ತಲೆ ಎತ್ತಿನೋಡು.. ಅಂತ ಗೆಳೆಯ ಅಂದಾಗ ನೋಡಿ ದಂಗಾದ ಮಂಜಣ್ಣ..

ಗಾಳಿಯಲ್ಲಿ ತೇಲುವ ಮನೆಯಲ್ಲಿ ಗೆಳೆಯ ನಿಂತಿದ್ದ, ಮನೆ ಹೆಸರು "ಲೈಟ್ಹೌಸ್.." ಹಗುರವಾಗಿ ತೇಲುತ್ತಿತ್ತು ಆಗಸದಲ್ಲಿ "ಹಗುರ–ಗೃಹ.."



# ಗುಂಡಿಗಳ ಗಂಡಾಗುಂಡಿ


**ಕೆ.ಎಸ್.ಸೋಮೇಶ್ವರ**

ಇದು ಯಾವುದೇ ಊರಿನಲ್ಲಾದರೂ ಕಾಣುವಂತಹುದೇ ಅಗಿರುತ್ತದೆ. ನಮ್ಮ ದೇಶದಲ್ಲಂತೂ ನಮಗಳಿಗೆ ಇದೊಂದು ಪ್ರಕೃತಿಯ ಸಹಜ ಕೊಡುಗೆ ಎನ್ನಬಹುದಾಗಿದೆ. ಬೇರೆ ಊರು ಕೇರಿಗಳು ಬೇಡ, ನಮ್ಮ ಬೆಂಗಳೂರಿನಲ್ಲಿನ ವಿಚಾರಕ್ಕೆ ಬರೋಣ. ನಮ್ಮ ಬೆಂಗಳೂರಿಗೆ ಅನೇಕಾನೇಕ ಅನ್ವರ್ಥನಾಮಗಳಿವೆ. ಬಹಳ ಹಿಂದಿನ ಕಾಲ ಅದ್ಯಾವುದೋ ತ್ರೇತಾಯುಗವೋ, ದ್ವಾಪರವೋ ಅಲ್ಲ; ಇದೇ ಕಲಿಗಾಲದಲ್ಲೇ ನಡೆದಿರುವುದು. ಮೊದ ಮೊದಲಿಗೆ ಪೆನ್ಷನರ್ಸ್ ಪ್ಯಾರಡೈಸ್ ಎನ್ನುತ್ತಿದ್ದರು.. ಸುಮಾರು ಅದೇ ಸಮಯದಲ್ಲೇ ಇದು ಗಾರ್ಡನ್ ಸಿಟಿ ಎಂಬ ಹೆಸರು ಪಡೆದುಕೊಂಡಿತು. ಆಗೇನು ಎಲ್ಲೆಲ್ಲು ಹಸಿರೇ ಉಸಿರು, ಹಸಿರೇ ಹಸಿರು. ಕಾಣುತ್ತಿದ್ದವು. ಕಾಲ ಬದಲಾದಂತೆ ಇದೂ ಬದಲಾಗಬೇಕಲ್ಲವೇ? ಇದು ಪ್ರಕೃತಿ ನಿಯಮ ಎನ್ನುತ್ತಾರೆ. ಆದರೆ, ನಾವುಗಳು ಪ್ರಕೃತಿಯನ್ನೇ ಬದಲಿಸುವ ಸರದಾರರು. ನಮ್ಮೂರು ಈ ಮೊದಲು ಕೆರೆಗಳ ಬೀಡಾಗಿದ್ದಿತು. ಅದು ಬದಲಾಗಿ ಮಳೆ ಬಂದರೆ ರಸ್ತೆಗಳೆಲ್ಲ ಕೆರೆಗಳಾಗಿಬಿಡುತ್ತವೆ. ಆ ಸಮಯದಲ್ಲಿ ಗಾಳಿ ತುಂಬಿದ ತೇಲು ತಟ್ಟೆಗಳೇ ಜನರಿಗೆ ತೇಲಾಟ ಈಜಾಟಕ್ಕೆ ಸಾಧನ. ಆಗ ಇದನ್ನು ತೇಲುವ ನಗರ ಎನ್ನಬಹುದಾಗಿದೆ.

ಮುಂದೆ ನಗರ ಎಲ್ಲ ದಿಕ್ಕಿನಲ್ಲೂ ಬೆಳೆಯುತ್ತ ಹೋದಂತೆ ಹಸಿರು ಕಡಿಮೆಯಾಗುತ್ತಾ ಭದ್ರ ಭವ್ಯವಾದ ಕಾಂಕ್ರಿಟ್ ಕಟ್ಟಡಗಳು ಬುನಾದಿ ಹಾಕಿದವು. ಅದರಿಂದ ಇದನ್ನು ಕಾಂಕ್ರಿಟ್ ಸಿಟಿ ಎನ್ನಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಇದನ್ನು ಗಾರ್ಬೇಜ್ ಸಿಟಿ ಅಂತಲೂ ಹೆಸರಿಸುತ್ತಾರೆ. ಆದರೆ, ಇದಕ್ಕೆ ಈ ರೀತಿ ಹೆಸರು ತರಲು ಅಂತಹ ಹಲವು ಮಹಾನುಭಾವರುಗಳ ಕೈ ಚಳಕಗಳೇ ಕಾರಣ. ಮೊದಲೆಲ್ಲಾ ರಸ್ತೆ ಬದಿಯಲ್ಲಿ ಒಂದು ಕಸದ ತೊಟ್ಟಿ ಇರುತ್ತಿತ್ತು. ಸುತ್ತ ಮುತ್ತಲಿನವರು ತಮ್ಮ ಮನದ, ಅಲ್ಲ... ಮನೆಯ, ಕೊಳಚೆಯನ್ನು ತುಂಬಿಕೊಂಡು ಅದರಲ್ಲಿ ಸುರಿಯಬೇಕು. ಅದರ ಮುಂದಿನ ದಾರಿಯಲ್ಲಿ ಅದನ್ನು ಅದಕ್ಕಾಗಿ ನಿಯಮಿತ ಮಂದಿ ಸಾಗಿಸುತ್ತಾರೆ. ಆದರೆ, ಈ ಕೊಳೆಯೆಲ್ಲಾ ಅ ತೊಟ್ಟಿಯೊಳಗೇ ಇರುತ್ತಿತ್ತೇ ? ಇಲ್ಲ. ಸ್ವಲ್ಪ ಭಾಗ ಮಾತ್ರ. ಉಳಿದದ್ದು ಅದರ ಸುತ್ತಲೂ ಅಲಂಕಾರಿಕವಾಗಿ ಚೆಲ್ಲಿರುತ್ತಿತ್ತು. ಈಗ ಆ ತೊಟ್ಟಿಗಳಿಲ್ಲ. ಮನೆ ಮನೆಗೂ ಒಬ್ಬ ಶ್ರಮಿಕ ಬರುತ್ತಾನೆ. ಹಸಿ, ಒಣ ಎಂದು ವಿಭಾಗಿಸಿ ನೀಡಿದ್ದನ್ನು ಪಡೆದು ನಮ್ಮನ್ನು ಸ್ವಚ್ಛಗೊಳಿಸುತ್ತಿರುತ್ತಾನೆ. ಆದರೂ, ಯಾವುದೇ ರಸ್ತೆ ಬದಿಯ ಮೂಲೆಗೆ ಹೋದರೂ ಅಲ್ಲೊಂದಿಷ್ಟು ಕಸದ ಗುಡ್ಡೆ ಬಿದ್ದಿರುತ್ತದೆ. ಕೆಲವೆಡೆ 'ಇಲ್ಲಿ ಕಸ ಸುರಿದರೆ ಜುಲ್ಮಾನೆ' ಅಂತ ದಪ್ಪ ಅಕ್ಷರದಲ್ಲಿ ಬರೆದಿರುತ್ತಾರೆ. ಆದರೆ, ರೂಲ್ಸ್ ಅನ್ನು ಬ್ರೇಕ್ ಮಾಡುವುದರಲ್ಲೇ ಆನಂದ ಕಾಣುವ ಪ್ರಬುದ್ಧ ನಾಗರಿಕರು ಅದರ ಕೆಳಗೆಯೇ ಸುರಿದು ವಿಲಕ್ಷಣ ಆನಂದ ಹೊಂದುತ್ತಾರೆ. ಕೆಲವೆಡೆ ಎಲ್ಲ ಧರ್ಮದ ದೇವರ ಪಟಗಳನ್ನು ಇಟ್ಟು ಕಸ ಸುರಿಯದಿರಲು ದೈವ ಶಾಪದ ಭಯ ಹುಟ್ಟಿಸುತ್ತಾರೆ. ಆದರೆ, ಅಲ್ಲಿಯೇ ಆ ದೇವರ ಕಾಲಡಿಯೇ ಕಸಕ್ಕೆ ಮೋಕ್ಷ ಸಿಗುತ್ತಿರುತ್ತದೆ. ಈ ದೇವರ ಪಟಗಳ ಕಲ್ಪನೆ ಹೊಸತಲ್ಲ. ದಶಕಗಳ ಹಿಂದೆಯೇ ಅದನ್ನು ನಗರದ ಹಲವು ವಾಣಿಜ್ಯ ಪ್ರದೇಶಗಳಲ್ಲಿ ಕಾಣ ಬಹುದಿತ್ತು. ಆದರೆ, ಯಾವ ಕಾಲವಾದರೇನು, ನಾವು ಯಾವ ದೇವರಿಗೂ ಹೆದರಲ್ಲ ಅಂತ ಕಸ ಅಲ್ಲೇ ಹೆಚ್ಚಾಗಿ ಮನೆ ಮಾಡಿಕೊಂಡಿರುತ್ತದೆ. ಇನ್ನು ಎ.ಟಿ.ಎಮ್.ಗಳಲ್ಲಿ ಒಂದು ಸಣ್ಣ ಕಸದ ಡಬ್ಬಿ ಇಟ್ಟಿರುತ್ತಾರೆ. ಅಲ್ಲಿ ಯಂತ್ರ ಉಪಯೋಗಿಸಿದ ಬಳಿಕ ಬರುವ

ಕಾಗದದ ಚೂರನ್ನು ಬೇಡವಾದ್ರೆ ಅದರೊಳಗೆ ಹಾಕ ಬೇಕು. ಆದರೆ ನಮ್ಮ ನಾಗರೀಕರಿಗೆ ಅದು ಬಹಳ ಕಷ್ಟ. ಹೀಗಾಗಿ ಆ ಕಾಗದದ ಚೂರುಗಳು ಡಬ್ಬಿಯ ಸುತ್ತಲೂ ಚೆಲ್ಲಾಡಿರುತ್ತದೆ.

ಇನ್ನು ತೀರ ಇತ್ತೀಚಿನ ನಮ್ಮ ಬೆಂಗಳೂರಿನ ಗುಣವಾಚಕ. 'ಗುಂಡಿಗಳ ನಗರ'. ಒಂದು ಸ್ವಲ್ಪ ಸ್ಟೈಲಾಗಿ ಹೇಳಬೇಕೆಂದರೆ ' "ಪಾಟ್ ಹೋಲ್ ಸಿಟಿ". ಇದಕ್ಕೆ ಪೂರಕವಾಗಿ ಮೈ ಕೈ ಉಳುಕು ತೆಗೆಯಲು ಬಳಸುವ ಒಂದು ಮುಲಾಮಿನ ಜಾಹಿರಾತು ಟಿವಿಗಳಲ್ಲಿ ಬರುತ್ತದೆ. ಅದರಲ್ಲಿ ಒಬ್ಬ ಮಕ್ಕಳ ಬಗೆಗಿನ ಕಾಳಜಿಯ ತಾಯಿ (ಎಲ್ಲ ತಾಯಂದಿರೂ ಕಾಳಜಿ ವಹಿಸಿಯೇ ಇರುತ್ತಾರೆ ಎಂಬುದು ನಿತ್ಯ ಸತ್ಯ) ತನ್ನ ಮಗಳ ಪಠ್ಯೇತರ ಚಟುವಟಿಕೆಗಳಿಗೆ ಕುಂದಾಗದಂತೆ ಅವಳನ್ನು ತನ್ನ ದ್ವಿಚಕ್ರ ವಾಹನದಲ್ಲಿ ಕರೆದೊಯ್ದು ವಾಪಸ್ ಬರುತ್ತಾರೆ. ಅದೇಕೋ ಅವರ ಗಾಡಿ ಓಡುವ ರಸ್ತೆಗಳೆಲ್ಲಾ ಗುಂಡಿ ಮಯ. ಅವುಗಳ ಮೇಲೆ ರೈಡಿಂಗ್, ಜಂಪಿಂಗ್, ಸ್ಕಿಪಿಂಗ್ ಎಲ್ಲ ರೀತಿಯ ಸರ್ಕಸ್ ಮಾಡಿ ಗುರಿ ಮುಟ್ಟಿ ಬರುತ್ತಿರುತ್ತಾರೆ. ಮನೆಗೆ ಬಂದ ಮೇಲೆ ಬೆನ್ನು ನೋವು. ಅದಕ್ಕೆ ಮುಲಾಮಿನ ಲೇಪನ. ಅದು ಯಾರು ಮಾಡಬೇಕು? ಅವರ ಹಿಸ್ ಮ್ಯಾಡಮ್ಸ್ ವಾಯ್ಸ್ (ಹೆಚ್.ಎಮ್.ವಿ) ಅಂದಿನ ಹೆಚ್.ಎಮ್.ವಿ ಅಲ್ಲ ಗಂಡನೆಂಬುವ ಪ್ರಾಮಾಣಿಕ ಪ್ರಾಣಿ ಆ ಕೆಲಸ ಮಾಡುತ್ತಿರುತ್ತಾನೆ. ಆ ಮುಲಾಮಿನ ಹೆಸರೇನು ಗೊತ್ತೇ? ಮೂವ್ ಅಂತೆ. ಅದನ್ನು ನೀವದಿದ್ದರೆ ಅವರ ನೋವು ಮೂವ್ ಆಗಲ್ಲ. ಅದೇ ರೀತಿ ರಸ್ತೆ ಗುಂಡಿಗಳಿಲ್ಲದಿದ್ದರೆ ಈ ಮೂವ್ ಎಂಬ ಮುಲಾಮು ಮೂವ್ ಆಗುವುದೇ ಇಲ್ಲ. ಅದಕ್ಕಾಗಿಯೇ ನಮ್ಮ ನಗರ ಪಾಲಕರು ರಸ್ತೆಯ ಮೇಲಿನ ಗುಂಡಿಗಳನ್ನು ಜತನವಾಗಿ ಕಾಪಾಡುತ್ತಿರುತ್ತಾರೆ.



# ಗೆಜ್ಜೆನಾದ

**ವಿಲಾಸ ನಾ ಹುದ್ದಾರ**

ಗೆಜ್ಜೆನಾದ ಅಂದ ಕೂಡ್ಲೇ ಎಲ್ಲಾರಿಗೂ ಸುಮಧುರ ನಾದದ ಅನುಭವ ನೆನಪಿಗೆ ಬರ್ತದ. ಆದ್ರ ನಾ ಬರೀಲಿ ಕತ್ತದ್ದು ಬೇರೆಯೇ ಗೆಜ್ಜೆನಾದದ ಅನುಭವ. ನಾನು 2023 ರೊಳಗ ಅಮೇರಿಕಾದ ಅಟ್ಲಾಂಟಾಕ್ಕ ನನ್ನ ಮಗ ಪವನ, ಸೊಸೆ ಶ್ವೇತಾ ಮತ್ತ ಮೊಮ್ಮಕ್ಕಳು ಆರೋಹಿ, ಅವ್ನಿಜೊತಿಗೆ ಆರ ತಿಂಗಳ ಇದ್ದ ಮಜಾ ಮಾಡ್ಲಿಕ್ಕೆ ಹೋಗಿದ್ದೆ. ನಮ್ಮ ಮನೀ ಸುತ್ತಲೂ ಸಾಕಷ್ಟು ನಮ್ಮ ಭಾರತದವರು ಇದ್ರು. ನಾ ಹೋದ ಸ್ವಲ್ಪ ದಿವಸಕ್ಕ ಎಲ್ಲಾರದೂ ಪರಿಚಯ ಆತು. ನಾ ಹೋದ ಎರಡ ದಿವಸಕ್ಕ ಸಿದ್ಧ ಮತ್ತ ಅರುಣಾ ದಂಪತಿಗಳ ಮನೀ ವಾಸ್ತು ಶಾಂತಿಗೆ ನನಗ ಔತಣಾ ಬಂತ. ಎಲ್ಲಾರ ಜೋಡಿ ನಾನೂ ಹೋದೆ. ವಿಶಾಲವಾದ ಎರಡ ಅಂತಸ್ತಿನ ಮನೀ. ಸುತ್ತಲೂ ಸಾಕಷ್ಟು ಜಾಗಾ. ಅಮೇರಿಕಾದೊಳಗ ಜಾಗಾಕ್ಕ ಏನ ಕೊರತಿ ಇಲ್ಲಾ. ಮನೀ ಹಿಂದ ಹಸಿರಿನಿಂದ ಕಂಗೊಳಿಸುತ್ತಿರುವ ಕಾಡು. ಮನಕ್ಕ ಮುದ ನೀಡುವ ವಾತಾವರಣ. ಹೀಂಗ ಸಮೀರ–ದಿವ್ಯಾ, ಜನಾರ್ದನ–ಜ್ಯೋತ್ನಾ, ಸಂಕೇತ–ವೈಶಾಲಿ, ವಿನೀತ–ರಶ್ಮಿ ದಂಪತಿಗಳು ಇವರೆಲ್ಲಾ ಅವಾಗಾವಾಗ ತಮ್ಮ ಮನೀಗೆ ಚಹಾಕ್ಕ ಕರೀತಿದ್ರು. ಸುತ್ತ ಮುತ್ತಒಂದ ಸಣ್ಣ ಭಾರತ ಇದ್ದಂಗ ಅದ. ನನಗ ಭಾರದದೊಳಗ ಇದ್ದಂಗ ಅನಿಸ್ತು. ಒಂದ ಸಂಜೀಕ ವಿಜಯ–ಮಾನಸಾ ದಂಪತಿಗಳು ಚಹಾಕ್ಕ ಕರದಿದ್ರು. ಎಲ್ಲರೂಕೂಡಿ ಹೋಗಿದ್ವಿ. ಈ ದಂಪತಿಗಳು ಬೆಂಗಳೂರದವರು. ಹರಟೆ ಹೊಡಕೋತ ಕೂತಾಗ ನನ್ನ ಕೆಲವು ಲೇಖನಗಳು " ಅಪರಂಜಿ" ಮಾಸಿಕದೊಳಗ ಪ್ರಕಟ ಆಗೋ ವಿಷಯ ಬಂತು. ಆಗ ವಿಜಯತಮ್ಮ ಜೀವನದೊಳಗ ನಡದ ಗೆಜ್ಜೆನಾದದ ಒಂದ ಘಟನೆ ಹೇಳೀದ್ರು.

ಕೆಲವು ವರ್ಷಗಳ ಹಿಂದೆ ಇವರು ಸೂಟಿ ಒಳಗ ಮಗ ಸಿದ್ಧಾಂತನ್ನ ಕರ್ಕೊಂಡ ಬೆಂಗಳೂರಿಗೆ ಬಂದಿದ್ರು. ಸ್ವಲ್ಪ ದಿವಸ ಆರಾಮಾಗಿ ಸಮಯ ಕಳೀಬೇಕಂತ ಮಾನಸಾ ಅವರ ಸೋದರಮಾವ ಶ್ರೀ ಮುಕುಂದ ಮೋರೆ ಅವರ ತೋಟದ ಮನೀಗೆ (ಫಾರ್ಮ ಹೌಸ್) ಹೋಗಿದ್ರು. ತೋಟದ ಮನೀ ಇರೋದು ಕನಕಪುರದ ಕೋಟೆ ಹತ್ರ. ಎದುರಿಗೆ ಮಾರುತಿ ಗುಡೀನೂ ಅದ. ತೆಂಗು, ಹಲಸು, ಸಂಪಿಗೆ ಮುಂತಾದ ಮರಗಳು ಮತ್ತು ವಿವಿಧ ಹೂವುಗಳ ಬಳ್ಳಿಗಳಿಂದ ಕಂಗೊಳಿಸುತ್ತಿರುವ ವಿಶಾಲವಾದ ತೋಟ. ಸ್ವಲ್ಪ ದೂರದೊಳಗ ಅರ್ಕಾವತಿ ಜುಳು ಜುಳು ಹರೀತಾಳ. ನಿಶ್ಯಬ್ದ ಇಲ್ಲೆ ಮನೀಮಾಡಿ, ಮನಸ್ಸಿಗೆ ಉಲ್ಲಾಸ ನೀಡುವ ಪರಿಸರ. ದಿನವೆಲ್ಲಾ ತೋಟಾ ಸುತ್ತಿ, ಸಾಕಾಗಿ ಮಲಗಿಕೊಂಡ್ರು. ಗಡದ್ದಾಗಿ ನಿದ್ದಿ ಹತ್ತಿತ್ತು. ನಡುರಾತ್ರಿಗೆ ಏನೋ ಸಣ್ಣದಾಗಿ ಸಪ್ಪಳ ಆಗಿ ವಿಜಯ ಅವರಿಗೆ ಎಚ್ಚರ ಆತು. ತೋಟದ ಒಂದ ಕಡೀಯಿಂದ ಸಾವಕಾಶ ಆಗಿ ಗೆಜ್ಜೆ ಸಪ್ಪಳ ಕೇಳಿಸಲಿಕ್ಕತ್ತು. ಅದು ಇವರ ಮಲ್ಕೊಂಡ ಕಿಡಕಿ ಹತ್ತರ ಬಂದಾಗ ಜೋರಾತು. ವಿಜಯಗೆ ಹೆದರಿಕಿ ಆಗಿ ಕೈ ಕಾಲು ನಡಗಲಿಕ್ಕತ್ತಿದ್ವು. ಮಿಸ್ಕಾಡಲಾರದ ಸುಮ್ಮನ ಕೂತ್ರು. ಆ ಗೆಜ್ಜೆ ಸಪ್ಪಳದ್ದಂಗ ಇದ್ದ ಆ ಶಬ್ದ ಕಡಿಮಿ ಆಕ್ಕೋತ ಹೋಗಿ ತೋಟದ ಇನ್ನೊಂದ ಮೂಲಿಯಿಂದ ಹೊರಟ ಹೋತು. ಇವರಿಗೆ ಸಿಕ್ಕಾಪಟ್ಟೆ ಹೆದರಿಕಿ ಆಗಿ ಮುಂದ ನಿದ್ದೀನ ಮಾಡಲಿಕ್ಕೆ ಆಗಲಿಲ್ಲಾ. ಏನಪಾ ಇದು, ದೆವ್ವಾ, ಗಿವ್ವಾ, ಮೋಹಿನಿ ಏನರೆ ಅದ ಏನ ಅಂತ ಹೆದರಿಕಿ ಆತು.

ಮುಂಜಾನೆ ಮನೀ ಅವರಿಗೆ ಹೇಳಬೇಕಂದ್ರ, ಏನಂತ ಹೇಳಬೇಕ ಅನ್ನೋ ಪ್ರಶ್ನೆ ಎದರ ಆತು. ಈ ಗೆಜ್ಜೆ ಸಪ್ಪಳದ ವಿಷಯಗೊತ್ತಿದ್ದು ಸುಮ್ನ ಇದ್ರ, ಕೆದಕಿತೆಗೆ ಯೋದು

ಭೊಲೋ ಅಲ್ಲಾ. ಒಂದ ವೇಳ್ಯಾ ಗೊತ್ತಿಲದ ಇದ್ದಿದ್ರ, ಸುಮ್ನ ಇದನ್ನ ಹೇಳಿ ಅವರಿಗೂ ಹೆದರಿಸಿದ್ಹಂಗ ಆಗ್ತದ. ಅಲ್ಲದ ಮಾನಸಾಗೂ ಹೇಳು ಹಂಗ ಇಲ್ಲಾ. ಹೇಳೀದ್ರ ಅನಗತ್ಯವಾಗಿ ಹೆದರಿಸಿದ್ಹಂಗ ಆಗ್ತದ. ಒಟ್ಟಿನ ಮ್ಯಾಲೆ ವಿಜಯಕನ ಫ್ಯುಜನ್ ಆತು. ಮರದಿವಸ ಮಲಕೊಳಲಿಕ್ಕೆ ಹೋದಾಗ ವಿಜಯಕಿಡಕಿ ಬಾಗಲಾ ಹಾಕಲಿಕ್ಕತ್ತು, ಅದನ್ನ ನೋಡಿ ಮಾನಸಾ, "ನಿನ್ನೆ ನಾನು ಕೇಳಿದ್ದ ಸಪ್ಪಳಾ ನೀವೂ ಕೇಳೀದ್ರೇನ?" ಪ್ರಶ್ನೆ ಹಾಕಿದಾಗ ಹೌದು ಅಂತತಲಿ ಆಡಿಸಿದ್ರು. ಇಬ್ಬರಿಗೂ ಹೆದರಿಕೆಗೆ ನಿದ್ದೀನ ಹತ್ತಲಿಲ್ಲಾ. ಆ ಸಪ್ಪಳ ಯಾವಾಗ ಬರತದೋ ಅಂತ ಕಾಯ್ಕೋತ ಕೂತ್ರು. ಇವರಿಗೇನ ನಿರಾಶೆ ಆಗಲಿಲ್ಲಾ. ಮಧ್ಯರಾತ್ರಿ ತೋಟದ ಒಂದ ತುದಿಯಿಂದ ಸಣ್ಣದಾಗಿ ಸುರು ಆದ ಸಪ್ಪಳಾ ಇವರ ರೂಮಿನ ಕಡೆ ಬಂದಾಗ ಜೋರಾಗಿ ಕೇಳಿಸ್ತು. ಆಮ್ಯಾಲೆ ಸಣ್ಣ ಆಕ್ಕೋತ ಹೋಗಿ ತೋಟದ ಇನ್ನೊಂದ ಕಡೀಯಿಂದ ಮಾಯ ಆತು. ಈ ರಾತ್ರೀನೂ ನಿದ್ದಿ ಇಲ್ಲಾ. ಇದು ಬಿಸಿ ತುಪ್ಪಾ ಆದ್ಹಂಗ ಆತು. ಉಗುಳೋ ಹಂಗೂ ಇಲ್ಲಾ, ನುಂಗೋ ಹಂಗೂ ಇಲ್ಲಾ.



ಮಾರನೇ ದಿವಸಾ ರಾತ್ರಿ ಊಟಕ್ಕ ಕೂಡೋದತಡಾ ಆತು. ಇವರ ಜೋಡಿ ಮುಕುಂದ, ಅವರ ಧರ್ಮಪತ್ನಿ ಬಿಂದು ಮತ್ತ ಮಗ ರಾಹುಲ, ಎಲ್ಲಾರೂ ಕೂಡಿ ವರ್ಡ್ಯಾಂಡದೊಳಗ ಹರಟೀ ಹೊಡ್ಕೋತ, ಮಜಾ ಮಾಡ್ಕೋತ ಊಟಾ ಮಾಡ್ಲಿಕತ್ತಿದ್ರು. ಸಣ್ಣದಾಗಿ ಸಪ್ಪಳಾ ಬರ್ಲಿಕತ್ತು. ಆ ಮನೀ ಮಂದೀಗೆ ಏನೂ ಅನಸಲಿಲ್ಲಾ, ಆದ್ರ ವಿಜಯ ಮತ್ತ ಮಾನಸಾ ಅವರಿಗೆ ಹೆದರಿಕಿ ಸುರು ಆಗಿ ಒಬ್ಬರ ಮಾರೀ ಒಬ್ಬರು ನೋಡ್ಕೊಂಡ್ರು. ಸಪ್ಪಳ ಹತ್ರ ಬರ್ತಿದ್ಹಂಗ, ಇಬ್ಬರು ಗಾಬರಿ ಆದ್ರು. ಅಷ್ಟರೊಳಗ ಮುಕುಂದ ಅಂದ್ರು, "ಓ ನಮ್ಮ ಮೋಹಿನಿಯರು ಬಂದ್ರು..." ಈ ಮಾತ ಕೇಳಿ ವಿಜಯ, ಮಾನಸಾ ಮತ್ತಷ್ಟು ಹೆದ್ರಿದ್ರು. ಇವರಿಬ್ಬರೂ ಹೆದರಿದ್ದು ನೋಡಿ ಮುಕುಂದ ನಕ್ಕೋತ ಅಂದ್ರು," ಇವು ನಮ್ಮ ಜೀರುಂಡೆ ಮೋಹಿನಿಯರು, ಪ್ರತಿದಿವಸ ಈ ಸಪ್ಪಳಾ ಮಾಡ್ಕೋತ ನಮ್ಮ ತೋಟದ ಪ್ರದಕ್ಷಿಣಿ ಹಾಕಿ, ನಾವ ಇದ್ದೀವಿ ಹೆದರಬ್ಯಾಡ್ರಿ ಅಂತ ನಮಗ ಹೇಳ್ತಾವ... ತಿಳೀತೇನ ವಿಜಯ–ಮಾನಸಾ....".

ಶ್ರೀ ಕೃಷ್ಣಾರ್ಪಣಮಸ್ತು


ಅಪರಂಜಿಯ 41ರ ಹಬ್ಬದ ಪ್ರಯುಕ್ತ
ಕೊರವಂಜಿ ಅಪರಂಜಿ ಟ್ರಸ್ಟ್ ಅರ್ಪಿಸುವ
ಕೈಲಾಸಂರ ಹಾಸ್ಯ ನಾಟಕ
ಹೋಂ
ರೂಲು
ನಿರ್ದೇಶನ
ವೈ. ವಿ. ಗುಂಡೂರಾವ್
ಮೈದಾನದ ಹೆಬ್ಬುಲಿ... ಮನೆಯ ಮೂಗಿಲಿ
ಮತ್ತು
ವೈ.ವಿ. ಗುಂಡೂರಾವ್ ಅವರ
ಕೈಲಾಸಂ ಝಲಕ್
ಭಾನುವಾರ 20.10.2024, ಸಂಜೆ 6 ಗಂಟೆಗೆ
ಸ್ಥಳ : ಡಾ॥ ಸಿ. ಅಶ್ವಥ್ ಕಲಾ ಭವನ
ಎನ್.ಆರ್. ಕಾಲೋನಿ, ಬಸ್ ನಿಲ್ದಾಣದ ಎದುರು
ಬಸವನಗುಡಿ, ಬೆಂಗಳೂರು-04
ಪ್ರವೇಶ ದರ
ರೂ. 150/-
ನಿರ್ವಹಣೆ:
ಬೇಲೂರು ರಾಮಮೂರ್ತಿ
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
ಮೇಲ್ಕಂಡ ಬ್ಯಾಂಕ್ ಖಾತೆಗೆ ಹಣ ಪಾವತಿ ಆದ ನಂತರ ಈ ಮೊಬೈಲ್ ನಂಬರ್‌ಗೆ
9845264304 ವಾಟ್ಸಪ್ ಮೂಲಕ ಸ್ಕ್ರೀನ್‌ಶಾಟ್ ಕಳಿಸಿಕೊಡಿ.
ಈಗಲೇ ಬುಕ್ ಮಾಡಿ ತಮ್ಮ ಸೀಟುಗಳನ್ನು ಖಾತರಿಗೊಳಿಸಿಕೊಳ್ಳಿ

**ದಂನಆ**

- ✓ ಆಪ್ಟರ್ ರಿನೌನ್ಸಿಂಗ್ ಆಲ್ ವರ್ಲ್ಡ್ಲಿ ಪೊಸೆಷನ್ಸ್ ಫಾರ್ ನಿರ್ವಾಣ ಐ ರಿಯಲೈಸ್ಡ್ ದಟ್ ಈ ಹ್ಯಾಡ್ ಬೀನ್ ಡ್ರ್ಯೂಪ್. ದಟ್ ವಾಸ್ ಮೈ ಎನ್‌ಲೈಟೆನ್‌ಮೆಂಟ್.
- ✓ ನೀನು ದೊಡ್ಡವರ ಜತೆ ಇದ್ದಿದ್ದರ ಬಗ್ಗೆ ನನಗೆ ಆಸಕ್ತಿ ಇಲ್ಲ. ನನಗೆ ಆಸಕ್ತಿ ಇರುವುದು ನೀನು ಬಿದ್ದವರ ಜತೆ ಇದ್ದಿದ್ದರ ಬಗ್ಗೆ.
- ✓ ಆಫ್ ಆಲ್ ದಿ ಹೋಂ ರೆಮೆಡೀಸ್ ಎ ಗುಡ್ ವೈಫ್ ಈಸ್ ದಿ ಬೆಸ್ಟ್.
- ✓ ಇಟ್ ಈಸ್ ನಾಟ್ ಷೇಮ್‌ಫುಲ್ ಟು ಬಿ ಎ ಫೂಲ್. ಬಟ್ ಬೀಯಿಂಗ್ ಪ್ರೌಡ್ ಆಫ್ ಒನ್ಸ್ ಇಗೊರೆನ್ಸ್ ಈಸ್ ಎ ಷೇಮ್.
- ✓ ಬದುಕೆಂದರೆ ನಿನ್ನ ಮುಂದೆ ವಿಶ್ವಾಸಾರ್ಹವಾಗಿ ಇರುವವರ ಬಗ್ಗೆ ಅಲ್ಲ. ಬದುಕೆಂದರೆ ನಿನ್ನ ಹಿಂದೆ ಪ್ರಾಮಾಣಿಕವಾಗಿರುವವರ ಬಗ್ಗೆ.
- ✓ ಪರ್ಫೆಕ್ಷನ್ ಮೀನ್ಸ್ ಡೂಯಿಂಗ್ ದೆ ಬೆಸ್ಟ್ ಬಟ್ ಕಾನ್ಫಿಡೆನ್ಸ್ ಮೀನ್ಸ್ ನೋಯಿಂಗ್ ಹೌ ಟು ಹ್ಯಾಂಡಲ್ ದಿ ವರ್ಸ್ಟ್.
- ✓ ಮಕ್ಕಳಿಗೆ ಅವರ ತಂದೆ ತಾಯಿಗಳೇ ಅತ್ಯುತ್ತಮ ಉದಾಹರಣೆಗಳಾಗಲು ಸಾಧ್ಯ.
- ✓ ಬಿಹೈಂಡ್ ಎವೆರಿ ಸ್ಟ್ರಾಂಗ್ ಪರ್ಸನ್ ದೇರ್ ಈಸ್ ಎ ಸ್ಟೋರಿ ದಟ್ ಗೇವ್ ದೆಮ್ ನೊ ಚಾಯ್ಸ್.
- ✓ ಹೇರಳವಾಗಿ ಸಿಗುವ ಅವಕಾಶ ಇದ್ದಾಗ ಕಡಿಮೆ ತೆಗೆದುಕೊಳ್ಳುವುದು ಅತ್ಯಂತ ಕಠಿಣಕರ.
- ✓ ರೈಟ್ ಆ್ಯಟಿಟ್ಯೂಡ್ ನೆವರ್ ಟೇಕ್ಸ್ ಯು ಟು ಎ ರಾಂಗ್ ಡೈರಕ್ಷನ್.
- ✓ ಏನೂ ಪ್ರತಿಕ್ರಿಯಸದೇ ಇರುವುದೂ ಒಂದು ಪ್ರತಿಕ್ರಿಯೆ. ಶಕ್ತಿಯುತ ಪ್ರತಿಕ್ರಿಯೆ.
- ✓ ದೇರ್ ಈಸ್ ನಥಿಂಗ್ ಮೋರ್ ಬ್ಯೂಟಿಫುಲ್ ದ್ಯಾನ್ ಸಮ್‌ಒನ್ ಹು ಗೋಸ್ ಔಟ್ ಆಫ್ ಹಿಸ್ ವೆ ಟು ಮೇಕ್ ಲೈಫ್ ಬ್ಯೂಟಿಫುಲ್ ಫಾರ್ ಅದರ್ಸ್.
- ✓ ನಿನ್ನ ವಿಶ್ವಾಸಕ್ಕಿಂತ ಪರ್ವತ ದೊಡ್ಡದಲ್ಲ. ಮೇಲೇರಿದಾಗ ಅದು ನಿನ್ನ ಕಾಲ ಬಳಿ ಇರುತ್ತದೆ.
- ✓ ದೇರ್ ಆರ್ ಟು ವೇಸ್ ಟು ಹ್ಯಾಂಡಲ್ ಎ ವುಮನ್ ಅಂಡ್ ನೊಬಡಿ ನೋಸ್ ಈದರ್ ಆಫ್ ದೆಮ್.

●

# ಈ ಲೈನು ಈ ಚುಕ್ಕಿ ಈ ಕಾಮಾ ಈ ಚುಕ್ಕಿ

ಎನ್. ರಾಮನಾಥ್

'ಎಡಿಟ್ ಮಾಡಿಕೊಡಿ ಸಾರ್' ಎಂದಳಾ ಬೆಡಗಿ. ಪುಸ್ತಕದ ಹಾಳೆಗಳನ್ನು ತಿರುಗಿಸುತ್ತಾ 'ರಂಗೋಲಿ ಕಲೆ ನನಗೆ ತಿಳಿದಿಲ್ಲ' ಎಂದೆ.

'ರಂಗೋಲಿ ಅಲ್ಲ ಸಾರ್' ಎಂದಳಾಕೆ. ಮತ್ತೆ ನೋಡಿದೆ. ಶಾಲೆಯಲ್ಲಿ ಮೇಷ್ಟ್ರಿಗೆ ತಿಳಿಯದಂತೆ ಚುಕ್ಕೆ ಆಟ ಆಡಲು ಹಾಕಿಕೊಂಡಷ್ಟೇ ಚುಕ್ಕೆಗಳು ಪುಟಪುಟದಲ್ಲೂ ಕಂಡವು. ಪುಸ್ತಕದ ಮೇಲಿನ ನನ್ನ ಅಕ್ಯೂಟ್ ನೋಟಕ್ಕೆ ಅವಳ ಕ್ಯೂಟ್ ನೋಟವನ್ನೂ ಸೇರಿಸಿದ ಆಕೆ 'ಅದು ಫುಲ್ ಸ್ಟಾಪ್ ಸಾರ್' ಎಂದಳು.

'ಫುಲ್ ಸ್ಟಾಪ್ ಎಂದರೆ ಒಂದು ಚುಕ್ಕೆ ಅಷ್ಟೆ'

'ಇದು ಸ್ತ್ರೀಯರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಭಂಗ ತರುವ ಹೇಳಿಕೆ. ನನ್ನ ಹಾಳೆ, ನನ್ನ ಬರಹ, ನನ್ನ ಚುಕ್ಕೆ. ಎಷ್ಟು ಇಟ್ಟರೇನು?'

ಕೋಪದಿಂದ ಕೆಂಪಾದ ಚೆಲುವೆಯ ಮುಖದ ಅಂದವೇ ಅಂದ, 'ಚೆಲುವೆಯೆ ನೀನು ರೇಗಲು; ಭಾಷಣವ ಕೊರೆವವನು ನೋಡುತಾ ಕೆಂಗಲ್ಲವ ಮರೆಯುವನೆಲ್ಲ ನುಡಿಗಳನು' ಎಂದು ಮನದಲ್ಲೇ ಹಾಡಿಕೊಂಡೆ. ಜೋರಾಗಿ ಹೇಳಿದರೆ ಹಸ್ತ–ಕಪೋಲ ತಾಡನದಿಂದ ಕೆಂಬಣ್ಣ ನನ್ನ ಕೆನ್ನೆಗೆ ವರ್ಗವಾಗುವ ಸಾಧ್ಯತೆಯಿತ್ತಲ್ಲ!

ನನ್ನ ಮೌನವನ್ನು ಸಮ್ಮತಿಯೆಂದು ಸ್ವೀಕರಿಸಿದ ಆಕೆ 'ಇಲ್ಲಿ ಹದಿನಾರು ಚುಕ್ಕೆ ಇಟ್ಟಿದ್ದೀನಲ್ಲ, ಇದು ಅವಳ ಮೌನವನ್ನು ಸೂಚಿಸುತ್ತದೆ' ಎಂದಳು.

'ಹದಿನಾರೇ ಏಕೆ?'

'ಅವಳು ಮನದಲ್ಲಿ ಇನ್ನೂ ಷೋಡಶಿ.'

ಪುಟ ತಿರುಗಿಸಿದೆ. ಒಂದೆಡೆ ಒಂಬತ್ತು ಚುಕ್ಕಿಗಳು ಕಂಡುಬಂದವು. 'ಅದು ಅವನ ಕೋಪದ ಸಂಕೇತ' ಎಂದಳವಳು.

'ಕೋಪಕ್ಕೇಕೆ ಒಂಬತ್ತು?'

'ಒಂದೊಂದು ಗ್ರಹಕ್ಕೆ ಒಂದೊಂದು ಚುಕ್ಕೆಯ ಲೆಕ್ಕದಲ್ಲಿ ನವಗ್ರಹಗಳಿಗೆ ಒಂಬತ್ತು. ಗಂಡಸಿಗೆ ಗ್ರಹಚಾರ ಕೆಟ್ಟಾಗಲೇ ಕೋಪ ಬರುವುದಲ್ಲವೆ?'

ಸರಿಯೇ. ಗಂಡಸಿನ ಕೋಪ ಹೊಟೇಲಿನ ಇಡ್ಲಿವಡೆಗೆ ಮೂಲ!

ಮುಂದಿನ ಪುಟದಲ್ಲಿ ಒಂದೇ ಚುಕ್ಕಿ ಇದ್ದ ವಾಕ್ಯದೆಡೆಗೆ ಅವಳ ಗಮನ ಸೆಳೆದೆ, 'ಓದಿ ಸಾರ್' ಎಂದಳು.

'ನಾರ್ತ್ ಇಂಡಿಯನ್ ರೋಟಿ ಇಡಲು ನೀಡುವ ತಟ್ಟೆಯಷ್ಟಗಲದ ಕಣ್ಣುಗಳು, ಎಣ್ಣೆಯಿಲ್ಲದ್ದಿದ ನೂಡಲ್ಸ್‌ನಷ್ಟು ನಯವಾದ ಕೆನ್ನೆಗಳು' ನಂತರ ಚುಕ್ಕಿ ಇದ್ದು, 'ಕಡುಬಿನ ಮೌಲ್ಡನ್ನು ಹೋಲುವ ತುಟಿಗಳು' ಎಂದು ಮುಂದುವರಿದಿತ್ತು.

'ಸೌಂದರ್ಯ ವಿವರಣೆಯ ಮಧ್ಯದಲ್ಲಿ ಚುಕ್ಕಿ ಏಕೆ?'

'ಗಮನಿಸಿ ಓದಬೇಕು ಸಾರ್. ಕೆನ್ನೆಗಳ ವರ್ಣನೆ ಬಂದಾಗ ಅದರ ಮೇಲಿಟ್ಟ ದೃಷ್ಟಿಬೊಟ್ಟನ್ನು ವರ್ಣಿಸುವ ಬದಲು ಸೂಚಿಸಿದ್ದೇನೆ. 'ಸೌಂದರ್ಯದ ಸುಂದರ ಚಿತ್ರಣವನ್ನು

ನೀಡಿದ್ದಾರೆ' ಅಂತ ವಿಮರ್ಶೆ ಬರೀಬೇಕಾದ್ರೆ ಈ ತರಹದ ಗಿಮಿಕ್ಸ್ ಬೇಕು ಸಾರ್' ಎಂದಳಾ ಮಾಡ್ರನ್ ಕಥೆಗಾರ್ತಿ.ಮೂರು ಪುಟಗಳ ನಂತರ ಮತ್ತಷ್ಟು ಚುಕ್ಕಿಗಳಿದ್ದವು. 'ಅದು ಆಶ್ಚರ್ಯಸೂಚಕ ಚುಕ್ಕಿಗಳು' ಎಂದಳವಳು. ಅದೇ ಪುಟದ ಕೆಳಭಾಗದಲ್ಲಿ ಕೆಲವು ಆಶ್ಚರ್ಯಸೂಚಕ ಚಿಹ್ನೆಗಳೂ ಇದ್ದುದನ್ನು ತೋರಿಸುತ್ತಾ 'ಇವನ್ನೇ ಬಳಸಬಹುದಿತ್ತಲ್ಲ' ಎಂದೆ.

'ರೀಡ್ ಮಾಡಿ ಸಾರ್'

ಚುಕ್ಕೆಗಳ ಹಿಂದಿನ ಎರಡು ವಾಕ್ಯಗಳನ್ನು ಓದಿದೆ. 'ದಿಂಬಿಗೊರಗಿ ಪತ್ರವನ್ನು ಕೈಗೆತ್ತಿಕೊಂಡ. ಆರಂಭದಲ್ಲೇ 'ಪ್ರಿಯನೆ' ಎಂದು ಇದ್ದುದನ್ನು ಕಂಡು ವಿಸ್ಮಯಗೊಂಡ' ಎಂದಿತ್ತು. ಕಡೆಯಲ್ಲಿನ ಆಶ್ಚರ್ಯಸೂಚಕಗಳಿದ್ದ ವಾಕ್ಯ 'ಬಾಗಿಲಲ್ಲಿ ನಿಂತ ಅವನಿಗೆ ಅವಳು ಬರುತ್ತಿರುವುದು ಕಂಡು ಆಶ್ಚರ್ಯವಾಯಿತು' ಎಂದಿತ್ತು.

'ವ್ಯತ್ಯಾಸ ತಿಳಿಯಲಿಲ್ಲ' ಸೋಲೊಪ್ಪಿಕೊಂಡೆ.

'ಅವನು ನಿಂತಿರುವಾಗ '!' ಬಳಸಿದ್ದೇನೆ. ಮಲಗಿರುವಾಗ ಚುಕ್ಕೆಗಳು' ವುಮನ್ಸ್ ಲಾಜಿಕ್ ಮುಂದಿಟ್ಟಳು.

'ಹಾಗೆ ಬರೆದರೂ ಒಂದು ಲೈನ್ ಹೊಡೆದು, ಕೊನೆಯಲ್ಲೊಂದು ಚುಕ್ಕೆಯನ್ನು ಇಡಬೇಕಿತ್ತಲ್ಲವೆ?' ಎಂದೆ.

'ಗೆರೆ ಹಾಕಿ ಅನ್ನಿ ಸಾರ್. ನನ್ನಂತಹ ಸಭ್ಯ ಹುಡುಗಿಯರು ಲೈನ್ ಹೊಡೆಯುವುದಿಲ್ಲ'

'ಮೊದಲು ಬಂದ ಲಕ್ಷ್ಮಣ ಗೆರೆ ಹೊಡೆದ. ಆಮೇಲೆ ಬಂದ ರಾವಣ ಲೈನ್ ಹೊಡೆದ' ಎಂಬ ಸಾಲುಗಳು ನೆನಪಾದವು. ಚಂಪಾರ ಶಿಷ್ಯೆಯೇ ಇರಬೇಕೀಕೆ.

'ಜ್ಯಾಮೆಟ್ರಿ ಓದಿದ್ದೀರಾ ಸಾರ್?' ಪ್ರಶ್ನಿಸಿದಳಾಕೆ.

ನಿಜಕ್ಕೂ ನನಗೆ ಜ್ಯಾಮೆಟ್ರಿ ಓದುವ ಅಗತ್ಯವೇ ಇರಲಿಲ್ಲ. ಮನೆಯ ಪಕ್ಕದಲ್ಲಿದ್ದ ಸರಳಾ, 'ಫಿಲ್ಫೈರ್'ನಲ್ಲಿದ್ದ ರೇಖಾ ಇಬ್ಬರನ್ನೂ ಒಟ್ಟಾಗಿ ನೆನೆಸಿಕೊಂಡು 'ಸರಳರೇಖೆ'ಯನ್ನೂ, ತೊದಲುನುಡಿ, ತಪ್ಪುಹೆಜ್ಜೆಗಳ ನೈಬರಂಕಲ್‌ನ ಪಾದಗಳ ಜಾಡಿನಿಂದ 'ವಕ್ರರೇಖೆ'ಯನ್ನೂ, ಕೆಲಸದ ನಿಂಗಿ ಹಾಕುತ್ತಿದ್ದ ರಂಗೋಲಿಯಲ್ಲಿ ಮತ್ತು ಏಕಚ್ಛತ್ರ-ದ್ವಿಪತ್ನೀವ್ರತಸ್ಥರಾದ ನೆರೆಮನೆಯವರನ್ನು ಗಮನಿಸುತ್ತಾ ತ್ರಿಕೋಣ (ನೆರೆಮನೆಯ ಮೂವರೂ ಕೋಣರೇ ಎಂದು ಅಂದಿನ ನನ್ನ ಅಭಿಪ್ರಾಯ; ಆದ್ದರಿಂದ ತ್ರಿ-ಕೋಣ.)ವನ್ನೂ ಕಲಿತೆ. ಎದುರುಮನೆಯ ಸೇಟ್ ಸಹೋದರರ ಗುಡಾಣದ ಹೊಟ್ಟೆಗಳನ್ನು ನೋಡಿ ಪ್ಯಾರಾಬೊಲಾ, ಹೈಪರ್‌ಬೊಲಾಗಳನ್ನು ಕಲಿತೆ. ಸೋಷಿಯಲ್ ಸ್ಟಡೀಸ್, ಸಂಸ್ಕೃತಗಳಲ್ಲಿ ಮೇಷ್ಟ್ರುಗಳೇ ದಯಪಾಲಿಸುವ ಅಂಕಗಳ ಮೂಲಕ ಸರ್ಕಲ್ ಅನ್ನು ಕಲಿತೆ. ಮನೆಯಲ್ಲಿ ಹೆಚ್ಚು ಮಂದಿ ಇದ್ದುದರಿಂದ ಕಾಲು, ಅರ್ಧ ಚಿರೋಟಿಯನ್ನು ತಿನ್ನುವ ಪ್ರಸಂಗಗಳು ಎದುರಾದಾಗಲೆಲ್ಲ ಸೆಮಿಸರ್ಕಲ್, ಸೆಗ್‌ಮೆಂಟ್ ಆಫ್ ಎ ಸರ್ಕಲ್ ಇತ್ಯಾದಿಗಳು ತಿಳಿದವು.

'ತಕ್ಕಮಟ್ಟಿಗೆ ತಿಳಿದಿದ್ದೇನೆ' ಎಂದೆ.

'ಲೈನ್ ಎಂದರೆ ಏನು?'

'ಎ ಲೈನ್ ಈಸ್ ಎ ಸೆಟ್ ಆಫ್ ಪಾಯಿಂಟ್ಸ್' ಎಂದೆ.

'ಕರೆಕ್ಟ್. ನಿಂತ ಭಂಗಿಯಲ್ಲಿ ಪಾಯಿಂಟ್‌ಗಳು ಒಂದರಮೇಲೊಂದು ಕುಳಿತು '!'

ಆಕಾರ ಪಡೆಯುತ್ತವೆ. ಮಲಗಿದ ಭಂಗಿಯಲ್ಲಿ ರಿಲ್ಯಾಕ್ಸ್ ಆಗಿದ್ದು, ಬಿಡಿ ಚುಕ್ಕಿಗಳಂತೆ ಕಾಣುತ್ತವೆ. ದಿಸ್ ಈಸ್ ಆರ್ಟಿಸ್ಟಿಕ್ ರೈಟಿಂಗ್ ಸರ್. ಅಲ್ಲದೆ, ಚುಕ್ಕಿ ಎಂದರೆ ಪಾಯಿಂಟ್. ಪಾಯಿಂಟ್ ಎಂದರೆ ವಿಷಯ. ನಾನು ವಿಷಯಗಳನ್ನು ಇಟ್ಟುಕೊಂಡು ಬರೆಯುವುದರಿಂದ ಪಾಯಿಂಟ್ಸ್–ಚುಕ್ಕೆಗಳು ಅವಶ್ಯಕ. ಚುಕ್ಕೆಗಳೇ ಇಲ್ಲದೆ ಬರೆಯುವವರದು ಪಾಯಿಂಟ್‌ಲೆಸ್ ಬರಹ' ಆರ್ನಬ್‌ನ ಫೀಮೇಲ್ ವರ್ಷನ್ ಆಗುವ ಮಟ್ಟಕ್ಕೆ ದನಿಯೇರಿಸಿದ್ದ ಆಕೆಯ ಕೆನ್ನೆಯ ರಂಗು ಆಗುಂಬೆಯ ಬೇಸಿಗೆಯ ಸಂಜೆ ಆರೂ ಮೂವತ್ತೆಂಟರ ಸೂರ್ಯನ ಬಣ್ಣಕ್ಕೆ ತಿರುಗಿತ್ತು.


'ಮೂರು ಚುಕ್ಕಿಗಳ ಗುಂಪನ್ನು 'ಅಂಪರ್‌ಸ್ಯಾAಡ್' ಎನ್ನುತ್ತಾರೆ. ಇಂಗ್ಲಿಷ್ ವ್ಯಾಕರಣದ ಪ್ರಕಾರ ಮೂರಕ್ಕಿಂತ ಚುಕ್ಕೆ ಇಡುವಂತಿಲ್ಲ. ಅದನ್ನು ಇಡುವುದೂ ವಿಷಯದಲ್ಲೋ, ಕಾಲದಲ್ಲೋ, ಮಾತಿನಲ್ಲೋ ತಡೆ ಅಥವಾ ವಿಳಂಬವನ್ನು ಸೂಚಿಸಲು. ಹೀಗೆ ರಂಗೋಲಿ ಇಟ್ಟಂತೆ ಚುಕ್ಕೆ ಇಡುವುದು ತಪ್ಪು' ಎಂದೆ.

'ಹ್ಹ! ಬ್ರಿಟಿಷರ್ಗೇನ್ಗೊತ್ತು ರಂಗೋಲಿ ಗತ್ತು' ಎಂದಳು.

ಪುಟ ಬದಲಿಸಿದೆ. ಕಾಮಾ ಪಕ್ಕದಲ್ಲಿ ಚುಕ್ಕೆ ಇತ್ತು. ಏಕೆಂದೆ. 'ಕಡೆಯವರೆಗೂ ಕಾಮ ಇರುತ್ತದೆಂದು ಸೂಚಿಲು' ಎಂದಳು. ಚುಕ್ಕೆಯಾದಮೇಲೆ ಕಾಮಾ ಇರುವುದನ್ನು ತೋರಿಸಿದೆ. 'ಸತ್ತರೂ ಕಾಮ ಹೋಗಲ್ಲ ಎನ್ನಲು' ಎಂದಳು.

'ಈ ಲೈನು ಈ ಚುಕ್ಕಿ ಈ ಕಾಮಾ ಈ ಚುಕ್ಕಿ ಓದಹೋದರೆ ಎನಗೆ ರೋಷ ಉಕ್ಕಿ; ಯಾರೆ ಇಟ್ಟರು ಇದನು ಹೀಗೆ ಇಲ್ಲಿ ತುದಿ ಮೊದಲು ತಿಳಿಯದೀ ರೀತಿಯಲಿ' ಎಂದು ಎನ್ನೆಸ್ಸೆಲ್‌ರ ಗೀತೆಯನ್ನು ತಿರುಚಿ ಗುನುಗುತ್ತಾ ಕೃತಿಯನ್ನು ಆ ಆಕೃತಿಗೇ ಹಿಂತಿರುಗಿಸಿ ಮುನ್ನಡೆದೆ.

●



## ಪದಕುಲುಮೆ

ಎನ್.ಎಸ್. ಗಣನಾಥ, ಮೈಸೂರು

ಪೋಕರಿ: ಪುಂಡ ಆನೆ

ಹೊಣೆಬರಹ: Duty chart

ಬಹುವಚನ :ಸೊಸೆಯಕೊಟ್ಟ ವಾಗ್ದಾನ

ಅಪಾತ್ರನಾದ : ಸಂಗೀತದ ಗಂಧ–ಗಾಳಿ ಇಲ್ಲದವರ ಎದುರಿಗೆ ಹಾಡುವ ಕರ್ಮ

ಮೇಯರ್ಪತ್ನಿ ಹೇಳಿದ್ದು: ಪತಿಯೇ ಪುರದೈವ

ಬ್ರಾಂಡ್ಮೈಂಡೆಡ್: ಕೇವಲ ಬ್ರಾಂಡೆಡ್ವಸ್ತುಗಳನ್ನೇ ಖರೀದಿಸುವ ಗ್ರಾಹಕ

ಪ್ರೂಫ್ರೀಡರ್: ಜ್ಯಾಮಿಟ್ರಿ ಪುಸ್ತಕಗಳನ್ನು ಓದುವವರು

ವಿಕಿಪೀಡಿತ: ಎಲ್ಲದಕ್ಕೂ ವಿಕಿಪೀಡಿಯಾ ಬಳಸಿಬಳಸಿ ಅದನ್ನೇ ಗೀಳಾಗಿಸಿಕೊಂಡವರು

ಆಲಿಬಾಬಾ ಜೊತೆಗಿದ್ದವರು: ಅನುಮಾನ್ ಚಾಲೀಸಾ

ಜಾಬವಂತ: ನೌಕರಿ ಇದ್ದವನು

ಅನಗ: ನಿರಾಭರಣ

ತೀನ್ ager: ಮೂರು ವರ್ಷದ ಮಗು

ದೀನ ಭವಿಷ್ಯ: ದೇಶದ ಬಡಬಗ್ಗರ ಮುಂದಿನ ದಿನಗಳು

ತೃತೀಯಲುಂಗಿ: ಎರಡೇ ಲುಂಗಿ ಇದ್ದವರು ಮನೆಗೆ ತಂದ ಹೊಸ ಲುಂಗಿ

ಕಂದಾಚಾರ: ಪುಟ್ಟಮಕ್ಕಳು ಮಾಡಬೇಕಿರುವ ವಿಧಿಗಳು

ಅಸಹಾಯಕ: ಕೆಲಸ ಮಾಡದ assistant

ಉತ್ತರಪ್ರದೇಶ : ಎಕ್ಸಾಮ್ಹಾಲ್

ಸನ್ಮಾರ್ಗ: ಆಕಾಶದಲ್ಲಿ ಸೂರ್ಯನು ಚಲಿಸುವ ಪಥ

ಅಪ್ಪಾಲಜಿ : ತಂದೆಯವರ ಕುರಿತಾದ ಅಧ್ಯಯನಗಳು

ಉಭಯಲುಂಗಿ : ಮನೆಯ ಒಳಗೂ ಹೊರಗೂ ಉಡಬಹುದಾದ ಲುಂಗಿ

ವಿಷಮಶೀತಜ್ವರ: 1,3,5,7,9,11 ಇತ್ಯಾದಿ ತಾರೀಕುಗಳಲ್ಲಿ ಮಾತ್ರ ಬರುವ ಶೀತಜ್ವರ

●

# ಮೊಬೈಲೋಪಾಖ್ಯಾನ

ಬೇಲೂರು ರಾಮಮೂರ್ತಿ

ಅವರು ಹಿರಿಯ ದಂಪತಿಗಳು ನಾಗಪ್ಪ ಎಪ್ಪತ್ತೈದು, ಹೆಂಡತಿ ಗೀತ ಎಪ್ಪತ್ತು. ಹುಣಿಸೇಮರ ಮುಪ್ಪಾದರೆ ಹುಳಿ ಮುಪ್ಪೇ ಎನ್ನುವಂತೆ ಆ ದಂಪತಿಗಳು ಈಗಲೂ ಒಟ್ಟಿಗೇ ಷಾಪಿಂಗ್, ಒಟ್ಟಿಗೇ ಟೆಂಪಲ್ ರನ್ ಮಾಡ್ತಾರೆ. ಊಟ, ತಿಂಡಿ ಒಟ್ಟೊಟ್ಟಿಗೇ. ಬ್ಯಾಂಕಿಗೆ ಹೋಗಬೇಕು ಅಂತ ಹೊರಟರೆ ಅವತ್ತು ಊಟ ಅಥವಾ ತಿಂಡಿ ಎರಡರಲ್ಲಿ ಒಂದು ಹೋಟೇಲಿನಲ್ಲಿಯೇ, ನಾಗಪ್ಪ ಮೊಬೈಲ್ ಎಕ್ಸ್‌ಪರ್ಟ್ ಮೊಬೈಲ್ ನೋಡ್ಕೊಂಡು ತಮಗೇನು ಬೇಕೋ ಅದನ್ನು ಆನ್‌ಲೈನಲ್ಲಿ ತರಿಸ್ಕೊತಾರೆ. ಹೆಂಡ್ತಿಗೆ ತರಕಾರಿ ತರಿಸ್ತಾರೆ ಅಂದ್ರೆ ಗೀತ ಥೂ ಅದೆಂಥದು ಮೊಬೈಲಲ್ಲಿ ಬೆಂಡೆಕಾಯಿ ನೋಡಿದ್ರೆ ಅದು ಎಳೆದೋ ಬಲಿತದ್ದೋ ಗೊತ್ತಾಗುತ್ಯೇ.... ತರಕಾರಿನ ಯಾವಾಗಲೂ ಮಾರ್ಕೆಟ್‌ಗೆ ಹೋಗಿ ಕೈಲಿ ಹಿಡಿದು ನೋಡಿ ತಗೋಬೇಕು ಅಂತಾರೆ. ಹೀಗಾಗಿ ತರಕಾರಿ ಮೊಬೈಲಲ್ಲಿ ಬರಲ್ಲ, ಎಪ್ಪತ್ತು ದಾಟಿದ ಮೇಲೆ ನಾಗಪ್ಪನಿಗೆ ಮೊಬೈಲ್ ಹುಚ್ಚು ಜಾಸ್ತಿಯಾಯಿತು ಅನಿಸಿತು. ಕೂತಲ್ಲಿ, ನಿಂತಲ್ಲಿ ಮೊಬೈಲ್ ನೋಡೋದೆ ಆಯ್ತು. ಒಂದ್ಸಾರಿ ನಾಗಪ್ಪ ಟಾಯ್ಲೆಟ್‌ಗೆ ಹೊರಟಿದ್ದಾಗ ಗೀತ ಎಲ್ ಹೋಗ್ತಿದೀರ ಅಂತ ಕೇಳಿದರು ಇದೇನೇ ಹೀಗ್ ಕೇಳ್ತಿದೀಯ ಟಾಯ್ಲೆಟ್‌ಗೆ ಅಂದರು. ಆಗ ಗೀತ ಹತ್ತಿರ ಬಂದು ನಾಗಪ್ಪನ ಜೇಬಿನಲ್ಲಿದ್ದ ಮೊಬೈಲ್ ಕಿತ್ಕೊಂಡು ಈಗ ಹೋಗಿ ಬನ್ನಿ ಅಂದರು. ರೀ ಇಷ್ಟು ಮೊಬೈಲ್ ನೋಡೋದು ಈ ವಯಸ್ಸಿನಲ್ಲಿ ಒಳೇದಲ್ಲ ಅಂತ ಗೀತ ಹೇಳ್ತನೇ ಇದಾರೆ. ಈ ನಡುವೆ ಗೀತ ಭಜನಾ ಮಂಡಳಿಗೆ ಸೇರ್ಕೊಂಡ್ರು. ಎಲ್ಲರ ಹತ್ತಿರವೂ ಮೊಬೈಲ್, ವಾಟ್ಸಪ್ ಇತ್ತು. ಗೀತ ನಾಗಪ್ಪನಿಗೆ ದಂಬಾಲು ಬಿದ್ದು ತಾನೂ ವಾಟ್ಸ್‌ಪ್ ಇರುವ ಮೊಬೈಲ್ ಕೊಂಡರು. ಈಗ ನಾಗಪ್ಪನಂತೆ ಗೀತಳೂ ಮೊಬೈಲ್ ಹುಚ್ಚು ಅಂಟಿಸಿಕೊಂಡಿದ್ದಾರೆ. ತಮಾಷೆ ಏನ್ ಗೊತ್ತಾ ಒಂದಿನ ಸಂಜೆ ಆರೋ ಆರೂವರೇನೋ ಆಗಿದೆ ನಾಗಪ್ಪ ಬಂದು ಸೋಫಾದಲ್ಲಿ ಮೊಬೈಲ್ ಹಿಡಿದು ಕೂತಿದಾರೆ. ಗೀತ ಇನ್ನೊಂದ್ ಸೋಫಾದಲ್ಲಿ ಮೊಬೈಲ್ ಹಿಡಿದು ಕೂತಿದಾರೆ. ನಾಗಪ್ಪನ ಸ್ನೇಹಿತ ರಾಜು ಬಂದು ಕೂಗಿದ್ದೂ ಗೊತ್ತಿಲ್ಲ, ಒಳಗೆ ಬಂದು ಕೂತಿದ್ದೂ ಗೊತ್ತಿಲ್ಲ. ರಾಜುನೂ ಅವನ ಹೆಂಡ್ತಿನೂ ಇವರಿಬ್ಬರನ್ನು ನೋಡಿ ಹೀಗು ಉಂಟೇ ಅಂದ್ಕೊಂಡಿದ್ದರು, ಐದು ನಿಮಿಷ ಕಾದು ರಾಜು ಗಟ್ಟಿಯಾಗಿ ಲೋ ನಾಗಪ್ಪಾ ಅಂತ ಕಿರುಚಿದಾಗ ನಾಗಪ್ಪನ ಕೈನಿಂದ ಮೊಬೈಲ್ ಜಾರಿತು. ಗೀತ ಬೆರಗಾಗಿ ನೋಡಿದರು, ನಾಗಪ್ಪ ಪೆದ್ದು ಪೆದ್ದಾಗಿ ನೀನು ಯಾವಾಗ ಬಂದ್ಯೆ ಅಂತ ಕೇಳಿದ, ಯಾಕೋ ನಿನ್ನ ಮೊಬೈಲ್ ಹುಚ್ಚು ಜಾಸ್ತಿಯಾಯ್ತು ಕಣೋ. ನನ್ನ ಮಗನ ಮದುವೆಗೆ ಕರೆಯೋಣ ಅಂತ ಬಂದು ಎಷ್ಟು ಕೂಗಿದರೂ ತಿರುಗಿ ನೋಡ್ಲೆಲ್ವಲ್ಲೋ ಅಂದ. ನಾಗಪ್ಪ ನಗುತ್ತ ಫುಟ್‌ಬಾಲ್ ಮ್ಯಾಚ್ ನೋಡ್ತಿದ್ದೆ ನಾನು ಎಲ್ಲಿದಿನಿ ಅನ್ನೋದೇ ಮರೆತು ಹೋಯ್ತು ಅಂತ ಗೀತ ಕಡೆ ತಿರುಗಿ ಏನ್ ನೋಡು ಅಂದ ಹೊಸ ರುಚಿ ನೋಡ್ತಿದ್ದೆ ಅದರಲ್ಲಿ ಮೂಸಂಬಿ ಸಿಪ್ಪೆಯಿಂದ ಸಿಹಿ ಗೊಜ್ಜು ಮಾಡೋ ಕಾರ್ಯಕ್ರಮ ಬರ್ತಿತ್ತು. ಮೂರು ಸಾರಿ ಮಾಡಿದರೂ ಗೊಜ್ಜು ಸೀದು ಹೋಗ್ತಿತ್ತು ಅದಕ್ಕೆ ಗೊತ್ತು ಸರಿಯಾಗಿ ಮಾಡ್ಸಿ ಅಂತ ಕಾಯ್ತಿದ್ದೆ ಅಂದರು. ಗ್ರಹಚಾರ ಅಂತ ತಲೆ ಚಚ್ಕೊಂಡು ರಾಜು ಮದುವೆ ಪತ್ರಿಕೆ ಕೊಟ್ಟು ಕೊರಟ.

ಇದಾಗಿ ಸುಮಾರು ಒಂದು ತಿಂಗಳಾಗಿದೆ. ಒಂದು ಗುರುವಾರ ನಾಗಪ್ಪ ಹೆಂಡ್ತಿಗೆ ನಾನು ಬ್ಯಾಂಕಿಗೆ ಹೋಗಬೇಕು, ನೀನೂ ಬಾ ಬ್ಯಾಂಕಿನ ಕೆಲಸ ಮುಗಿಸಿ ಊಟ ಮಾಡ್ಕೊಂಡು ಬರೋಣ ಅಂತ, ಹೊರಗಡೆ ಸುತ್ತಾಡೋದು ಅಂದ್ರೆ ಗೀತ ತುದಿಗಾಲಿನಲ್ಲಿ

ನಿಂತಿರ್ತಾಳೆ. ಸರಿ ಹನ್ನೊಂದು ಗಂಟೆಯ ಹೊತ್ತಿಗೆ ಇಬ್ಬರೂ ಹೊರಟರು. ಮೊದಲು ಬ್ಯಾಂಕಿನ ಕೆಲಸ ನಂತರ ಊಟ ಅಂತ ಬ್ಯಾಂಕಿಗೆ ಬಂದು ಅದಕ್ಕೂ ಮುಂಚೆ ಗಣೇಶನ ದೇವಸ್ಥಾನಕ್ಕೆ ಹೋದರು ಅವತ್ತು ದೇವಸ್ಥಾನದಲ್ಲಿ ಜನ ಕಡಿಮೆ ಹೀಗಾಗಿ ಪ್ರಸಾದಕ್ಕೆಂದು ಮಾಡಿದ ಪುಳಿಯೋಗರೆಯನ್ನ ದೊನ್ನೇಲಿ ತುಂಬಿ ತುಂಬಿ ಕೊಟ್ಟರು. ಅಷ್ಟನ್ನು ತಿಂದ ಗೀತ ರೀ ಇನ್ನೊಂದ್ ದೊನ್ನೆ ಪುಳಿಯೊಗರೆ ತಿಂದ್ರೆ ಊಟನೇ ಬೇಡ ಅಲ್ವ ಅಂದಳು. ಅಷ್ಟರಲ್ಲಿ ಭಜನಾ ಮಂಡಳಿಯ ಸ್ನೇಹಿತೆ ಫೋನ್ ಮಾಡಿದಳು ಗೀತ ಫೋನಲ್ಲಿ ಮಾತಾಡ್ತಾ ಆಡ್ಡ ರಸ್ತೆ ಅಂಚಿಗೆ ಹೊರಟರು ಈ ಕಡೆ ನಾಗಪ್ಪ ಅಯ್ಯೋ ನವಗ್ರಹಕ್ಕೆ ಪ್ರದಕ್ಷಿಣೆ ಹಾಕಲೇ ಇಲ್ವಲ್ಲ ಅಂದೊಂಡು ಮತ್ತೆ ದೇವಸ್ಥಾನದೊಳಗೆ ಹೋಗಿ ನವಗ್ರಹಕ್ಕೆ ಪ್ರದಕ್ಷಿಣೆ ಮಾಡಿ ಬಂದಾಗ ಹೆಂಡತಿ ಕಾಣಲಿಲ್ಲ. ಅಷ್ಟರಲ್ಲಿ ನಾಗಪ್ಪನ ಸ್ನೇಹಿತನ ಫೋನು ಲೋ ನಾಗಪ್ಪ ನಿನಗೆ ಗೊತ್ತಾ ಸುಬ್ಬ ಹೋಗಿಬಿಟ್ನಂತೆ ಅಂತ ಮಾತು ಷುರ ಮಾಡಿದ್ದೇ ತಡ ಸುಬ್ಬು ಚರಿತ್ರೆನೇ ಬಿಚ್‌ಕೊಂಡ್ರು. ನಾಗಪ್ಪ ಮಾತಾಡ್ತಾ ಆತ್ತ ಹೆಂಡ್ತಿ ಎಲ್ಲಿ ಕಾಣಿಸ್ತಿಲ್ವಲ್ಲ ಅಂತ ನೋಡಿದ, ಗೀತ ಅಲ್ಲೆಲ್ಲೂ ಕಾಣಲಿಲ್ಲ ಅವಳು ಬ್ಯಾಂಕಿಗೆ ಹೋಗಿರಬಹುದು ಅಂತ ಮೊಬೈನಲ್ಲಿ ಮಾತಾಡ್ತಾ ಆಡ್ತಾ ಬ್ಯಾಂಕಿನ ಕಡೆ ಹೊರಟ ಮಾತು ಮುಗಿಯುವ ಹೊತ್ತಿಗೆ ಬ್ಯಾಂಕ್ ಬಂತೆಳಿ ಇಲ್ಲಾ ಬ್ಯಾಂಕ್ ಬಂದಿದ್ರಿಂದ ಮಾತು ಮುಗೀತೇ ತಿಳಿಯಲಿಲ್ಲ ನಾಗಪ್ಪ ಹೆಂಡ್ತಿಗೆ ಫೋನ್ ಮಾಡ್ದ. ಈ ಮಾರ್ಗವು ಕಾರ್ಯನಿರತವಾಗಿದೆ ದಯವಿಟ್ಟು ಸ್ವಲ್ಪ ಸಮಯದ ನಂತರ ಪ್ರಯತ್ನಿಸಿ ಅಂತ ಬಂತು. ಎಂಥಾ ಕಾಲ ಬಂತಪ್ಪಾ ಗಂಡ ಹೆಂಡ್ತಿ ಹತ್ರ ಮಾತಾಡೋಕೂ ಪ್ರಯತ್ನ ಪಡಬೇಕಲ್ಲ ಅದ್ಕೊಂಡು ಬ್ಯಾಂಕ್ ಒಳಗೆ ಹೋಗಿ ಚೆಕ್ ಕೊಟ್ಟು ಅಲ್ಲೇ ಕೂತ ಚೆಕ್ ಪಡೆದವಳು ಸಾರ್ ಇನ್ಮೇಲೆ ದುಡ್ಡು ಡ್ರಾ ಮಾಡೊಕೆ ಬ್ಯಾಂಕಿಗೆ ಬರಬೇಡಿ ಅಂದಳು. ಇನ್ನೆಲ್ಲಿಗೆ ಹೋಗಬೇಕು ಮೇಡಂ ಅಂತ ಕೇಳಿದ ನಾಗಪ್ಪ ಅಸಹನೆಯಿಂದ ಎಟಿಎಂಗೆ ಹೋಗಿ ಸರ್ ಅಂದಳು ಕ್ಲರ್ಕ್. ನಮ್ ದುಡ್ಡು ನಮಗೆ ಕೊಡೊಕೆ ಇವರದ್ದೊಂದು ಗೋಳು ಅಂದ್ಕೊಂಡು ನಾಗಪ್ಪ ಪದೇ ಪದೇ ಹೆಂಡ್ತಿ ನಂಬರ್‌ಗೆ ಪ್ರಯತ್ನಿಸುತ್ತಿದ್ದ.

ಇತ್ತ ಗೀತ ಭಜನಾ ಮಂಡಳಿಯ ಸದಸ್ಯರು ಒಬ್ಬರು ತಪ್ಪ ಇನ್ನೊಬ್ಬರು ಅಂತ ಆರು ಜನರ ಜೊತೆ ಮಾತಾಡಿ ಮತ್ತೆ ದೇವಸ್ಥಾನದ ಹತ್ತಿರ ಬಂದಳು ಗಂಡ ಕಾಣಲಿಲ್ಲ. ಅಲ್ಲಿದ್ದ ಚಪ್ಪಲಿ ನೋಡಿಕೊಳ್ಳುವನ್ನ ಏನಪ್ಪ ಇಲ್ಲಿ ತಲೇಲಿ ಕೂದಲಿಲ್ಲದರು ಆದರೆ ದಪ್ಪಗೆ ಮೀಸೆ ಇರೋ ಕಣ್ಣಿಗೆ ಕನ್ನಡಕ ಹಾಕ್ಕೊಂಡಿರೋರು ಒಬ್ಬರು ಇದ್ರಲ್ಲ ನೀವು ನೋಡಿದಿರಾ ಅಂತ ಕೇಳಿದಳು. ಅವನಿಗೆ ಇವಳ ಮಾತಲ್ಲಿ ಆಸಕ್ತಿ ಇರಲಿಲ್ಲ ಅದಕ್ಕೆ ಗೀತಗೆ ಏನೂ ಉತ್ತರ ಕೊಡಲಿಲ್ಲ. ಸರಿ ಇವರು ಬ್ಯಾಂಕಿಗೆ ಹೋಗರಬೇಕು ಅಂದ್ಕೊಂಡು ಗಂಡನಿಗೆ ಫೋನ್ ಮಾಡ್ತನೇ ದಾರಿ ಸವೆಸಿದಳು.

ನಾಗಪ್ಪ ಹೆಂಡ್ತಿಗೆ ಫೋನ್ ಮಾಡಿ ಮಾಡಿ ಸಾಕಾಗಿ ಹೋಗ್ಲಿ ಅಂತ ಕೂತ. ನಾಗಪ್ಪನ ಅವಸ್ಥೆ ನೋಡಿದವರೊಬ್ಬರು ಸರ್ ಇಲ್ಲಿ ನೆಟ್‌ವರ್ಕ್ ಸರಿಯಾಗಿಲ್ಲ ಹೊರಗೆ ಹೋಗಿ ಟ್ರೈ ಮಾಡಿ ಹೌದು ಯಾರಿಗೆ ಟ್ರೈ ಮಾಡ್ತಿದೀರ ಅಂತ ಕೇಳಿದ. ನಾಗಪ್ಪ ನನ್ನ ಹೆಂಡ್ತಿಗೆ ಅಂದಾಗ ಏನ್ಸಾರ್ ಇಷ್ಟು ವಯಸ್ಸಲ್ಲು ನಿಮ್ಮ ಹೆಂಡ್ತಿಗೇ ಟ್ರೈ ಮಾಡ್ತೀರ ಸುಮ್ನೆ ಟೈಂ ವೇಸ್ಟು ಅಂದ ಅಷ್ಟರಲ್ಲಿ ನಾಗಪ್ಪನಿಗೆ ಮತ್ತೊಂದು ಕರೆ ಬಂತು ಕಟ್ ಆಯ್ತು, ಬಂತು ಕಟ್ ಆಯ್ತು, ಶ್ರೀಹರಿ ಟ್ರೈ ಮಾಡ್ತಿದ್ದ. ನಾಗಪ್ಪ ಹೊರಗೆ ಬಂದು ಶ್ರೀಹರಿಗೆ ಟ್ರೈ ಮಾಡ್ದ ಸಿಕ್ತು, ಅವನು ಗಂಗಾಧರನಿಗೆ ನಾಲ್ಕನೇ ಹಂತದ ಕ್ಯಾನ್ಸರ್ ಅಂತ ಸುದ್ದಿ ತಿಳಿತು ಎಲ್ಲ ವಿವರಗಳನ್ನ ಕೊಡ್ತಿದ್ದ. ಗಂಗಾಧರ ನಾಗಪ್ಪ ಬಹಳ ಆತ್ಮೀಯರು ನಾಗಪ್ಪನಿಗೆ ಪ್ರಪಂಚವೇ ತಲೆ ಮೇಲೆ ಬಿದ್ದ ಹಾಗಾಯ್ತು. ಕಣ್ಣಲ್ಲಿ ನೀರೂ ಬಂತು ಮಾತಾಡ್ತಾ ನಡ್ಕೊಂಡು ಹೊರಟ. ಹೊಟ್ಟೆ ಯಾಕೋ ಚುರ್ ಅಂದಿತು ಎದುರಿಗೆ ಹೋಟೆಲ್ ಕಾಣಿಸಿತು. ಮಾತಾಡ್ಕೊಂಡೇ ಅತ್ಕಂಡೇ ಹೋಟೆಲಿಗೆ ಹೋಗಿ

ಟೇಬಲಲ್ಲಿ ಕೂತು ಊಟ ಆರ್ಡರ್ ಮಾಡಿದ ಆ ಕ್ಷಣಕ್ಕೆ ಅವನಿಗೆ ಗಂಗಾಧರನ ವಿಚಾರ ಬಿಟ್ರೆ ಏನೂ ತಿಳಿಯುತ್ತಿರಲಿಲ್ಲ. ಅಲ್ಲೇ ಮಾತಾಡ್ತಾ ಗಂಗಾಧರನ ಎಲ್ಲ ವಿವರಗಳನ್ನೂ ತಿಳ್ಕಂಡ.

ಮತ್ತೆ ಗೀತಳ ಕಡೆಗೆ ಬರೋಣ ಅವಳು ಮಾತಾಡ್ಕೊಂಡು ಮಾತಾಡ್ಕೊಂಡು ಬ್ಯಾಂಕಿಗೆ ಬಂದಳು. ಅಲ್ಲಿ ಗಂಡ ಇರಲಿಲ್ಲ, ಅಲ್ಲಿ ಯಾರನ್ನೂ ಕೇಳಿದರೂ ಸರಿಯಾದ ಉತ್ತರ ಸಿಗಲಿಲ್ಲ, ಗಂಡನ ನಂಬರ್‌ಗೆ ಟ್ರೈ ಮಾಡಿದಳು. ಕಾರ್ಯನಿರತವಾಗಿದೆ ಅಂತಾನೇ ಬರ್ತಿತ್ತು. ಅಷ್ಟರಲ್ಲಿ ಬ್ಯಾಂಕಿನ ಸಿಬ್ಬಂದಿಯೊಬ್ಬರು ಮೇಡಂ ನೀವು ನಾಗಪ್ಪ ಅವರ ಮಿಸೆಸ್ ಅಲ್ವ ಅಂತ ಕೇಳಿದರು. ಗೀತ ಹೌದು ಅಂದರು ಅವರು ನೋಡಿ ನಾಗಪ್ಪ ಚೆಕ್ ಕೊಟ್ರು ಅದ್ರೆ ಕ್ಯಾಷ್ ತಗೊಳ್ದೆ ಹೋಗಿದಾರೆ ಅಂದಳು. ಸರಿ ನನಗೇ ಕೊಡಿ ಕ್ಯಾಷ್ ಅಂದಳು, ಹಾಗೆಲ್ಲ ಕೊಡಕ್ಕಾಗಲ್ಲ ಮೇಡಂ ಸೆಲ್ಫ್ ಚೆಕ್ ಅವರೇ ಬರಬೇಕು ಅಂದರು ಮತ್ತೆ ಅವಳಿಗೆ ಕರೆ ಭಜನಾ ಮಂಡಳಿಯವರು ಮೈಸೂರಿಗೆ ಟ್ರಿಪ್ ಹೊರಟಿರೇ ಸಮಾಚಾರ ಗೀತಗೆ ಬಹಳ ಅಪ್ರಾಯ ಮಾರಿಮಾಯಿತು ಮಾತಾಡ್ಕೊಂಡು ನಡೆದಳು ಪುಳಿಯೋಗರೆ ಕರಗಿತ್ತು ಹೊಟ್ಟೆ ಹಸಿದಿತ್ತು ಇವರು ಈಯಪ್ಪ ನನ್ನ ಕೈಗೆ ಸಿಗಲ್ಲ ಅಂದ್ಕೊಂಡು ದಾರಿಯಲ್ಲೇ ಕಂಡ ಹೋಟೇಲ್‌ಗೆ ಹೊರಟಳು ಮಾತಾಡ್ಕೊಂಡೇ ಮೆಟ್ಟಿಲು ಹತ್ತುವಾಗ ಅವಳು ಜಾರಿದ್ದಕ್ಕೆ ಅವಳ ಹಿಂದೆ ಇದ್ದ ನಾಲ್ಕು ಜನ ಕೆಳಗೆ ಬಿದ್ದರು. ಅದರಲ್ಲೊಬ್ಬ ಗೀತಗೆ ಬೈದ ಈ ಮೇಟಿಲು ಹತ್ತಿ ಇಲ್ಲ ಮೊಬೈಲಲ್ಲಿ ಮಾತಾಡಿ ಏನ್ರಿ ನಿಮ್ ಗೋಳು ಅಂದರು. ಮೈಸೂರು ಟ್ರಿಪ್ ಬಗ್ಗೆ ಮಾತಾಡ್ತಾ ಇದ್ದ ಗೀತಗೆ ಇದು ಏನೂ ಅರಿವಿನಲ್ಲಿರಲ್ಲ ಬಂದು ಟೇಬಲಲ್ಲಿ ಒಬ್ಬ ವ್ಯಕ್ತಿ ಮೊಬೈಲಿಲ್ಲಿ ಮಾತಾಡ್ತಾ ಕೂತಿದ್ದ ಅವನ ಪಕ್ಕ ಜಾಗ ಇತ್ತು ಗೀತ ಅಲ್ಲೇ ಕೂತಳು. ಒಂದು ಊಟ ಅಂತ ಹೇಳಿ ಮಾತು ಮುಂದುವರಿಸಿದಳು. ಪಕ್ಕದಲ್ಲಿದ್ದ ವ್ಯಕ್ತಿ ಮಾತಾಡ್ತ ಮಾತಾಡ್ತಾ ಊಟ ಮಾಡ್ತಿದ್ದ. ಕಡೆಗೂ ಅವನು ಮೊಬೈಲ್ ಮಾತು ಮುಗಿತು, ಪಕ್ಕಕ್ಕೆ ತಿರುಗಿದಾಗ ಬಾಂಬ್ ಬಿದ್ದಷ್ಟು ಅಚ್ಚರಿ ಇದೇನೇ ನೀನಿಲ್ಲಿ ನಿಂಗೆ ಹುಡುಕಿ ಹುಡುಕಿ ಸಾಕಾಯ್ತು ಅಂದ. ಪಕ್ಕದಲ್ಲಿರೋನು ಗಂಡನೆ ಅಂತ ಗೊತ್ತಾದ ಮೇಲೂ ಗೀತ ಲೇ ನಾನು ಮನೆಗೆ ಹೋದ ಮೇಲೆ ಮಾತಾಡ್ತಿನಿ ಕಣ್ರೆ ಅಂದು ಗಂಡನ ಕಡೆ ನೋಡಿ ಎಲ್ರೀ ಹಾಳಾಗಿ ಹೋಗಿದ್ರಿ ಹುಡುಕಿ ಹುಡುಕೀ ಸಾಕಾಯ್ತು ಅಂದಳು. ನಾಗಪ್ಪನೂ ಹಾಗೇ ಭುಸುಗುಟ್ಟಿದ ಹೋಟೇಲಿನ ಗಿರಾಕಿಗಳು ಇವರಿಬ್ಬರ ಕಡೆ ನೋಡಿದರು. ನಂತರ ಇಬ್ಬರೂ ಹೋಟೆಲಿನಿಂದ ಆಚೆ ಬಂದರು. ನಡೀ ಮನೆಗೆ ಹೋಗೋಣ ಅಂತ ನಾಗಪ್ಪ ಅಂದಾಗ ಮತ್ತೆ ಅವನ ಮೊಬೈಲ್ ಹೊಡ್ಕೊಂಡ್ತು ಲೇ ಪಾಂಡು ಈಗ ಹೊರಗಡೆ ಇದೀನಿ ಮನೆಗೆ ಹೋಗಿ ಪೋನ್ ಮಾಡ್ತಿನಿ ಅಂದ. ಏನ್ ಮರ್ತಿದೀರ ಜ್ಞಾಪಸ್ಕೊಳಿ ಅಂದಳು ಗೀತ ನಿನ್ನನ್ನ ಮರೆತಿದ್ದೆ ಅಡರ್‌ಕೊರಿದ್ನಲ್ಲ ನಡಿ ಅಂದ. ಬ್ಯಾಂಕಿಗೆ ಹೊಗಿದ್ರಲ್ಲ ದುಡ್ಡು ತಗೊಂಡ್ರ ಅಂತ ಗೀತ ಕೇಳಿದಾಗ ಅಯ್ಯೋ ದೇವರೇ ಅಂತ ಬ್ಯಾಂಕಿಗೆ ಓಡಿ ದುಡ್ಡು ತಗೊಂಡು ಬಂದ.

ಮನೆಗೆ ಬಂದೊಡನೆ ಅಲ್ಲ ಕಣೆ ಅಂತ ನಾಗಪ್ಪನೂ ಅಲ್ಲಾರೀ ಅಂತ ಗೀತನೂ ಜಗಳ ಷುರು ಮಾಡಿದರು. ಅಮೇಲೆ ಅವರಿಬ್ಬರೂ ಮನವರಿಕೆ ಆಗಿದ್ದು ಏನಂದ್ರೆ ಮಿತವಾಗಿ ಬಳಸಿ ಕರೆನ್ಸಿ ಉಳಿಸಿ ಅನ್ನೋವರ ಜೊತೆಗೆ ವಿನವಾಗಿಬಳಸಿ ಸಂಬಂಧ ಉಳಿಸಿ ಅನ್ನೊದು ಮುಖ್ಯವಾದ್ದರಿಂದ ಇನ್ನು ಮೊಬೈಲ್ ಬಳಸುವಾಗ ಮೈ ಮೇಲೆ ಪ್ರಜ್ಞೆ ಇಟ್ಕೊಂಡಿರೋಣ ಅಂತ ನಿರ್ಧರಿಸಿದ್ದಾರೆ ಎಷ್ಟರ ಮಟ್ಟಿಗೆ ಸಕ್ಸಸ್ ಆಗುತ್ತೋ ನೋಡಬೇಕು.

●

# ನಿಜ ತಾನೇ ನಾನು ಹೇಳೋದು...!

**ವಿ.ವಿಜಯೇಂದ್ರ ರಾವ್**

ನಮ್ಮ ದೇಶದಲ್ಲಿ ಈಗಂತೂ ಜನರಿಗೆ ಮೂರು ತರಹದ ಹುಚ್ಚು. ಮೊಬೈಲ್ ಹುಚ್ಚು, ಸಿನಿಮಾ ಹುಚ್ಚು, ಕ್ರಿಕೆಟ್ ಹುಚ್ಚು. ಕ್ರಿಕೆಟ್ ಸೀಸನ್‌ನಲ್ಲಿ ಅದರ ಹುಚ್ಚು ಹೆಚ್ಚಾಗಿ ಇರುತ್ತೆ. ಈಗ ಟಿ –20 ವರ್ಲ್ಡ್ ಕಪ್ ಗೆದ್ದ ಮೇಲಂತೂ ಅವರನ್ನು ಹಿಡಿಯೋ ಹಾಗೆ ಇಲ್ಲ. ಎಲ್ಲಿ ನೋಡಿದರೂ ಸಂಭ್ರಮ, ಸಂತೋಷ, ಸನ್ಮಾನ.

ಇಷ್ಟೆಲ್ಲಾ ಇದ್ದರೂ ಸಹ, ನನಗೆ ಈ ಕ್ರಿಕೆಟ್ ಒಂದು ತರಾ ವಿಚಿತ್ರವಾದ ಆಟ ಅನ್ಸುತ್ತೆ. ಅವರುಗಳು ಏನೇನೋ ಹೇಳ್ತಾರೆ.ಆದರೆ... ಒಂದಕ್ಕೊಂದು ಸಂಬಂಧಾನೇ ಇರೋದಿಲ್ಲ. ಹೇಗೆಂದರೆ......

1. ಕೈಯಲ್ಲಿ ಬಾಲನ್ನು ಇಟ್ಟುಕೊಂಡಿರುತ್ತಾರೆ, ಆದರೆ...ನೋ ಬಾಲ್ ಅನ್ನುತ್ತಾರೆ.....!
2. ಒಂದು ಓವರಿಗೆ ಆರು ಬಾಲ್ ಅಂತಾರೆ, ಆದರೆ ಒಂದೇ ಬಾಲ್ ಇರುತ್ತೆ...!
3. ಆಲ್ ಔಟ್ ಅಂತ ಹೇಳ್ತಾರೆ, ಆದರೆ ಹನ್ನೊಂದರಲ್ಲಿ ಹತ್ತು ಜನ ಮಾತ್ರ ಔಟ್ ಆಗಿರುತ್ತಾರೆ....!
4. ಅಂಪೈರ್ ಒಂದು ಕೈ ಮೇಲೆತ್ತಿದರೆ, ಒಬ್ಬ ಬ್ಯಾಟ್ಸ್‌ಮನ್ ಔಟ್ ಅಂತೆ, ಅದೇ ಎರಡೂ ಕೈ ಮೇಲೆ ಎತ್ತಿದರೆ ಸಿಕ್ಸರ್ ಅಂತೆ, ಒಂದು ಚೂರು ಲಾಜಿಕ್ ಇಲ್ಲ...!
5. ಗೋಲ್ ಕೀಪರ್ ಗೋಲು ಹೊಡೆಯದಂತೆ ತಡೆಯುತ್ತಾನೆ. ಆದರೆ, ಇದರಲ್ಲಿ ವಿಕೆಟ್ ಕೀಪರ್, ಅವನೇ ವಿಕೆಟ್ ಬೀಳಿಸಿ ಔಟ್ ಅನ್ನುತ್ತಾನೆ..!
6. ಕೆಲವು ಓವರುಗಳನ್ನು ಮಾತ್ರ ಪವರ್ ಪ್ಲೇ ಅಂತಾರೆ, ಆದರೆ, ಬಾಕಿ ಓವರ್ ಗಳನ್ನು ಪವರ್ ಇಲ್ಲದೆ ಕತ್ತಲೆಯಲ್ಲಾ ಆಡುತ್ತಾರೆ....!
7. ಒಬ್ಬನನ್ನು ನೈಟ್ ವಾಚ್ ಮಾನ್ ಅಂತಾರೆ, ಆದರೆ ಅವನು ಸಹ ಪಿಚ್ಚನ್ನು ಕಾವಲು ಕಾಯದೆ, ಮಲಗಿಕೊಳ್ಳಲು ರೂಮಿಗೆ ಹೋಗಿ ಬಿಡ್ತಾನೆ....!
8. ಟೀ ಬ್ರೇಕ್ ಅಂತ ಹೇಳ್ತಾರೆ, ಆದರೆ, ಎಲ್ಲಾ ಕೂಲ್ ಡ್ರಿಂಕ್ಸ್ ಕುಡಿತಾರೆ....!
9. ಎಲ್ಲಾ ಕಡೆ ಲೈಟ್ ಜಗಮಗ ಅಂತ ಉರಿತ್ತಿದ್ದರೂ, ಒಂದು ಭಾಗವನ್ನು ಮಾತ್ರ "ಆಫ್" ಸೈಡ್ ಅಂತ ಕರೀತಾರೆ....!
10. ಆಟ ಮುಗಿದ ಮೇಲೆ, ಒಬ್ಬನನ್ನು ಮಾತ್ರ, "ಮ್ಯಾನ್ ಆಫ್ ದಿ ಮ್ಯಾಚ್" ಅಂತ ಹೇಳ್ತಾರೆ, ಹಾಗಾದ್ರೆ...ಉಳಿದವರೆಲ್ಲಾ ವುಮನ್ನಾ....!



**ಅಭಿನಂದನೆಗಳು**

ಅಪರಂಜಿಯ ಓದುಗ, ಬರಹಗಾರ ಮತ್ತು ಅಭಿಮಾನಿ–ಯಾಗಿರುವ ಶ್ರೀ ಸತ್ಯೇಶ್ ಬೆಳ್ಳೂರ್ ಅವರಿಗೆ (ನವ್ಯಜೀವಿ ಅಂಕಿತ ನಾಮದಲ್ಲಿ ಸಾವಿರಾರು ಮುಕ್ತಕಗಳನ್ನು ರಚಿಸಿರುವ) ಮೈಸೂರಿನ ಡಿವಿಜಿ ಬಳಗ ಪ್ರತಿಷ್ಠಾನ ನೀಡುವ 2024 ನೇ ಸಾಲಿನ ಡಿವಿಜಿ ಪ್ರಶಸ್ತಿ ಲಭಿಸಿದೆ. ಶ್ರೀಯುತರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹೊರತರುತ್ತಿರುವ ಇಂಗ್ಲಿಷ್ ಮಾಸಿಕ ವಿಪ್ರನುಡಿಯ ಸಂಪಾದಕರೂ ಆಗಿದ್ದಾರೆ. ಶ್ರೀ ಸತ್ಯೇಶ್ ಬೆಳ್ಳೂರ್ ಅವರಿಗೆ ಅಪರಂಜಿ ತನ್ನೆಲ್ಲ ಓದುಗರ, ಲೇಖಕರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದಾಳೆ.

# ನೋಡಿದ ಊರಿನ ನೋಡದ ಸ್ಥಳಗಳು

ಕೆ.ಎನ್. ಮಹಾಬಲ

ಇತ್ತೀಚೆಗೆ ನಮ್ಮ ಪ್ರವಾಸದ ಭರಾಟೆ ಅದರಲ್ಲೂ ವಿದೇಶ ಯಾತ್ರೆ ಏಕೋ ಹೆಚ್ಚಾಗಿದೆ. "ನಿಮ್ಮ ಕೈಯ ಕಾಸು ಮೇಲುಕೋಟೆ ನಾಮ,ಏನಾದ್ರೂ ಮಾಡಿಕೊಳ್ಳಿ (ಅಥವಾ ಹೇಗಾದ್ರೂ ಹಾಕಿಕೊಳ್ಳಿ ನಾಮ) ಅಂತೀರಾ? ಹೋಗಲಿ ಬಿಡಿ ನಾನು ಇಲ್ಲಿ ಹೇಳಹೊರಟಿರುವುದು ಅದಲ್ಲವೇ ಅಲ್ಲ.

ನೀವು ಪ್ರವಾಸ ಹೊರಟಿರುವ ವಿಷಯ ಬೆಳಗಿನ ವಾಯುಸಂಚಾರದ ಅವಿಭಾಜ್ಯ ಅಂಗವಾದ ಕಾಫಿ ಕಟ್ಟೆ ಸಭೆಯಲ್ಲಿ ಒಬ್ಬ ಮಿತ್ರನಿಗೆ ತಿಳಿಸುತ್ತೀರಿ. ಅಷ್ಟು ಸಾಕು ಬಿಡಿ ನಿಮ್ಮ ಎಲ್ಲ ಇತರ ಮಿತ್ರರಿಗೆ (ಹಿತಶತ್ರುಗಳಿಗೂ) ತಮಟೆಯ ಸಹಾಯವಿಲ್ಲದೆ ತಿಳಿಸುವ ಕಂತ್ರಾಟನ್ನು ಅವನು ತಂತಾನೇ ತೆಗೆದುಕೊಳ್ಳುತ್ತಾನೆ. ನೀವು ಕಾಫಿಕಟ್ಟೆಯಿಂದ ಮನೆ ತಲುಪುವ ಹೊತ್ತಿಗೆ ಆ ದಿನ ಕಾಫಿ ಕಟ್ಟೆಗೆ ಬಾರದಿರುವವರು, ಇತರರು ಹಾಗೂ ಸಕಲರಿಂದ ನಿಮಗೆ ಫೋನ್ ಪುಂಖಾನುಪುಂಖವಾಗಿ ಬರತೊಡಗುತ್ತದೆ. ವಿದೇಶ ಪ್ರವಾಸ ಹೋಗ್ತಾ ಇದ್ದೀಯಂತೆ, ಅಭಿನಂದನೆ, ಶುಭಪ್ರವಾಸ, ನನಗೇನು ತರ್ತೀಯಾ, ಪಾಸ್ಪೋರ್ಟ್ ಹುಷಾರು, ಟ್ರಾವಲ್ ಕಾರ್ಡ್ ತಗೋ.ನಗದು ಕಡಿಮೆ ಇರಲಿ. ಅಬ್ಬ ಎಷ್ಟು ತರಹೆವಾರಿ ಪ್ರಶ್ನೆಗಳು. ಪಾಪ ಮೊದಲಬಾರಿ ವಿದೇಶಕ್ಕೆ ಹೋಗುವವರಿಗೆ ಇಂಥ ಪುಕ್ಕಟೆ ಸಲಹೆಗಳು ದಾರಿದೀಪವೇ ಸರಿ."ಕೇಳು ಜನಮೇಜಯ" ರೀತಿ ಕಿವಿಗೊಟ್ಟರೇನು ನಷ್ಟ?

ಇದರ ಜತೆಗೆ ಇನ್ನೂ ಹಲವು ಪೂರ್ವಾನುಭವಿಗಳು ಅಲ್ಲಿ ಹೋದಾಗ ಅದನ್ನು ನೋಡುವುದನ್ನು ಮರೀಬೇಡ? ಇದನ್ನು ಮರೀಬೇಡ ಪ್ರವಾಸಿ ಸಂಸ್ಥೆಯವರ ಪಟ್ಟಿಯಲ್ಲಿ ಇರದಿದ್ದರೂ ನೀನೇ ಹೋಗಿ ಬಾ. ಇಂಥ ಸಲಹೆಗಳನ್ನು ನೀಡುತ್ತಾರೆ.ಇವೆಲ್ಲ ನೀವು ಗೂಗಲ್‌ನಲ್ಲಿ ಕೂತಲ್ಲೇ ವಿಶ್ವ ಪರ್ಯಟಣೆ ಮಾಡುವಾಗ ತಿಳಿದು ಬಂದದ್ದೇ. ಆದರೂ ಮಿತ್ರರ ಸ್ವಾನುಭವದ ಅಮೃತವಾಕ್ಕುಗಳಿಗೆ ಹೂಂಗುಡಲು ಅಡ್ಡಿಯೇನು? ಬರೆದಿಟ್ಟುಕೊಳ್ಳುತ್ತೀರಿ.

ಪ್ರವಾಸ ಆರಂಭವಾಗುತ್ತದೆ. ಆಗಲೇಬೇಕು ಬಿಡಿ. ಕಾಲ ಯಾರಿಗೂ ಕಾಯುವುದಿಲ್ಲ. ಲಂಡನ್ ನಗರ ವೀಕ್ಷಣೆ ಅಂತಿಟ್ಟುಕೊಳ್ಳಿ ಎಂದಿನಂತೆ ಪ್ರವಾಸಿ ಸಂಸ್ಥೆಯವರು ಹೈಡ್ ಪಾರ್ಕ್,ಟ್ರಫಾಲ್ಗರ್ ಚೌಕ, ಬಕಿಂಗ್ ಹ್ಯಾಮ್ ಪ್ಯಾಲೇಸ್,ವೆಸ್ಟ್ ಮಿನಿಸ್ಟರ್ ಅಬೆ, ಬೇಕರ್ ಸ್ಟ್ರೀಟಿನ ಶೆರ್ಲಾಕ್ ಹೋಮ್ಸ್ ಪ್ರತಿಮೆ ಮತ್ತು ಅಲ್ಲಲ್ಲಿ ಕಣ್ಣಿಗೆ ಬಿದ್ದ ಇತರ ಸ್ಮಾರಕಗಳನ್ನು, ಲಂಡನ್ ಇಂಥ ಮೋಜಿನ ವಿಹಾರವನನ್ನೂ ತೋರಿಸುವ ಮುತುವರ್ಜಿ ವಹಿಸುತ್ತಾರೆ. ಆದರೆ ಕ್ರಿಕೆಟ್ ಪ್ರಿಯರು ವಿಶ್ವವಿಖ್ಯಾತ ಲಾರ್ಡ್ಸ್ ಕ್ರೀಡಾಂಗಣವನ್ನೋ, ಸ್ಪಿನ್ ಗಾರುಡಿಗ ಚಂದ್ರಶೇಖರ್ ಪವಾಡ ಸೃಷ್ಟಿಸಿದ ಓವಲ್ ಮೈದಾನವನ್ನೋ ನೋಡುವ ತುಡಿತ ಹೊಂದಿರುತ್ತಾರೆ, ವಸ್ತು ಸಂಗ್ರಹಾಲಯಗಳನ್ನು ನೋಡುವ ಹಂಬಲದವರೂ ಇರುತ್ತಾರೆ. ಆದರೆ ಪ್ರವಾಸದ ಬಿಗಿ ವೇಳಾಪಟ್ಟಿಯಲ್ಲಿ ಇವೆಲ್ಲ ಸಾಧ್ಯವಿಲ್ಲ ಎನ್ನುತ್ತಾರೆ ಪ್ರವಾಸ ವ್ಯವಸ್ಥಾಪಕರು. ಬಿಡುವಿನ ವೇಳೆಯಲ್ಲಿ ಹೋಗಿಬರೋಣವೆಂದರೆ ಸಮಾನ ಮನಸ್ಕರು ಸಿಗುವುದಿಲ್ಲ ಅಲ್ಲದೆ ಗೊತ್ತಿಲ್ಲದ ದೇಶದಲ್ಲಿ ತಿರುಗಾಡುವುದಂತೂ ಮಹಾ ಅಪಾಯಕಾರಿ. ಜತೆಗೆ ಸಮಯದ ಕೊರತೆ. ಅಂತೂ ನಿಮ್ಮ ಕನಸಿನ ಮತ್ತು ಸ್ನೇಹಿತರಿಂದ ಕೇಳಿದ ಹಾಗೂ ಗೂಗಲ್ ವಿಡಿಯೋ ನೋಡಿ ಆಶಿಸಿದ್ದ ಸ್ಥಳಗಳು ಕನಸಿನಲ್ಲೇ ಉಳಿಯುತ್ತದೆ.

ಹೀಗೆಯೇ ನಮ್ಮದೇ ನಿವೇಶನದಲ್ಲಿ, ಸಾಲ ಹೊತ್ತುಕೊಂಡು ಕಟ್ಟಿದ ಮನೆ ಕೂಡ ನಮ್ಮ ಕನಸಿನ ಮನೆಯಂತೆ ಇರುವುದಿಲ್ಲ ಅಲ್ಲವೇ?

ಈ ಕೊರತೆಯ ಬಗ್ಗೆ ಒಬ್ಬ ಮಿತ್ರನೊಂದಿಗೆ ಲೋಕಾಭಿರಾಮವಾಗಿ ಚರ್ಚಿಸುತ್ತಿದ್ದೆ. ಅವನು "ಹೌದಯ್ಯ, ಈ ವ್ಯವಸ್ಥಿತ ಪ್ರವಾಸ ಹೋಗುವವರ ಹಣೆಬರಹವೇ ಹೀಗೆ. ಕಾಸೂ ಹಾಳು, ತಲೇನೂ ಬೋಳು ಅಂದಂತೆ ಅಂದುಕೊಂಡಿದ್ದನ್ನು ನೋಡೋಕೆ

ಆಗೋಲ್ಲ..." ಎಂದು ಮಾತನಾಡುತ್ತಿದ್ದಾಗ ಕಾಫಿ ಬಂತು ಅದನ್ನು ನಿಧಾನವಾಗಿ ಗುಟುಕರಿಸುತ್ತ "ನಾನು ಹೋದಾಗ ಈ ತರಹ ಆಗಲಿಲ್ಲ....ಎಂದು ಮಾತು ನಿಲ್ಲಿಸಿದ.

ನನಗೇಕೋ ಮಾತಿನ ನಡುವೆ ಅವನ ಈ ವಿರಾಮಗಳು ಸುತರಾಂ ಇಷ್ಟವಾಗಲಿಲ್ಲ ಅವನ ಮಾತಿಗೆ ಇಂಧನ ಹಾಕುವಂತೆ "ಮತ್ತೆ?" ಎಂದು ಪ್ರಶ್ನಿಸಿದೆ.

ಅವನು ಸಾವಕಾಶವಾಗಿ ಕಾಫಿ ಮುಗಿಸಿ "ಏನಾಯ್ತು ಅಂದರೆ ನನ್ನ ದೊಡ್ಡಪ್ಪನ ಮಗ ರಘು ಲಂಡನ್ನಿನಲ್ಲೇ ಇರೋದು? ಅದೇ ಕಣಯ್ಯ ಆ ಆರಡಿ ಉದ್ದದ ಸೈಂಧವ ನೀನೂ ನೋಡಿರಬಹುದು." ಎಂದು ಮತ್ತೆಮಾತು ನಿಲ್ಲಿಸಿದ.

"ಹೌದು, ಹೌದು ನೋಡಿ ಬಹಳ ವರ್ಷವಾಯಿತು." ಎಂದೆ.

"ನಾನು ಲಂಡನ್ನಿನಲ್ಲಿ ಅವನ ಮನೆಯಲ್ಲೇ ಠಿಕಾಣಿ ಹಾಕಿದ್ದೆ. ಯು ಕೆ ವೀಸಾಗೆ ಅವನೇ ಎನ್ ಓ ಸಿ ನೂ ಕೊಟ್ಟಿದ್ದ. ಅವನ ಮನೆಯಲ್ಲೇ ಒಂದು ತಿಂಗಳು ಇದ್ದೆ. ಶನಿವಾರ ಭಾನುವಾರ ಎಲ್ಲಾ ಕಡೆ ಕಾರಿನಲ್ಲೇ ಸುತ್ತಿಸೋನು, ಉಳಿದ ದಿನ ನಾನೇ ಮೆಟ್ರೋದಲ್ಲಿ ಪೋಲಿ ಅಲೀತಿದ್ದೆ. ಬಹಳ ಮಜವಾಗಿತ್ತು ಇಡೀ ಯುಕೆಯಲ್ಲಿ ಒಂದು ಕಲ್ಲನ್ನೂ ಬಿಟ್ಟಿಲ್ಲ ಅಂತೀನಿ. ನೀನೂ ಹಾಗೇ ಯಾರದ್ದಾದ್ರೂ ಬಾಲ ಹಿಡೀಬೇಕಾಗಿತ್ತು." ಎಂದ. ಪಾಪ ಇರೋ ವಿಷಯ ಹೇಳ್ತಾ ಇದ್ದಾನೆ ಬಡಾಯಿ ಅಂತ ಬಾಯಿ ಬಡಿಯೋದು ಸರಿಯಲ್ಲ ಎಂದು ಅವನಿಂದ ಬೀಳ್ಕೊಂಡೆ.

ವಾಪಸು ಬಂದ ಮೇಲಂತೂ ಪ್ರವಾಸದ ವರದಿ ಕೇಳುವವರ, ಪ್ರಶ್ನಿಸುವವರ ದಾಳಿಯನ್ನು ಎದುರಿಸುವುದು ಪ್ರಯಾಸದ ವಿಷಯವಾಗಿರುತ್ತದೆ. ಈ ಬಾರಿ ನಾವು ಆಸ್ಟ್ರೇಲಿಯಾ ನ್ಯೂಜಿಲೆಂಡ್ ಪ್ರವಾಸ ಹೋಗಿ ಬಂದಾಗಲೂ ಹೀಗೇ ಆಯಿತು. ಆಸ್ಟ್ರೇಲಿಯದಲ್ಲಿ ಏನೇನು ನೋಡಿದಿರಿ? ಎಂದು ಕೇಳುವವರಿಗೆ ಮೆಲ್ಬರ್ನ್, ಕೇನ್ಸ್, ಬ್ರಿಸ್ ಬೇನ್, ಗೋಲ್ಡ್ ಕೋಸ್ಟ್, ಸಿಡ್ನಿ ಎಂದು ಉತ್ತರಿಸಿದಾಗ 'ಹೋ, ಹಾಗಾದರೆ ನೀವು ಅಡಿಲೇಡ್, ಪರ್ತ್, ಹೋಬರ್ಟ್ ನೋಡಲಿಲ್ಲ ಎನ್ನಿ"ಎಂದು ಹಲವರು ತಣ್ಣಗೆ ಪ್ರತಿಕ್ರಿಯಿಸುತ್ತಿದ್ದರು. ಅಡಿಲೇಡ್ ಪ್ರವಾಸದ ಪಟ್ಟಿಯಲ್ಲಿ ಇರಲೇ ಇಲ್ಲ. ಪರ್ತ್ ಬೇರೊಂದು ದಿಕ್ಕು, ವಿಪರೀತ ದೂರ. ಆದರೆ ಈ ಪ್ರತಿಕ್ರಿಯೆಗಳು ನೋಡಲಿಲ್ಲ ಎಂಬ ಕೊರಗನ್ನು ನಮ್ಮಲ್ಲೂ ಬಿತ್ತುವುದರಲ್ಲಿ ಸಫಲವಾಗುತ್ತಿದ್ದವು.

ಹಾಗೆಯೇ ನ್ಯೂಜಿಲೆಂಡ್‌ನಲ್ಲಿ ನಾವು ನೋಡಿದ ದೊಡ್ಡ ನಗರಗಳು ಆಕ್ಲೆಂಡ್ ಹಾಗೂ ಕ್ರೈಸ್ಟ್ ಚರ್ಚ್. ಉಳಿದ ಸ್ಥಳಗಳಾದ ರೋಟರೋವಾ, ಕ್ವೀನ್ಸ್ ಟೌನ್, ಟ್ವೈಜೆಲ್‌ಗಳು ಚಿಕ್ಕ ನಗರಗಳು. ವೆಲಿಂಗ್ ಡನ್ ನೋಡಲಿಲ್ಲವಾ? ಡನೆಡಿನ್ ಹೋಗಲಿಲ್ಲವಾ ಎಂದರೆ ಇಲ್ಲ ಎನ್ನದೆ ವಿಧಿ ಇರಲಿಲ್ಲ.

ಅದೇ ರೀತಿ ದುಬಾಯಿಗೆ ನಾವು ಹೋದಾಗ ಫ್ಯೂಚರ್ ಮ್ಯೂಸಿಯಂ ಎಂಬ ಅತ್ಯಾಧುನಿಕ ನಿರ್ಮಾಣವನ್ನು ನಾವು ನೋಡಲಾಗಲಿಲ್ಲ. ಎರಡು ತಿಂಗಳ ಮುಂಚೆ ಆನ್ ಲೈನಿನಲ್ಲಿ ಟಿಕೆಟ್ ಕಾದಿರಿಸಬೇಕಂತೆ. ಪ್ರವಾಸ ವ್ಯವಸ್ಥಾಪಕನಾಗಲೀ ಮತ್ತಾರಾದರೂ ಆಗಲಿ ನಮಗೆ ಈ ವಿಷಯ ಹೇಳಲೇ ಇಲ್ಲ. ನಮ್ಮ ಜತೆ ಬಂದ ಸಹಪ್ರವಾಸಿಗರೂ ಪಾಪ ಇಂಥ ಅಜ್ಞಾನಿಗಳೇ. ಆಸಕ್ತರಿಗೆ ಟಿಕೆಟ್ ಕಾದಿರಿಸಿ ನಮ್ಮಿಂದ ಪ್ರತ್ಯೇಕವಾಗಿ ದುಡ್ಡು ವಸೂಲಿ ಮಾಡಲೂ ಪ್ರವಾಸ ವ್ಯವಸ್ಥಾಪಕನಿಗೆ ಅವಕಾಶವಿತ್ತು.

ಪ್ರವಾಸದಲ್ಲಿ ನಮಗೆ ಮುಖ್ಯವಾದದ್ದನ್ನು ನೋಡಿದ್ದೇವೆ ಎಂದು ನಮಗೆ ನಾವೇ ಸಮಾಧಾನಪಟ್ಟುಕೊಂಡೆವೋ ಮನಶಾಂತಿ. ಇಲ್ಲದಿದ್ದರೆ ಮನಸ್ಸಿನೊಳಗೆ ಅಂತಃಕಲಹ ಮತ್ತೆ ಮನೆಯವರೊಂದಿಗೆ ವಾಗ್ವಾದ ಎಲ್ಲ ಕಟ್ಟಿಟ್ಟ ಬುತ್ತಿ.

ಹಾಗಾಗಿ ಪ್ರವಾಸ ಹೋಗಿ ಬಂದ ಮೇಲೆ ಸ್ಥಿತಪ್ರಜ್ಞರಾಗಿ. ನೋಡದ ಸ್ಥಳಗಳನ್ನು ಕೂತಲ್ಲೇ ನೋಡಲು ಕಾಫಿ ಲೋಟ ಕೈಯಲ್ಲಿ ಹಿಡಿದು, ಗೂಗಲ್‌ಗೆ ಶರಣಾಗಿ. "ಅದೇ ಮತ್ತೊಮ್ಮೆ ಉಣ್ಣುವೆ ಕದ ತೆಗೆ" ಎನ್ನುವ ಗಾದೆ ಮಾತಿನ ರೀತಿ.

ಹೋಗುವ ಮೊದಲು ನೀವು ಮಾಡಿದ್ದೂ ಅದೇ ಅಲ್ಲವೆ.! ●

## ಪುಸ್ತಕ ಪರಿಚಯ


**ಹಾಸ್ಯ ಪಯಣ**

**ಶ್ರೀನಿವಾಸ ಹುದ್ದಾರ**

ಶ್ರೀ ಗುರುದೇವ ಪ್ರಕಾಶನ, ಧಾರವಾಡ

ಬೆಲೆ 100/–

**ಪ್ರತಿಗಳಿಗೆ ಸಂಪರ್ಕಿಸಿ : 9448541024**




20 ಸೊಗಸಾದ ಹಾಸ್ಯ ವಿಡಂಬನೆ, ವಿನೋದ ಎಂದೆಲ್ಲಾ ಕರೆಯಬಹುದಾದ ಲೇಖನಗಳ ಸಂಗ್ರಹ ಇದು. ಅಪರಂಜಿಯ ಲೇಖಕಿ ಭುವನೇಶ್ವರಿ ಹೆಗಡೆ ಅವರು ಬರೆದಿರುವ ಮುನ್ನುಡಿ ಪುಸ್ತಕಕ್ಕೆ ಕಳಶಪ್ರಾಯವಾಗಿದೆ.

ಟೋಪಿ ಹಾಕಿಸಿಕೊಳ್ಳುವವನ ವಿಳಾಸ, ನಿದ್ದೆ ಮಾರಲಿಕ್ಕಿದೆಯೇ, ಕತ್ತೆಗಳಾಗಿದ್ದರೆ ಮುಂತಾದ ಶೀರ್ಷಿಕೆಗಳನ್ನು ಓದಿದರೇ ಸಾಕು ಲೇಖನಗಳನ್ನು ಓದುವ ಕುತೂಹಲ ಬರುತ್ತದೆ.

ಈ ಪುಸ್ತಕವನ್ನು ಓದಿ ಮುಗಿಸಿದಾಗ ಒಂದು ಸೊಗಸಾದ ಹಾಸ್ಯ ಯಾನವನ್ನು ಮಾಡಿದ ಅನುಭವವಾಗುತ್ತದೆ. ಲೇಖಕರಿಗೆ ಶುಭವಾಗಲಿ ಅವರಿಂದ ಇನ್ನೂ ಸಾಹಿತ್ಯ ಸೇವೆ ನಡೆಯಲಿ.

– ಸುಕೇಶವ

# ಭಜನೆ

ಭಾಗೀರಥಿ ಹೆಗಡೆ, ಶಿರಸಿ

“ಮೊನ್ನೆ ಯಾಂತಾತು ಗುತ್ತಿದ್ದ? ಫಜೀತಿ ಪಾವನ ಸೀತಾರಾಂ. ಮಾರಾಯ್ತಿ, ಯಾರ್ಯಾರಿಗೂ ಬ್ಯಾಡ ಇಂಥಾ ಸಂಕ್ಟ” ಗುಡ್ಡೆ ಮನೆ ಮಾದಕ್ಕ ಬಾಯಲ್ಲಿದ್ದ ಕವಳವನ್ನು ದವಡೆಯ ಒಂದು ಬದಿಗೆ ಒತ್ತಿಟ್ಟು ಗೊಜ ಗೊಜ ಮಾತಾಡುತ್ತಿದ್ದರೆ ನಾನು ಕಕ್ಕಬೆಕ್ಕಾಗಿ ನೋಡುತ್ತಿದ್ದೆ. ಯಾಕೆಂದರೆ ನಮ್ಮೂರಿನ ಪೋಕರಿ ಹುಡುಗರು ಎಲ್ಲೇ ಭಜನೆ ಕಾರ್ಯಕ್ರಮವಿರಲಿ “ಪತಿತ ಪಾವನ ಸೀತಾರಾಮ” ಬದಲಿಗೆ “ಫಜೀತಿ ಪಾವನ ಸೀತಾರಾಮ”ಎಂದೇ ಕೂಗುತ್ತಿದ್ದರು. ಇದೀಗ ಅರುವತ್ತು ವರ್ಷದ ಮಾದಕ್ಕನೂ ಹಾಗೇ ಹೇಳುತ್ತಿದ್ದರೆ ನನ್ನ ಕಣ್ಣು ಇನ್ನು ಹೇಗಿರುತ್ತದೆ ಹೇಳಿ. ಹಾಂಗಾದ್ರೆ ಆಗಿದ್ದಾದ್ರೂ ಯಂತದು ಅಂದ್ರೆ ಅದಕ್ಕೆ ಹೂಂ ಹಾಂ ಅನ್ನದೆ ನುರಿ ನುರಿಸಿ ಕವಳ ಜಗಿಯುವದೊಂದೇ! ಓಹೋ! ಇವಳ ಸೊಕ್ಕು ಇವಳ ಹತ್ರಾನೆ ಇರ್ಲಿ ಎಂದು ನಾನು ಮೇಲೆದ್ದ ಕೂಡಲೇ “ಕುಂತ್ಗಳೆ ಮಾರಾಯ್ತಿ, ಈ ಕವಳ ತುಪ್ಪಿಕ್ಕೆ...” ಅಂದವಳು ಬಾಯೊರೆಸಿಕೊಳ್ಳುತ್ತ ಬಾಯ್ಬಿಟ್ಟಳು.

ಮೊನ್ನೆ ಅವಳ ಸೊಸೆ ಮುಟ್ಟಾಗಿದ್ದರಿಂದ ಇವಳೇ ಅನ್ನಪೂರ್ಣೇಶ್ವರಿಯಾಗಿದ್ದೂ, ಎಲ್ರಿಗೂ ಉಂಡಾಗಿ, ‘ಹೆರಿಗೆ ಪ್ಯಾಣಿಗೂ ಬಡಿಸಿ ಎಂಜಲು ಸಾರಿಸುತ್ತಿದ್ದಾಗ ಅವಳ ಸ್ವಂತ ಭಾವಯ್ಯ “ಯಾರ್ರೊ ಮನೆಲ್ಲಿ?” ಎಂದು ಮೆಟ್ಟಿಲೇರಿದ್ದೂ, “ಮಾದೀ ಮುಷ್ಟಿ ಅನ್ನ ಇದ್ರೆ ಬಡಿಸಿಬಿಡೇ.” ಅಂದಿದ್ದೂ, ಮತ್ತೆ ಹೊಸ್ತಾಗಿ ಅನ್ನಕ್ಕಿಟ್ಟು, ಗೊಜ್ಜು ಬೀಸಿ, ಹೊತ್ತು ಸೂರಿಳಿಯೊ ಕಾಲಕ್ಕೆ ಬಡಿಸಿ ಮುಗಿಸಿದ್ದೂ ಹೇಳಿ, ಸಾಕೇ ಮಾರಾಯ್ತಿ ಈ ಸುಟ್ಟ ಹೆಣ್ಣು ಜನ್ಮ ಎಂದು ಅಲವತ್ತುಕೊಂಡಳು. ನಾನಾದರೂ ಮತ್ತೇನ ಹೇಳಲಿ? ಇದು ಎಲ್ಲರ ಮನೆಯ ಎಲ್ಲಾ ಹೆಂಗಸರ ಹಣೆಬರಹ. ಅಲ್ಲದೆ ಆಗಿನ ಕಾಲದಲ್ಲಿ, ಆ ಹಳ್ಳಿ ಮೂಲೆಯಲ್ಲಿ ಯವ ಹೋಟೆಲ್ಲಾ? ಖಾನಾವಳಿಯಾ? ಏನಿತ್ತು? ಮನೆ ಹೆಂಗಸು ಕೈ ಸುಟ್ಟುಕೊಂಡರೆ ಮಾತ್ರ ಗಂಡಸರು ಮಕ್ಕಳು ಮುದುಕರು ಹೀಗೆ ಸಮಸ್ತರ ಹೊಟ್ಟೆ ತಂಪಾಗುವದು. ಹಾಗಾಗಿ ಯಾರು ಎಲ್ಲಿಗೇ ಹೋಗಿರಲಿ ಊಟದ ಹೊತ್ತಿಗೆ ಮನೆಯಲ್ಲೇ ಹಾಜರಿ ಹಾಕಬೇಕು. ಅಥವಾ ತೀರಾ ಅನಿವಾರ್ಯವಾದರೆ ಹತ್ತಿರದಲ್ಲಿ ಸಿಕ್ಕ ನೆಂಟರ ಮನೆಯಲ್ಲಿ “ಶೆಟ್ಟಿ ಬಿಟ್ಟಲ್ಲೇ ಪಟ್ಣ” ಅನ್ನಬೇಕು. ಅಂದಾಗ “ಪತಿತ ಪಾವನ ಅಂದ್ರೂ ಒಂದೇ, ಫಜೀತಿ ಪಾವನ ಅಂದ್ರೂ ಒಂದೇ.” ಯಾರಿಗ್ಗೊತ್ತಿಲ್ಲ? ಹಾಂಗಾಗಿ ನಾನು ಮಾದಕ್ಕನ ಮಾತಿಗೆ ಹೂಂ ಹೂಂ ಅಂದೆ ‘ಉಹುಂ’ ಅನ್ನುವಂತೆ. ಅದೆಲ್ಲ ಸರಿ, ‘ಫಜೀತಿ ಪಾವನದ’ ಕತೆ ಎಂತದು?

ಅಂದರೆ “ರಘುಪತಿ ರಾಘವ ರಾಜಾ ರಾಮ, ಪತಿತ ಪಾವನ ಸೀತಾರಾಮ” ಎಂಬ ಪ್ರಸಿದ್ಧ ಭಜನೆಯ ಸಾಲುಗಳನ್ನು ನೀವೆಲ್ಲ ಕೇಳಿಯೇ ಇರುತ್ತೀರಿ. ಇದಕ್ಕೆ ಗಾಂಧೀಜಿಯವರು “ಈಶ್ವರ ಅಲ್ಲ ತೇರೊ ನಾಮ, ಸಬಕೊ ಸನ್ಮತಿ ದೇ ಭಗವಾನ” ಎಂಬ ಸಾಲನ್ನೂ ಸೇರಿಸಿದ್ದೂ ನಮಗೆಲ್ಲ ಗೊತ್ತು. ಹಾಗೇ ಪ್ರಾರ್ಥನಾ ಸಭೆಯಲ್ಲೇ ನಮ್ಮ ಬಾಪೂಜಿ ಹಂತಕನ ಗುಂಡಿಗೆ ಬಲಿಯಾಗಿದ್ದೂ ಇಡೀ ವಿಶ್ವಕ್ಕೇ ತಿಳಿದ ಸಂಗತಿ. ಅದೇನೇ ಇದ್ದರೂ ನಮ್ಮೂರ ಪೋರ ಪಾಂಚಾಲರ ಬಾಯಲ್ಲಿ ‘ಫಜೀತಿ ಪಾವನ’ ಆಗಿದ್ದನ್ನು ಈಗಾಗಲೇ ಹೇಳಿದ್ದೇನೆ. ಒಂದೇ ಒಂದು ಕ್ಷಣ ಕುಂತಲ್ಲಿ ಕುಂತಿರಲಾರದ, ಬಾಲ ಮಾತ್ರ ಕಡಿಮೆಯಾದ ಮಕ್ಕಳಿಗೆ ತಾಸರ್ಧ ತಾಸು ಕುಂತಲ್ಲೇ ಕುಂತು ತಾಳ ಕುಟ್ಟುತ್ತ ಭಜನೆ ಮಾಡುವದೆಂದರೆ ಸಾಮಾನ್ಯದ ಮಾತೆ? ಅದಕ್ಕೇ ಕಪಿ ಬುದ್ಧಿ ಕವಿ ಬುದ್ಧಿಯಾಗಿ ‘ಫಜೀತಿ’ಯಾಗಿದ್ದು. ಇರಲಿ.  ಇನ್ನು ಭಜನೆಯ ಸುದ್ದಿಗೆ ಬಂದರೆ ನಮ್ಮ ಬಾಲ್ಯ ಕಾಲದಲ್ಲಿ ಪ್ರತಿ ಮನೆಯಲ್ಲಿ ಮೂರುಸಂಜೆ ಹೊತ್ತಲ್ಲಿ ಭಜನೆ ಕಡ್ಡಾಯವಾಗಿತ್ತು.

ಮನೆಯ ಗಂಡಸರು, ಮಕ್ಕಳು ಮರಿಗಳು, ಮುದುಕರು ಎಲ್ಲರೂ ದೇವರ ಮುಂದೆ ಭಜನೆಗೆ ಹಾಜರಿರಲೇ ಬೇಕು. ಆದರೆ ಹೊಂತಗಾರ ಹೆಂಗಸರು?

ಛೆ! ಛೆ!, ಅವರೂ ತಾಳ ಕುಟ್ಟುತ್ತ ಕೂತುಬಿಟ್ಟರೆ ಒಲೆ ಮೇಲೆ ಬೇಯುತ್ತಿರುವ ಅನ್ನ ಬಸಿಯುವವರು ಯಾರು? ಹಿಳ್ಳೆ ಹುಡ್ರಿಗೆ ಹಾಲೆಣ್ಣೆ ಯಾರು ಮಾಡುತ್ತಾರೆ? ಭಜನೆ ಗಲಾಟೆಯಲ್ಲೇ ನೆಲಕ್ಕೆ ಎಂಟರಂಕೆ ಹೊಡೆದ ಸಾಲೆ ಪೋರಗಳ ಹೊಟ್ಟೆ ಗತಿ ಎಂತದು? ಇಲ್ಲ, ಮನೆಯ ಯಜಮಾಂತಿಗೆ ಆ ಹೊತ್ತಲ್ಲಿ ತುರಿಸಿಕೊಳ್ಳಲೂ ಪುರಸೊತ್ತಿಲ್ಲ. ಹಾಗಾಗಿ ಅವಳು ಓಡಾಡುತ್ತ, ಕೆಲಸ ಮಾಡುತ್ತಲೇ "ಜ್ಞಾನವ ಕರುಣಿಸೊ ತಂದೆ, ಈ ಬಾಳಲಿ ನಾ ಬಲು ನೊಂದೆ" ಎಂದು ಒರಲಬೇಕು. ಹಾಗೇ ಗ್ರಾಮಕ್ಕೊಂದೆರಡು ಇರುವ ದೇವಸ್ಥಾನಗಳಲ್ಲೂ ವರ್ಷಕ್ಕೆ ಎರಡು ಮೂರು ಭಜನೆ ಸಪ್ತಾಹ ನಡೆಯುವದಿತ್ತು. ನವರಾತ್ರಿಯಲ್ಲಿ, ವೈಶಾಖದ ವಸಂತೋತ್ಸವದಲ್ಲಿ, ಜೊತೆಗೆ ಯಾರಾದ್ರೂ ಹರಕೆ ಹೇಳಿಕೊಂಡಿದ್ದರೆ ಆಗಲೂ ಕೂಡ. ಅಂದರೆ ಮೂರು ಹಗಲು ಮೂರು ರಾತ್ರಿ ಸಮನಾಗಿ ಪಾಳಿಯ ಮೇಲೆ ಆರೆಂಟು ಜನರ ತಂಡ 'ಅಮ್ನೋರ ಮನೆ'ಯ ಘಂಟೆ ಮಂಟಪದಲ್ಲಿ ತೆತ್ತೀಸ ಕೋಟಿ ದೇವರ್ಕಳ ಭಜನೆ ಮಾಡುವದು. ಅದೂ ಹೇಗೆ? ಒಬ್ಬ ಹೇಳಿಕೊಟ್ಟಂತೆ ಎಲ್ಲರೂ ಕೂಗುತ್ತ, ಗಿರಿ ಗಿರಿ ತಿರುಗುತ್ತ, ಕಾಲೆತ್ತಿ ಅಡ್ಡ ತಾಳ ಹಾಕಿ ಕುಣಿಯುತ್ತ, ಮೈ ತುಂಬ ಬೆವರು ಸುರಿಸುತ್ತಿದ್ದರೆ ಯಾವ ದೇವರೇ ಆದರೂ ಪ್ರತ್ಯಕ್ಷನಾಗಲೇಬೇಕು. ಸಂತೋಷದಿಂದಲೊ ಸಂಕಟದಿಂದಲೋ ಎಂಬುದು ಬೇರೆ ಮಾತು! ಆದರೆ "ಎಲ್ಲಿರುವೆ ತಂದೆ ಬಾರೊ, ಓ ಮಾರುತಿ, ಎಲ್ಲಿರುವೆ ತಂದೆ ಬಾರೊ" ಎಂಬ ಕೂಗು ಕೇಳಿ ಎದುರಿನ ಅಶ್ವತ್ಥ ಮರದ ಮೇಲಿನ ಮಂಗಗಳು ಆಗಿಂದಾಗ ಪರಾರಿಯಾಗುತ್ತಿದ್ದುದು ಬೇರೆ ವಿಷಯ! ಜೊತೆಗೆ ಇಲ್ಲೂ ಕೂಡ ಹೆಂಗಸರು ಹೊರಗೆ. ಕಾರಣ ಮೊದಲೇ ಹೇಳಿದ್ದೇನೆ.

ಆದರೆ ಇಂದಿನ ವೈಜ್ಞಾನಿಕ ಯುಗದಲ್ಲೂ ಭಜನಾ ಕಾರ್ಯಕ್ರಮ ಮೊದಲಿಗಿಂತ ಹತ್ತು ಪಟ್ಟು ಹೆಚ್ಚಾಗಿರುವದಂತೂ ಹೇಗೆ? ಅನ್ನುವದೊಂದು ತಲೆ ತಿನ್ನುವ ಪ್ರಶ್ನೆ! ಹಳ್ಳಿ, ಪಟ್ಟಣ ಎಂದಿಲ್ಲದೆ ಊರೂರಲ್ಲಿ ಭಜನಾ ಮಂಡಳಿಗಳು! ಅದೂ ಕೂಡ ಬಹುತೇಕ ಹೆಂಗಸರದು! ಮಠ ಮಂದಿರಗಳಲ್ಲಿ ಮಾತ್ರವಲ್ಲದೆ ವಿವಿಧ ಸಂದರ್ಭಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವಾಗಿಯೂ ತಾಳಮೇಳಗಳೊಂದಿಗೆ ಭಜನೆ! ಯಾವುದೇ ಸಾಹಿತ್ಯಕ, ಸಾರ್ವಜನಿಕ ಸಮಾರಂಭಗಳೂ ಪ್ರಾರ್ಥನೆಯೊಂದಿಗೇ ಪ್ರಾರಂಭ! ಶಾಲಾ ಕಾಲೇಜುಗಳಲ್ಲೂ ಭಜನೆಯ ಇನ್ನೊಂದು ರೂಪವಾದ ನಾಡಗೀತೆ ಅಥವಾ ರಾಷ್ಟ್ರಗೀತೆಯ ಗಾಯನ! ಹೀಗೆ ಕಣ್ಣಿಗೆ ಕಾಣದ ಕೈಗೆ ಸಿಕ್ಕದ ದೇವರ ಆರಾಧನೆ ಬಹುಶ: ಮನಷ್ಯನಿರುವವರೆಗೂ ಇರುವಂಥದು ಅಂದುಕೊಳ್ಳೋಣ. ಆದರೆ ಈ ಕಲಿಗಾಲದ ಗಂಡಸರಲ್ಲಿ ಮಾತ್ರ ಭಯ ಭಕ್ತಿ ಕಾಣೆಯಾಯಿತೊ ಅಥವಾ ಅವರ ನೂರಾ ಎಂಟು ರಾಜಕಾರಣದಿಂದ ಬಿಡುವು ದೊರೆಯದಾಯಿತೊ, ಅಥವಾ ಭಜನೆ ಗಿಜನೆ ಎಲ್ಲ ಮೂಢನಂಬಿಕೆ ಎಂಬ ನಂಬಿಕೆ ಬಲವಾಯಿತೊ ಅಂತೂ ಗಂಡಸರ ಭಜನಾ ಮಂಡಳಿ ನಮ್ಮೂರ ಬದಿಗಂತೂ ಎಲ್ಲೂ ಕಾಣುತ್ತಿಲ್ಲ. ಆಗಲಿ, ಮೂಢನಂಬಿಕೆಯೇ ಆಗಿದ್ದರೂ ಪರವಾ ಇಲ್ಲ. ಇದೇನು ಕೊಲೆಯೇ? ಕಳ್ಳತನವೆ? ಅತ್ಯಾಚಾರ, ಅನಾಚಾರವೆ? ನಮ್ಮ ನಮ್ಮ ಭಕ್ತಿ ನಮಗೆ. ನಮ್ಮ ನಮ್ಮ ಸಮಯ, ನಮ್ಮ ನಮ್ಮ ಗಂಟಲು ಸಾಮರ್ಥ್ಯ. ಇದರಿಂದ ಯಾರಿಗೇನು ತೊಂದರೆ? ಮಹಾ ಮಹಾ ವಿಜ್ಞಾನಿಗಳೂ ಚಂದ್ರಯಾನದ ಯಶಸ್ಸಿಗೆ ತಿಮ್ಮಪ್ಪನ ಮೊರೆ ಹೊಕ್ಕಾಗ ನಮ್ಮ ನಿಮ್ಮಂಥ ಹುಲು ಮಾನವರ ಪಾಡೇನು ಮಹಾ! ಇರಲಿ.

ಭಜನೆಯ ಪುರಾಣ ಹೇಳುವಾಗ ನಮ್ಮೂರಿನಲ್ಲಿದ್ದ, ಈಗಲೂ ಕೆಲ ಮಟ್ಟಿಗೆ ಇರುವ ಇನ್ನೊಂದು ವಿಶಿಷ್ಟ ಭಜನೆ ಸಪ್ತಾಹದ ಕತೆ ಹೇಳಲೇಬೇಕು. ಯಾರದೇ

ಮನೆಯಲ್ಲಿ ಶ್ರಾದ್ಧ, ಸತ್ಯನಾರಾಯಣ, ಸಮಾರಾಧನೆ, ತೊಟ್ಟಿಲೌತಣ ಹೀಗೆ ಜನ ಸೇರುವ ಸಂರ್ಭದಲ್ಲೆಲ್ಲ ಊಟ ಮುಗಿಯುವದೇ ತಡ ಮೆತ್ತಿನ ಮೇಲೆ ಗಂಡಸರ ರಾಜ, ರಾಣಿ, ನೈಲಾ, ಡೈಲಾ ಎಂಬ ಗೌಜಿ ಶುರು. ನನ್ನದು ಫುಲ್, ನನ್ನದು ಆಲ್ ಸಿರಿಯಲ್, ನನ್ನದು ಡ್ರಾಪ್, ಹೀಗೆ ಕೂಗೇ ಕೂಗು. ಮತ್ತೆ ಅವರಿಗೆಲ್ಲ ಚಾ ಕಾಫಿ ಕುಂತಲ್ಲೇ ಸರಬರಾಜು! ಆಟದಲ್ಲಿ ಯಾರೆಷ್ಟು ದುಡ್ಡು ಗೆದ್ದರೊ, ಯಾರೆಷ್ಟು ಕಳಕೊಂಡರೊ ಯಾರಿಗ್ಗೊತ್ತು? ಇಂದು ತನಗಿಷ್ಟು ಬಂತು ಅಷ್ಟು ಬಂತು ಎಂದು ಕೊಚ್ಚಿಕೊಳ್ಳುತ್ತಾರೇ ಹೊರತು ಸೋತವರು ಹೇಗೆ ಬಾಯ್ಬಿಡುತ್ತಾರೆ? ಅವರ ಹೆಂಡತಿಯರೂ ಅಲ್ಲಿ ಬಂದಿರುತ್ತಾರಲ್ಲ! ಹಾಗಾಗಿ ಎಲ್ಲಿ ಕಳೆಯಿತೊ ಅಲ್ಲೇ ಹುಡುಕು ಎಂಬಂತೆ ಹಗಲು ರಾತ್ರಿ ಕುಂತಲ್ಲೇ ಕೂತು ಆಠೀನ ರಾಣಿ, ಚೌಕ ಎಕ್ಕ, ಕಳಾವರ ಗುಲಾಮ, ಇತ್ಯಾದಿ ಭಜನೆ ಮಾಡುತ್ತ ದಿನಗಟ್ಲೆ ಕುಂತುಬಿಟ್ಟರೆ ಅವರಿಗೆ ಅನ್ನ, ಆಸ್ರಿಗೆ ಮಾಡಿ ಹಾಕಿ ಹಾಕಿ ಮನೆ ಹೆಂಗಸ್ರು ಪಡ್ಚ! ಆ ಕಿಚ್ಚಿಗೆ ಅವರೇ ಇಟ್ಟ ಹೆಸರು "ಭಜನೆ ಸಪ್ತಾಹ"

ಒಮ್ಮೆ ಏನಾಯಿತೆಂದರೆ ಹೀಗೇ ಒಂದು ಮನೆಯಲ್ಲಿ ಎರಡು ದಿನದಿಂದ ಇಸ್ಪೀಟು ಮಂಡಳ ನಡೆಯುತ್ತಿತ್ತು. ಅದರಲ್ಲೊಬ್ಬನ ಕಿಸೆ ಪೂರ್ತಿ ಖಾಲಿಯಾಗಿ ಮನೆ ಯಜಮಾನನಿಂದ ಕೈಗಡ ತಗೊಂಡು ಅದೂ ಕಳೆದು ಹೋದಾಗ ಮೇಲೆದ್ದವನು ಈಗೇನ್ ಮಾಡ್ಲಿ? ಈಗೇನ್ ಮಾಡ್ಲಿ? ಕುಂತಲ್ಲೇ ಕಳೆದುಕೊಂಡ ಗಸಾ ಗಸಿ ಆರು ಸಾವಿರ! ಎಲ್ಲಿಂದ ತರ್ಲಿ? ಎಂಥಾ ಸಗಣಿ ತಿಂಬೊ ಕೆಲಸ ಮಾಡಿಬಿಟ್ಟೆ?ಎಂದೆಲ್ಲ ಹಳ ಹಳಿಸುತ್ತಿದ್ದವನಿಗೆ ಮತ್ತಿ ಮರದಡಿಗೆ ಏನೊ ಒಂದು ಜ್ಞಾನೋದಯವಾಯಿತು! ಮಜಕೂರು ಹೀಂಗ್ಹೀಂಗೆ ಎಂದು ಒಂದು ತಳ್ಳಿ ಅರ್ಜಿ ಬರೆದು ಪೋಸ್ಟಿಗೆ ಹಾಕಿ ಕಾಯುತ್ತ ಕೂತ. ಅದಾಗಿ ಐದನೇ ದಿನದ ರಾತ್ರಿ ಅಮಾವಾಸ್ಯೆಯ ಕರ್ರೊ ಕತ್ತಲಲ್ಲಿ, ಊರೆಲ್ಲ ಉಂಡು ಮಲಗಿದ ಹೊತ್ತಲ್ಲಿ, ಇಸ್ಪಿಟು ಮನೆಯ ಮುಂದೆ ಪೋಲೀಸ ಜೀಪು ಬಂದು ನಿಂತಿತು. ಯಾರೊ ಢಬ ಢಬ ಬಾಗಿಲು ಬಡಿದ ಸದ್ದಿಗೆ ಯಜಮಾನ "ಈ ಸುಟ್ಟ ಹೆಂಗಸ್ರಿಗೆ ಬಾಗಲು ತೆಗದು ನೋಡಲೂ ಆಗ್ತಿಲ್ಲೆ. ಅದಕೂ ನಾನೇ ಬಂದು ಸಾಯವು" ಎಂದು ಒಟಗುಟ್ಟುತ್ತ ಒಡ್ಡೋಲಗ ಬಿಟ್ಟು ಬಂದು ಕದ ತೆಗೆದರೆ ಎದುರಿಗೆ ಲಾಠಿ ಬೀಸುತ್ತಿದ್ದ ಪೋಲೀಸರು! "ಏನ್ರೀ, ಹೇರಂಭ ಹೆಗಡೆ ಅಂದ್ರೆ ನೀವೇ ಅಲ್ವ? ಇಲ್ನೋಡಿ ವಾರಂಟ" ಎಂದು ಪಿ. ಸಿ. ಗೆ ಸನ್ನೆ ಮಾಡುತ್ತಿದ್ದಾಗ ಯಜಮಾನ "ಹೌದ್ಹೌದು...ಅಲ್ಲ ಅಲ್ಲ" ಎಂದು ಮೆಂ ಮೆಂ ಮೆಂ ಮಾಡುತ್ತಿದ್ದಾಗಲೇ ಅವನ ಕೈ ಹಿಡಿದು "ನಡೀರಿ ಸ್ಟೇಶನ್ನಿಗೆ, ಹೌದೊ ಅಲ್ವೊ ಅಲ್ಲೇ ನೋಡೋಣ" ಎಂದು ಜಬರಿಸಿ ಎಳೆದುಕೊಂಡೇ ಹೋದ. ಅಷ್ಟರಲ್ಲೇ ದುಡು ದುಡು ಮೆತ್ತು ಹತ್ತಿದ ಪೀಸಿಗಳು ಅಲ್ಲಿದ್ದ ನಾಲ್ಕು ಜನರನ್ನು ತರುಬಿಕೊಂಡು ಹೊರಟರೆ ಮತ್ತಿಬ್ಬರು ಅಡಗಿಕೊಳ್ಳುವ ಗಡಿಬಿಡಿಯಲ್ಲಿ ಒಬ್ಬ ಅಡಿಕೆ ಅಟ್ಟಕ್ಕೆ ಜಿಗಿದು ಕೆಳಗೆ ಬಿದ್ದು "ಅಯ್ಯಯ್ಯೊ ಅಯ್ಯಯ್ಯೊ" ಕೂಗತೊಡಗಿದ. ಇನ್ನೊಬ್ಬ ಓಡಿ ಬಂದವನು ಜಗುಲಿಯಲ್ಲಿ ಮಲಗಿದ ಮುಟ್ಟಾದ ಮನೆ ಸೊಸೆಯ ಹಾಸಿಗೆಯೊಳಗೆ ಹೊಕ್ಕ! ಅವಳು ಹೆದರಿ ಕೂಗಲು ಬಾಯ್ತೆರೆಯುತ್ತಿದ್ದಂತೆ "ಕೂಗಾಡ ಕೂಗಾಡ. ಆನೆಯ, ನಿಂಗೆಂತಾ ಮಾಡ್ತ್ನಿಲ್ಲೆ ಹೆದರಡ." ಎಂದು ಅವಳ ಬಾಯಿ ಮುಚ್ಚಿ, ಪೋಲೀಸರ ಸುದ್ದಿ ಪಿಸುಗುಟ್ಟಿ ಮುಸುಕೆಳೆದುಕೊಂಡು ಬಚಾವಾದ! ಮುಂದೇನೇನಾಯಿತೊ, ಹೋಯಿತೊ ಸ್ಟೇಶನ್ನಿಗೆ ಹೋದವರು ಮೂರನೇ ದಿನವೇ ವಾಪಸಾಗಿಬಿಟ್ಟರು! ಅಂತೂ ಭಜನೆ ಸಪ್ತಾಹದ ಒಂದು ದಾಖಲೆ ನಮ್ಮೂರ ಜನರ ಬಾಯಲ್ಲಿ ವರ್ಷಗಟ್ಟಲೆ ನಲಿದಾಡುತ್ತಿತ್ತು.

ಈಗ ಖರೆ ಅಂದ್ರೆ ಖರೆ ಭಜನಾ ಕಾರ್ಯಕ್ರಮಕ್ಕೆ ಬಂದೆ, ಬಂದೇ ಬಿಟ್ಟೆ. ನಮ್ಮ ಪಕ್ಕದ ಮನೆಯಲ್ಲಿ ಕಾವೇರತ್ತೆ ಎಂಬ ಮುದುಕಿ. ವರ್ಷ ಎಪ್ಪತ್ತೊ ಎಂಬತ್ತೊ ಯಾರಿಗೆ ಗೊತ್ತು? ದಿನಾ ಮಗೆ ಓಳಿಗೆ ನೀರು ಹೊಯ್ಯುವಷ್ಟು ಗಟ್ಟಿ ಇದ್ದಳು ಮಾತ್ರ. ಪ್ರತಿನಿತ್ಯ ಮುರುಸಂಜೆ ಹೊತ್ತಲ್ಲಿ ಮೊಮ್ಮಕ್ಕಳನ್ನೆಲ್ಲ ಕುಂಡ್ರಿಸಿಕೊಂಡು ಅವಳ ಭಜನೆ ಪ್ರೊಗ್ರಾಂ.

ಮನೆ ಗಂಡಸರು ತಮ್ಮದೇ ಆದ ಭಜನೆಯಲ್ಲಿ ಮುಳುಗಿರುತ್ತಿದ್ದುದರಿಂದ ಅವಳೇ ಆಗ ಹಿರೋಯಿನ್! "ಗಜಮುಖ ಗಣಪ ನಮೊ, ಗಜಾನನ, ಗಜಮುಖ ಗಣಪ ನಮೊ– ಥೂ ಸೊಡ್ಲೆ ಪೋರಾ, ಒದೀತ್ಯಲೊ ಕುನ್ನಿಗೊಡ್ಡೆ. ನಿನ್ನ ಕಾಲು ಮುರದೇ ಹೋಗ್ಲಿ" "ಶ್ರೀ ರಾಮ ಚಂದಿರನೆ ಶ್ರೀ ಲೋಲ ಸುಂದರನೆ ಶ್ರೀಮನ್ನಾರಾಯಣ ರಾಂ ರಾಂ ರಾಂ–ಅಯ್ಯಯ್ಯೊ ಸುಟ್ಟ ಕೂಸೆ, ಚೌಂಟತ್ಯಲೆ ಮಾನಗೇಡಿ, ನಿನ್ನ ಕೈ ಚೊಟ್ಟ ಆಗಿಹೋಗ್ಲಿ." "ಪಾಲೀಸಮ್ಮಾ ಮುದ್ದು ಶಾರದೆ, ಯನ್ನ, ನಾಲಿಗೆಯಲಿ ನಿಲ್ಲಬಾರದೆ, ಯನ್ನ ನಾಲಿಗೆಯಲಿ ನಿಲ್ಲಬಾರದೆ? ಯನ್ನ ನಾಲಿಗೆ....ಅಯ್ಯಯ್ಯೊ ದೇವ್ರೆ! ಎಷ್ಟು ಹೇಳಿದ್ರೂ ನಿಂಗಕ್ಕೆ ತೆಳಿತಿಲ್ಯಲ್ರೊ ಕತ್ತೆಗಳ್ರಾ, ನಿಂಗಳೆಲ್ಲರ್ರೂ ಹುಲಿ ತಿಂದುಹಾಕ್ಲಿ..." ಇದು ಅವಳ ಪ್ರತಿ ನಿತ್ಯದ ಸ್ಟೈಲ್! ಅಂತೂ ಕೊನೇಯಲ್ಲಿ " ರಘುಪತಿ ರಾಘವ ರಾಜಾ ರಾಂ, ಪತೀತ ಪಾವನ ಸೀತಾರಾಂ" ಅನ್ನತೊಡಗಿದಂತೆ ಆ ಮೊಮ್ಮಕ್ಕಳೊ, ಅವರೇನು ಕಡಿಮೆ? " ಅಜ್ಜಿ ಅಜ್ಜಿ, ನಿನ್ನ ಹಾಡು ಕೇಳಿ ಎಮ್ಮೆ ಗೊಡ್ಡು ದಾಬು ಹರಕಂಡು ಬಂದೇ ಬಿಟ್ಟು. ನೋಡು ನೋಡು..." ಅನ್ನುತ್ತ ಓಟ ಕಿತ್ತರೆ ಅಜ್ಜಿಯೂ ಅವರ ಹಿಂದೇ ಓಡಿ ವಸ್ತಿಲು ಎಡವಿ ಬಿದ್ದು, ಮತ್ತಷ್ಟು ಶಾಪ ಹಾಕುತ್ತ ನರಳುತ್ತಿದ್ದಾಗ ಮಗ ಬಂದು ಅವಳಿಗೇ ಬೈಯುತ್ತ ಎತ್ತಿ ಕೂಡ್ರಿಸಿದನೆಂಬಲ್ಲಿಗೆ ಭಜನಾ ಪುರಾಣ ಮಂಗಲಂ.!

## ನಾನೇ ಇನ್ನೂ ಕಲೀಬೇಕಿದೆ....!

ವಿ. ವಿಜಯೇಂದ್ರರಾವ್

ಮಕ್ಕಳಿಲ್ಲವೆಂದು ನಿತ್ಯ ಕೊರಗುವ ಹೆಂಡತಿ, ಕುರುಡು ತಾಯಿಯ ಜೊತೆಗೆ ಬಾಡಿಗೆ ಮನೆಯಲ್ಲಿ ವಾಸಿಸುತ್ತಾ, ಕೈಯಲ್ಲಿ ಕೆಲಸವೂ ಇಲ್ಲದೆ ಕಂಗಾಲಾಗಿದ್ದ ಲಾಯರೊಬ್ಬನ ಅಗಾಧ ತಪಸ್ಸಿಗೆ ಮೆಚ್ಚಿ ಭಗವಂತನು ಪ್ರತ್ಯಕ್ಷವಾಗಿ, ಅವನಿಗೆ ನಿನ್ನ ಒಂದು ಕೋರಿಕೆಯನ್ನು ಮಾತ್ರ ಪೂರೈಸುತ್ತೇನೆ ಎಂದು ಹೇಳಿದಾಗ.......,



ಆ ಲಾಯರ್ – ಸ್ವಾಮಿ, ನನ್ನ ಹೊಸ ಬಂಗಲೆಯ ಗೃಹಪ್ರವೇಶದಂದು ಸೊಸೆಯು ತನ್ನ ಮೊಮ್ಮಗಳ ಕೈಗಳನ್ನು ಬಂಗಾರದ ಬಳೆಗಳಿಂದ ತುಂಬಿಸಿ ಸಂಭ್ರಮಿಸುವುದನ್ನು ನನ್ನ ತಾಯಿಯು ತನ್ನ ಕಣ್ಣಾರೆ ನೋಡಿ ಆನಂದವನ್ನು ಪಡೀಬೇಕು...! ಅಷ್ಟೇ, ಎಂದಾಗ ಭಗವಂತನು ನಾನೇ ಈ ಲಾಯರಿನಿಂದ ಕಲಿಯುವಂತಹ ಪಾಠಬೇಕಾದಷ್ಟಿದೆ ಎಂದು ಕೊಂಡನು...!

ಕೊರವಂಜಿಯಿಂದ

# ವೃಥಾ ಶ್ರಮ

**ಅಕ್ರೂರ**

ಅಯ್ಯೋ ! ಹನ್ನೊಂದು ಗಂಟೆ ಹೊಡೆದು ಹೋಯ್ತಲ್ಲಾ ! ಈ ಹಾಳು ಗಂಟೆ ಹೊಡೆದು, ಮುಂದೆ ಕಾದಿರೋ ಗ್ರಹಚಾರಾನ ನೆನಪು ಮಾಡಿಸ್ತಾ ಇದೆ. ಕೆಲವು ಗಡಿಯಾರಗಳ ಹಾಗೆ ಈ ಗಡಿಯಾರಾನೂ–ನಡೀದೆ, ಹೊಡೆದು ನನ್ನಂತಾವರ್ನ ಗೋಳು ಹೊಯ್ಕೊಳ್ದೆ, ತೆಪ್ಗೆ–ಇರೋಕಾಗೊಲ್ವೆ ? ಹಾಳು ಗಡಿಯಾರಗಳು, ನಡೆದರೂ, ಕಷ್ಟ, ನಡೀದಿದ್ರೂ ಕಷ್ಟ ! ಈ ಹಾಳು ಸ್ನೇಹಿತರು ! ಆ ಗೋಪಾಲ, ಬಲವಂತವಾಗಿ 'ಹನ್ನೊಂದು ಗಂಟೆ'ಗೆ ಕಕ್ಕೊಂಡು ಹೋಗದಿದ್ದರೆ ಮನೇಗೆ ಹೋಗೋಕೆ ಹೀಗೆ 11 ಗಂಟೆ ಆಗ್ತಿತ್ತೆ ? ಫಿಲ್ಮಾದರೂ ಚೆನ್ನಾಗಿರುತ್ತೇಂತಿದ್ದೆ, ಆ ಆಸೇಗೂ ಬಿತ್ತು ಮಣ್ಣು!.... ಇನ್ನು ಇಷ್ಟು ಹೊತ್ತಿನ್ ಮೇಲೆ ಮನೆಗೆ ಹೋದರೆ, ಕಾದಿರ್ತಾಳೆ ಅವಳು! ಕಾದಿರೋದೆಲ್ಲಿ? ಈಗಾಗಲೇ ಊಟ ಮಾಡ್ಬಿಟ್ಟು ಹಾಯಾಗಿ ಮಲಗ್‌ಬಿಟ್ಟಿರ್ತಾಳೆ !....ಅನ್ನ ತೆಗೆದಿಟ್ಟಿರ್ತಾಳೋ ಇಲ್ಲೋ.? ಇವತ್ತು ಊಟಕ್ಕೆ ಸೊನ್ನೆ ಆದರೂ ಆಗ್ಲಿ, ಸಧ್ಯಃ ಅವಳ ಬಾಯಿ–ಈಗ ಸರಳರೇಖೆಯಾಗಿರೋದು–ಸೊನ್ನೆ ಆಗ್ದಿದ್ರೆ ಸಾಕಾಗಿದೆ. ಹಾಗೇನಾದರೂ, ಈಗ ಮುಚ್ಚಿರೋ ಬಾಯ್ನ ಬಿಚ್ಚಿಟ್ಳೋ ಗೊಬೆಲ್ಸಿಗೆ ಇವಳೇ 'ಟ್ಯೂಷನ್' ಹೇಳ್ಕೊಟ್ಳೊ ಅನ್ನಿಸಿಬಿಡತ್ತೆ. ಮಾತಿಗೆ ಶುರುಮಾಡ್ಬಿಟ್ಳು ಅಂದ್ರೆ ಎಂಟುಮನೆ ಆಚೇವರೆಲ್ಲಾ, ತಂತಂ ಹೆಂಡಿರ ಮಾತು ಕೇಳಿದ ಹಾಗೆ, ನಿದ್ದೆ ಕೆಟ್ಟು ಬೆಚ್ಚಿ ಬೆಚ್ಚಿ ಬೀಳ್ತಾರೆ........ ಇನ್ನು, ಇವಳಿಗೆ ಗೊತ್ತಾಗದ ಹಾಗೆ ಮೆತ್ತಗೆ ತಡವರಿಸ್ಕೊಂಡು ಹೋಗಿ ಹಾಸ್ಗೇ ಮೇಲೆ ಬಿದ್ಕೊಳೋಣ ಅಂದ್ರೆ ಕಾಲ್ನಲ್ಲಿ 'ಕಿರ್ರೋ' ಅಂತ ತಿರುಚೋ ಬೂಟ್ಸು ! ಜತೆಗೆ ಅದಕ್ಕೆ ಲಾಳ ಬೇರೆ ಮೇಳ ಕಟ್ಟುತ್ತೆ. ಅದಕ್ಕೇ "ಲಾಳ ಹಾಕ್ಬೇಡ, ಸುಮ್ನೆ ಶಬ್ದ ಮಾಡತ್ತೇಂತ" ಎಷ್ಟು ಬಡ್ಕೊಂಡ್ರೂ ಕೇಳದೆ ಆ ಹಾಳು ಶ್ರೀಪಾದಪ್ಪ ಹಾಕೇಬಿಟ್ಟ !....

ಸರಿ, ಅಂತೂ ಲೇಟಾಗಿದ್ದಾಗೋಯ್ತು ಇನ್ನು ಅಡಿಗೆಮನೆ ಮುಖ ನೋಡ್ದೆ, ಇವತ್ತು 'ಫಳಾರ' ವಿಲ್ಲದೆ ಏಕಾದಶಿ ಅನ್ಕೊಂಡು ಮನೆ ಒಳಗೆ ಹೋಗಿ ಒಂದ್ಕಡೆ ಮಲಕ್ಕೊಂಡ್ರೆ ಬದುಕ್ಕೊಂಡಹಾಗೆ, ಇಲ್ಲಾ, ನಾನು ಇಷ್ಟು ಹೊತ್ತಿನ ಮೇಲೆ ಬರೋದನ್ನ ಅವಳು ಕಂಡ್ಬಿಟ್ಳೋ ನಾಳೆ ಬೆಳಗ್ಗೆ ಆಗೋ ಸಹಸ್ರನಾಮಾರ್ಚನೆ ಎಲ್ಲಾ ಈಗಲೇ ಮಾಡ್ಬಿಡ್ತಾಳೆ ! .......ಮನೆಬಾಗಿಲಿಗೂ ಬಂಧಿದ್ದಾಯ್ತು. ಸಧ್ಯ ನನ್ನ ದೃಷ್ಟಕ್ಕೆ, ವೆರಾಂಡಾದಲ್ಲೇ ಮಲಕ್ಕೊಂಡಿರ್ತಾನೆ ಕಿಟ್ಟು .... ಆದರೆ ಬಾಗಿಲು ತಟ್ಟೋದ್ ಹೇಗೆ ? ತಟ್ಟಿದರೆ ಅವಳೆದ್ಬಿಡ್ತಾಳೆ; ತಟ್ಟದಿದ್ದರೆ ಬಾಗಿಲು ಯಾರೆಗಿಯೋವ್ರು?....ಸರಿ, ಮೆಲ್ಲಗೆ ಕೂಗಿ ನೋಡೋಣ. ಕಿಟ್ಟು!.... ಕಿಟ್ಟು !..ಎದ್ದಿದಾನೆ ಪರವಾಯಿಲ್ಲ..ಇಲ್ಲದೇ ಇದ್ರೆ...ಅವಳೇನಾದ್ರು ಎದ್ದು ಬರ್ತಿದಾಳೋ.... ದೇವ್ರೇ ! ಕಿಟ್ಟೂ...ಬಂದ್ಯಾಪ್ಪ, ಸ್ವಲ್ಪ ಸದ್ದು ಮಾಡ್ದೆ ಬಾಗಿಲು ತೆಗಿ ಏನೋ ಹೀಗ್ಸದ್ಮಾಡ್ತೀ.... ಹೋಗ್ಲಿ, ಹೋಗಿಮಲಕ್ಕೊ, ಹಾಗೂ ಹೀಗೂ ಮಾಡಿ ಒಳಗೆ ಬಂದಿದ್ದಾಯ್ತು. ರೂಮಿಗೆ ಹೋಗಿ ಕೋಟುಬಟ್ಟೆ, ಈ ಹಾಳು ಬೂಟ್ಸು ಎಲ್ಲ ತೆಗೆದಿಟ್ಟಿಟ್ಟು ಮಲಕ್ಕೋಬೇಕು.... ಇನ್ನೂ ಹಾಲ್ ಬೇರೆ ದಾಟಬೇಕಲ್ಲಪ್ಪಾ ! ಅಲ್ಲೇ ಮಲ್ಗಿದ್ದಾಳೆ ಅವಳು !.. ಈ ಹಾಳು ಬೂಟ್ಸು ಬೇರೆ 'ಕೊಯಕ್ ಕೊಯಕ್' ಅಂತ ಕಿರ್‍ಲ್ತಿದೆ.. ಥೂ! ಈ ಕುರ್ಚಿಗಳು ಯಾವ್ದೋ ಒಂದು ತಾಕ್ಬಿಡ್ತು ಕಾಲ್ಗೆ ಬಲ್ವಾಗಿ....ಲೈಟ್ ಹಾಕ್ಕೊಳ್ದೆ ಕತ್ತಲೇಲಿ ಈ ಚಕ್ರವ್ಯೂಹದಲ್ಲಿ ಓಡಾಡಿದರೆ... ಹಾ..ಇದೇನ್ ಬಂತಪ್ಪ ಅನಿಷ್ಟ ! ಇನ್ನೊಂದು ಕುರ್ಚಿ.. ಹಾಳಾ ಗೋಗ್ಲಿ!.... ಅಲ್ಲಾ, ಇಷ್ಟು ಶಬ್ದಮಾಡ್ಬಿಟ್ನಲ್ಲಾ ! ಅವಳಿಗೇನಾದರೂ ಕೇಳಿಸಿ ಗೀಳಿಸಿ...ಎದ್ದುಗಿದ್ದು ಬಂದ್ಬಿಟ್ರೆ....ನನ್ನ ಗತಿ....ಇನ್ನೂ ಬದುಕಿಲ್ಲಬಡಜೀವ....ಅಗೋ, ಇನ್ನೊಂದು ಸದ್ದು!. ಹಾಲ್‌ನಿಂದ ಬರ್ತಾ ಇದೆ... ಸಧ್ಯ, ಇಷ್ಟೇ ತಾನೆ ?........ ಈ ಪ್ರಾರಬ್ಧ ಇಲಿಗಳು !...

ಸುಮ್ಮನೆ ಇಲ್ಲಸಲ್ಲದ ಗಾಬರಿ ಹುಟ್ಟಿಸುತ್ವೆ....ಇನ್ನೇನು ? ರೂಂಗೂ ಸುರಕ್ಷಿತವಾಗಿ ಬಂದು ಸೇರಿದ್ದಾಯಿತು....ಕೋಟು ಬಟ್ಟೆ ಎಲ್ಲಾ ತೆಗೆದಿಟ್ಟಾಯಿತು ಬೆವರ್ನ ಒರ್ಸ್‌ಕೊಂಡಾಯಿತು ಹೊಟ್ಟೆ ಹಸಿತಾ ಇದೆಯಲ್ಲಾ....... ಹೀಗೇಂತ ಗೊತ್ತಿದ್ರೆ ಹೋಗೋವಾಗಲೇ ಎರಡು ಚಪಾತಿ ಗಿಟ್ಟಿಸಬಹುದಾಗಿತ್ತು. ಇನ್ನೇನು ? ಹಣೆಬರಹ.... 'ಹೊಟ್ಟೆಬರಹ ! ಹಸ್ಕೊಂಡೇ ಮಲಕ್ಕೋಬೇಕು. ಇಷ್ಟೆಲ್ಲಾ ಆ ಸಿನಿಮಾದಿಂದ ಆ ಗೋಪಾಲ್ನಿಂದ ... ಆ.......ಅವಳಿಂದ ! ಅದು ಹೋಗ್ಲಿಂದ್ರೆ, ಇವತ್ಯಾಕೋ ನಿದ್ರೇನೇ ಬಾರ್ತಾ ಇಲ್ಲ .... ಹೊಟ್ಟೆ ತಾಳ ಹಾಕೋ ಗಲಾಟೇಲೋ ?... ಇಲ್ವೆ, ಅವಳ ಭಯದಿಂದೇನಾದರೂ..... ಛೇ ...... ಛೇ ..... –ನಾನು ಮೀಸೆ ಹೊತ್ತ ಗಂಡಸಲ್ವೆ ?...... ಅಲ್ಲಾ, ಇವತ್ತೇನು–ಆಶ್ಚರವಾಗಿದೆ ! ಆವತ್ತು ಈವತ್ತಿನ ಹಾಗೇ ರಾತ್ರಿ ಹೊತ್ತು ಕಳೆದು ಬಂದಾಗ... ಬೂಟ್ಸೂ ಹಾಕಿಕೊಂಡಿರಲಿಲ್ಲ.......ಸ್ವಲ್ಪಾನ ಸದ್ದುಮಾಡಲಿಲ್ಲ....ಆದ್ರೂ ಎದ್ದು ಬಂದು ತರಾಟೇಗೆ ತಗೊಂಬಿಟ್ಟಿದ್ಳು ! ಇವತ್ತೇ ನೂಂದ್ರೆ... ಬೂಟ್ಸು ಹಾಕ್ಕೊಂಡಿದ್ದೀನಿ, ಕುರ್ಚಿಗೆ ಕಾಲು ತಗಲಿಸಿಕೊಂಡಿದೀನಿ.... ಆದ್ರೂ ಏಳ್ಲೇ ಇಲ್ವಲ್ಲ ಮಹರಾಯಿತಿ !.... ಆದರೇನು, ಈಗ ರಂಪಮಾಡ್ಡಿದ್ರೂನೂ ನಾಳೆ ಬೆಳಗ್ಗೇನಾದರೂ ಮಾಡೇ ಮಾಡ್ತಾಳೆ.... ಅದೂ ಅಲ್ದೆ ದಿನಾಗಲೂ ಅವಳು ಹಾಲ್ನಲ್ಲಿ ಹೊಡೀತಿದ್ ಗೊರ್ಕೆ ಇಲ್ಲೀಗ್ ಕೇಳಿಸ್ತಿತ್ತು ನಿದ್ರೇನೇ ಬರದೆ ಕಿವಿಗೆ ಬೆರಳು ತುರುಕ್ಕೋಬೇಕಾಗಿತ್ತು ! ಇವತ್ತೇನು ಕೇಳಿಸ್ತಾನೇ ಇಲ್ವಲ್ಲಾ !... ಏನಾದರೂ. ಓ..... ಹೋ....ನನ್ನ ಗಾಬರೀಲಿ ಮರತೇ ಹೋಯ್ತು ! ಮೊದ್ಲೇ ಜ್ಞಾಪಕಕ್ಕೆ ಬಂದಿದ್ರೆ... ಹಾ. ಈ ಕಾಲುನೋವ್ನೂ, ಹೊಟ್ಟೆ ಡಮಾರಾನೂ ಬರ್ತಾನೆ ಇರ್ಲಿಲ್ವಲ್ಲಾ.... ಹಾಳು ಮರೆವು !.... ನಿನ್ನೆ ತಾನೆ, ಹಠಮಾಡ್ಕೊಂಡು ತೌರೂರಿಗೆ ಹೋದ್ಲೂಂತ ನನಗೆ ಜ್ಞಾಪಕಕ್ಕೆ ಬರಬೇಡವೆ ? ಹುಂ....ಇರ್ಲಿ.... ಸುಮ್ಸುಮ್ನೆ ಶ್ರಮಪಟ್ಟೆ.... ಆೕೕಹ್........ಈಗ್ಯಾಕೋ ಏನೋ ಜೋರಾಗಿ ನಿದ್ರೆಬರ್ತಾ ಇದೆ.

## ಡಾಕ್ಟರ್ ವರ

**ಸುಮನ**

ಈಚೆಗಷ್ಟೇ ಮದುವೆಯಾಗಲು ನಿರ್ಧರಿಸಿದ ನೀತಾ ಮೆಟ್ರಿಮೋನಿ ಒಂದಕ್ಕೆ ರಿಜಿಸ್ಟರ್ ಮಾಡಿದಳು. ಅಲ್ಲಿಂದ ಒಬ್ಬ ಅಸಿಸ್ಟೆಂಟ್ ಗೀತ ಎನ್ನುವವಳು ಕರೆಮಾಡಿ ಮದುವೆಯಾಗುವ ಹುಡುಗಿ ಸ್ಪೆಸಿಫಿಕೇಷನ್ ಕೇಳಿದಾಗ ಡಾಕ್ಟರ್ ವರ ಬೇಕೆಂದು ಸೂಚಿಸಿದಳು. ಕೆಲವೇ ಕ್ಷಣಗಳಲ್ಲಿ ಒಬ್ಬ ವರನ ಬಗ್ಗೆ ವಿವರಗಳು ಬಂದವು. ವರ ಶ್ರೋತ್ರಿಯನಾಗಿದ್ದ, ಸಂಪ್ರದಾಯಸ್ಥ ಉಡುಪು ಧರಿಸಿದ್ದ. ಸಂಸ್ಕೃತಿ ಆಚರಣೆ ಮಾಡುವ ಕುಟುಂಬದ ವರ ಡಾಕ್ಟರ್ ಎಂದು ತಿಳಿಸಿದರು. ವನಿತ ಬಹಳ ಕುತೂಹಲದಿಂದ ವಿವರವಾಗಿ ನೋಡಿದಾಗ ಡಾಕ್ಟರ್ ಇನ್ ಫಿಲಾಸಫಿ ಅಂತ ಇತ್ತು. ಗೀತ ಮತ್ತೆ ಮೆಟ್ರಿಮೋನಿಗೆ ಫೋನ್ ಮಾಡಿ ಅಯ್ಯೋ ನಾನು ಕೇಳಿದ್ದು ಎಂ.ಬಿ.ಬಿ.ಎಸ್ ಡಾಕ್ಟರ್. ನಿಮಗೆ ವಿವರ ಕಳಿಸುವಾಗ ತಪ್ಪಾಗಿತ್ತು ಅಂತ ಹೇಳಿದಳು. ಆದರೆ ಇದನ್ನು ಕೇಳಿ ಗೀತ ನೀತ ಇಬ್ಬರೂ ಮನಸಾರೆ ನಕ್ಕರು.